೨೫ ವರ್ಷದ ಅನುಭವದಿಂದ ತಯಾರಿಸಿದೆ.	೧೮೯೦ರಲ್ಲಿ ಕಂಪನಿ ಸ್ಥಾಪಿಸಿದೆ. ಸತ್ಯಮೇವ ಜಯತೆ (ಗುಣಬಾರದಿದ್ದರೆ ಹಣ ಪರತ)	ನಮ್ಮ ಔಷಧವನ್ನು ಉಪಯೋಗಿಸಿ ಗುಣಹೊಂದಿ ಯೋಗ್ಯತಾಪತ್ರಗಳು ಬಂದಿವೆ.

ಉತ್ತಮ ಗುಣಕಾರಿಯಾದ ರಾಮಬಾಣ ಔಷಧಗಳು.

೧ ಮದನೋದ್ಭವ ಗುಳಿಗೆ— ಇದು ಸರ್ವ ಮೇಹರೋಗಗಳನ್ನು ಗುಣಪಡಿಸಿ [illegible] ಸಂಪೂರ್ಣ ಶಕ್ತಿಯನ್ನುಂಟುಮಾಡುತ್ತದೆ; ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦ ಇದರ ಸಂಗಡ ಸಪ್ತಾಪಕತಪ್ಪಿರಿ ತೈಲವನ್ನು ಉಪಯೋಗಿಸಿದರೆ ಉತ್ತಮ, ಕಿಮ್ಮತ್ತು ಬಾಟ್ಲಿ ೧ ಕ್ಕೆ ೩-೮-೦

[illegible] ಪ್ರಮೇಹ ನಿವಾರಿಣಿ— ಇದರಿಂದ ಸರ್ವ ಪ್ರಕಾರದ ಪ್ರಮೇಹ (ಪರಮಾ ಗರ್ಮಿ) ರೋಗ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ೩-೧೭-೦

೩ ಧಾತುಪೌಷ್ಟಿಕ ಲೇಹವು— ಇದು ಸರ್ವಪ್ರಕಾರದ ಧಾತುನಷ್ಟ, ಇಂದ್ರಿಯ ಶಿಥಿಲತೆ, ನಪುಂಸಕತ್ವ ಇವನ್ನು ಗುಣಪಡಿಸುವದು. ಕಿಮ್ಮತ್ತು ೮೦ ತೋಲಿಗೆ ೬-೦ ೦

೪ ವ್ರಣ ನಾಶಕ ಮುಲಮು— ಇದು ಸರ್ವ ಹುಣ್ಣು, ಟಾಕಿ, ಭಗಂದರ ಇವನ್ನು ಉತ್ತಮರೀತಿಯಿಂದ ಗುಣಪಡಿಸುವದು ಕಿಮ್ಮತ್ತು ಡಬ್ಬಿ ೧ಕ್ಕೆ ೧-೮-೦

೫ ಗಜಕರ್ಣದ ಮುಲಮು ಡಬ್ಬಿ ೧ಕ್ಕೆ ೩-೪-೦ ಬಿಬ್ಬೆ ಮುಲಮು ಡಬ್ಬಿ ೧ಕ್ಕೆ ೧-೮-೦ ಸುಗಂಧಿ ಮಲ್ಲಿಗೆ ಪುಡಿ ೧೨ ಡಬ್ಬಿಗೆ ೩-೬-೦

ಇವುಗಳ ಕಿಮ್ಮತ್ತಿನ ಶಿವಾಯ ಟಿ. ಬಿ. ಬೇರೆ, ಅನುಪಾನ ಪತ್ರಿಕೆ ಔಷಧದ ಸಂಗಡ ೦-೧-೦ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗ ಪುಕಟ.

ನಮ್ಮ ವಿಳಾಸ:— ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ, ಪೋ. ಬನವಾಸಿ
ಉತ್ತರಕಾನಡಾ.

ಕುಲಕರ್ಣಿ ಸನ್ಸಕಂಪನಿ, ಧಾರವಾಡ ಇವರ ವತನದಾರ ರೆಂಟಿಗೆಗಳು



ಈ ರಂಟಿಯ ಶ್ರೇಷ್ಠ ಗುಣಗಳೆಂದರೆ:—

[illegible] ಸಾವನಾನುಗಳು ಮುಟ್ಟಿತ ಇದ್ದು ಎತ್ತಿಗೆ ಅತಿ ಹಗರಾದವು.

[illegible] ಹಾಲೆಯೊಳಗೆ ಹಿಂಬಗಳು ಬೀಳದೆ ಇರುವದರಿಂದ ಎತ್ತಿನ ಕಾಲಿಗೆ ಎಷ್ಟು ಇಜಾ ಆಗುವದಿಲ್ಲ.

[illegible] ರೆಂಟಿಯು ಎಷ್ಟು ಹೂಯ್ದಾಡುವದಿಲ್ಲ. [illegible] ಇನು ದೊಂಕಾಗಿದ್ದು ಅದಕ್ಕೂ ಮತ್ತು ಕುಳಕ್ಕೂ ನಡವೆ [illegible] ಅಂತರವಿರುವದರಿಂದ ನಡೆಯೊಳಗೆ [illegible] ಸಿಗುವದಿಲ್ಲ.

[illegible] ಹೊಲಗಳಿಗೆ [illegible] ಆಕೃತಿಯ ಪ್ರಕಾರದ ರೆಂಟಿಗೆಗಳುಂಟು. ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ ತಿಳಿಸಬೇಕು.

೧-೧-೨೫ ಕುಲಕರ್ಣಿ ಸನ್ಸ ಕಂಪನಿ ಶಿಟ್ಟೆ ಧಾರವಾಡ

ಶ್ರೀ ಧೂತಪಾಪೇಶ್ವರ ಆಯುರ್ವೇದೌಷಧಾಲಯ ಪನವೇಲ.

[illegible] ಕಾರಖಾನೆಯಲ್ಲಿ ಶಾಸ್ತ್ರೋಕ್ತ ತಯಾರಿಸಲ್ಪಟ್ಟ ಜಗತ್ಪ್ರಸಿದ್ಧವಾದ ಎಲ್ಲ ಬಗೆಯ ಔಷಧಗಳು ನಮ್ಮಲ್ಲಿ ದೊರೆಯುತ್ತವೆ. [illegible] ಲೋಕಪ್ರಸಿದ್ಧವಾಗಿರುವ ಔಷಧ [illegible] ನಮ್ಮಲ್ಲಿ ಸಹಸ್ರಪುಟ ಅಭ್ರಕ, ತಾಮ್ರ ಮುಂತಾದ ಭಸ್ಮಗಳೂ, [illegible] ಗುಳಿಗೆಗಳೂ, [illegible], ಆಸವಾರಿಷ್ಟಗಳೂ; ಸತ್ವ, [illegible], ಘೃತ, ತೈಲಗಳೂ, ಮುಲಾಮು ಅಕರ್ಕಗಳೂ; ಔಷಧಿಯುಕ್ತ [illegible], ಗುಳಂಬಗಳೂ, [illegible] ಮತ್ತು ತಯಾರ (ಪೇಟೆಂಟ) ಔಷಧಗಳೂ ದೊರೆಯುವವು. [illegible]

[illegible]

ಎನ್ ಎಸ್ [illegible] ಧಾರವಾಡ.

[illegible]

ಅಲಲಾ ಮಾತು ತಪ್ಪಿತು!

[illegible]

[illegible]

ಲೋಕನಾಥ [illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ—

ಸ್ಥಾಪನಾದ ಪೇಳೆ [illegible]

[illegible] ವ್ಯವಹಾರಗಳು.

[illegible]

ಸುರಕ್ಷಿತರು ಸಲುವಾಗಿ [illegible]

ರಾ. ೨೫ [illegible]

ದಿ ಪೂನಾ ಬ್ಯಾಂಕ ಲಿಮಿಟೆಡ್ ಹ್ಯಾಂಡ ಆಫೀಸ ಹುಬ್ಬಳ್ಳಿ ಶಾಖೆ.

ಸೇವಿಂಗ್ಸ ಬ್ಯಾಂಕ [illegible]

ಚಾಲೂ ಖಾತೆ— [illegible] ಮೇಲೆ ಬಡ್ಡಿ ಕೊಡಲ್ಪಡುವದು [illegible]

ಮುದತಿ ಠೇವು— [illegible]

ಸಾಲ [illegible]

[illegible]

ಮ್ಯಾನೇಜರ [illegible]

ಬ್ಯಾಂಕಿಂಗ ಧಂದೆಯು [illegible]

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ

ಮೊಟ್ಟಿಬಜಾರ ಧಾರವಾಡ.

ಚಾಲ್ತು ಖಾತೆಗಳು:— [illegible]

ಸೇವಿಂಗ್ಸ ಬ್ಯಾಂಕ:— ಒಂದೇ ರೂಪಾಯಿಯಿಂದ ಖಾತೆಯನ್ನು ಪ್ರಾರಂಭಿಸಬಹುದು. [illegible] ೧೦೦ಕ್ಕೆ ವರ್ಷಕ್ಕೆ [illegible]

ಮುದ್ದತಿ ಠೇವುಗಳು:— [illegible]

ಇತರ ಕಾರ್ಯಗಳು:— [illegible]

[illegible]

ಮೆನೇಜಿಂಗ ಏಜಂಟ.

ಮಹಾತ್ಮರ ಬಂಧವಿಮುಕ್ತಿಯ ವಿಚಿತ್ರ ವಿಚಾರಗಳು!!

ಲಾರ್ಡ ರೀಡಿಂಗ ಸಾಹೇಬರು ಲೆಜಿಸಲೇಟಿವ್ಹ ಅಸೆಂಬ್ಲಿಯಲ್ಲಿ ಭಾಷಣಮಾಡುವಾಗ ಮಹಾತ್ಮರನ್ನು ಬಂಧಮುಕ್ತ ಮಾಡಿದಂತೆ ಜಾಹೀರ ಮಾಡುವರೆಂದು ಇಡೀ ಹಿಂದುಸ್ಥಾನವು ನಿರೀಕ್ಷಿಸುತ್ತಿತ್ತು. ಆದರೆ ಈ ಆಶೆಯು ವಿಫಲವಾಯಿತು. ಲೆಜಿಸಲೇಟಿವ್ಹ ಅಸೆಂಬ್ಲಿಯಲ್ಲಿ ಬರುವ ಮತ್ತು ಅಲ್ಲಿ ಪಾಸಾಗುವ ಠರಾವಿನ ಮೇಲೆ ಇವರ ಬಿಡುಗಡೆಯು ಅವಲಂಬಿಸಿರುತ್ತದೆ. ಆದರೆ ಇದಕ್ಕೂ ಮೊದಲು ಇದೇ ಸಂಬಂಧವಾಗಿ ಒಂದು ಠರಾವನ್ನು ಕೌನ್ಸಿಲ ಆಫ ಸ್ಟೇಟದಲ್ಲಿ ಸಾತಾರೆಯ ಶ್ರೀ. ದಾದಾಸಾಹೇಬ ಕರಂದೀಕರರು ತರತಕ್ಕವರಿದ್ದಾರೆ. ಕೌನ್ಸಿಲ ಆಫ ಸ್ಟೇಟವೆಂದರೆ ಅಗರ್ಭ ಶ್ರೀಮಂತರ ಸಭೆಯು. ವಿಲಾಯಿತಿಯ ಲಾರ್ಡರ ಅಂಶವು. ಈ ಸಭೆಯಲ್ಲಿ ಅಸಹಕಾರ ಪುರಸ್ಕರ್ತರಾದ ಮಹಾತ್ಮರ ಬಿಡುಗಡೆಯ ಬಗ್ಗೆ ಬಹುಮತವಾಗುವದು ಶಕ್ಯವೇ ಇಲ್ಲ. ಆದ್ದರಿಂದ ಈ ಠರಾವನ್ನು ಸ್ಟೇಟ ಸಭೆಯ ಮುಂದೆ ತರಬಾರದೆಂದು ಇವರಿಗೆ ಸ್ವರಾಜ್ಯ ಪಕ್ಷದ ಮೆಂಬರರು ದುಂಬಾಲಬಿದ್ದಿರುತ್ತಾರೆ. ಈ ಸಭೆಯಲ್ಲಾಗುವ ಠರಾವಿನ ಪರಿಣಾಮವೇನಾಗುವದೆಂಬುದನ್ನು ನಾನು ಬಲ್ಲೆನು. ಆದರೂ ನನ್ನ ಠರಾವು ರಹಿತವಾಗತಕ್ಕದ್ದಲ್ಲೆಂದು ಇವರು ಆಗ್ರಹಪಟ್ಟಿರುವರಿಲ್ಲ.

ಇವರ ಆಗ್ರಹವು ಹಟಮಾರಿತನದಲ್ಲಿ ಪರಿಣಮಿಸಿದೆ. ಇದರ ತರುವಾಯ ಇನ್ನೊಂದು ವಿಚಿತ್ರ ಕೃತ್ಯವನ್ನು ವರ್ಹಾಡದ ದಾದಾಸಾಹೇಬ ಖಾಪರ್ಡೆಯವರು ಆಚರಿಸಿದ್ದಾರೆ. ಇವರು ಶ್ರೀ. ಕರಂದೀಕರರ ಠರಾವಿಗೆ "ಮಹಾತ್ಮರನ್ನು ತಿರಿಗಿ ತುರುಂಗಕ್ಕೆ ಕಳಿಸಬೇಕು. ಅವರ ಪ್ರಕೃತಿಯು ಕೆಡುತ್ತದೆಂದು ಇವರ ಆರೈಕೆ ಮಾಡುತ್ತಿರುವ ಡಾಕ್ಟರರ ಅಭಿಪ್ರಾಯವಾದರೆ ಅವರನ್ನು ಬಂಧಮುಕ್ತ ಮಾಡಬೇಕೆಂಬದಾಗಿ" ಉಪಸೂಚನೆಯನ್ನು ತರತಕ್ಕವರಿದ್ದಾರೆ. ಯಾವದೆಂದು [illegible], ಮಹಾತ್ಮರನ್ನು ಬಂಧಮುಕ್ತ ಮಾಡಬೇಕೆಂದು ಲೆಜಿಸಲೇಟಿವ್ಹ ಅಸೆಂಬ್ಲಿಯಲ್ಲಿ ಒಬ್ಬರಮೇಲೊಬ್ಬರು ಓಡಿಯಿಂದ ಠರಾವು ತಂದಿರುವಾಗ, ಶ್ರೀ. ದಾದಾಸಾಹೇಬ ಖಾಪರ್ಡೆಯವರು ತರುವ ಮೇಲಿನ ವಿಚಿತ್ರ ಉಪಸೂಚನೆಯನ್ನು ನೋಡಿ ಯಾರಿಗಾದರೂ ವಿಷಾದವೆನಿಸದಿರದು.

ಈ ಸಂಗತಿಯನ್ನು ಬರೆದ ನಂತರ ಶ್ರೀ. ಕರಂದೀಕರರು ತಮ್ಮ ಠರಾವನ್ನು ರಹಿತಪಡಿಸಿಕೊಂಡರೆಂದು ತಾರು ಬಂದಿದೆ

ಬುದ್ಧಿವಂತನು ಬಲವಂತನಲ್ಲ

—o—

ಬಲವಂತನೇ ಬುದ್ಧಿವಂತನು.

ತಂಜಾವರದ ದೇಸಾಯಿ- ದೇಶಪಾಂಡೆಯರು ಸರಕಾರದ ಹಪ್ತೆಯನ್ನು ಕೊಡಬಾರದೆಂದು ಸತ್ಯಾಗ್ರಹ ಮಾಡಿದ್ದರಿಂದ, ಸರಕಾರದವರು ಕಣ್ಣು ತೆರೆದು, ಅಲ್ಲಿಯ ಸ್ಥಿತಿಯ ಅವಲೋಕನ ಮಾಡಿಕೊಳ್ಳುವ ಉದ್ದೇಶದಿಂದ ಕೌನ್ಸಿಲರರಾದ ಮೆ. ನ್ಯಾಪ ಸಾಹೇಬರನ್ನು ಕಳಿಸಿದರು. ಈ ಸಾಹೇಬರು ತಂಜಾವರಕ್ಕೆ ಹೋಗಿ, ಪ್ರಮುಖ ಜಮೀನದಾರರನ್ನು ಕರಿಸಿಕೊಂಡು, ಅವರ ಕೂಡ ವರ್ತಮಾನ ಪರಿಸ್ಥಿತಿಯನ್ನು ಕುರಿತು ಸಂಭಾಷಣೆ ಮಾಡಿ, ಜಮೀನದಾರರ ಆಕ್ಷೇಪಣೆಗಳು ನಿಜವಾಗಿರುತ್ತವೆಂದು ಮನಗಂಡ. ಗವ್ಹರ್ನರ ಸಾಹೇಬರು ನಿಮ್ಮ ಪೆಟೀಶನ [illegible] ವರು, ಆ ಪರ್ಯಂತರ ಹಪ್ತೆ ಕೊಡಬಾರದೆಂಬ ಕಾಯದೆ ಭಂಗವನ್ನು ತಹಕೂಬ ಮಾಡಿರೆಂದು ಆಗ್ರಹಪೂರ್ವಕವಾಗಿ ಹೇಳಿಕೊಳ್ಳಲು, ಜಮೀನದಾರರು ಇವರ ಬಿನ್ನಹದ ಪ್ರಕಾರ ಗವ್ಹರ್ನರ ಸಾಹೇಬರ ಭಾವ ತಿಳಿಯುವ ತನಕ, ಹಪ್ತೆ ಕೊಡಬಾರದೆಂಬ ಕಾಯದೆ ಭಂಗವನ್ನು ವ್ಯವಸ್ಥಾನದಲ್ಲಿಡಬೇಕೆಂದು ನಿರ್ಣಯ ಮಾಡಿದ್ದಾರೆ. ಈ ಬಗ್ಗೆ ವಿಚಾರ ಮಾಡುವದಕ್ಕಾಗಿ ಕೂಡಿದ [illegible] ಸಭೆಯಲ್ಲಿ ಈಗಿನ ಠರಾವು ಕಳಕೊಳ್ಳಬಾರದೆಂದು ಕೆಲ ಒಬ್ಬರು ವಾದಿಸಿದರು. ಆದರೂ ಬಹು ಮತದಿಂದ ವ್ಯವಸ್ಥಾನದಲ್ಲಿಡಬೇಕೆಂಬ ಠರಾವು ಪಾಸಾಯಿತು.

ತಂಜಾವರ ಜಿಲ್ಲೆಯ ಜಮೀನದಾರರು ನಮ್ಮ ಕೊಡುವ [illegible] ಆ ಜರಾವೆಯು ಬೇರೆ ಜಿಲ್ಲೆಗಳ [illegible], ಇನ್ನಾದರೂ ತಮ್ಮ ಜಿಲ್ಲೆಗಳ [illegible] ಯನ್ನು ರದ್ದು ಪಡಿಸಿಕೊಳ್ಳಬೇಕೆಂಬ [illegible] ಪ್ರಾರಂಭ [illegible] ವ್ಯಕ್ತವಾಗುವ ಚಿನ್ಹಗಳು ತೋರುವವು. ಮದ್ರಾಸ ಇಲಾಖೆಯು [illegible] ಹಪ್ತೆಯು [illegible] ಗೆಯು [illegible] ವೆಂದು ಸರಕಾರದವರು [illegible] ರಾದರೆಂದು [illegible] ವಾಗಿ ಊಹಿಸಬಹುದು. ಈ [illegible] ರವು ಹೇಗೇ ಇರಲಿ, ಗವ್ಹರ್ನರ ಸಾಹೇಬರವರು [illegible] ಬೇಶನವನ್ನು ಆದರದಿಂದ ಬರಮಾಡಿಕೊಳ್ಳುವದು [illegible] ದ್ದಿವಂತನು ಬಲವಂತನೆನಿಸಿದಿದೆ, ಬಲವ [illegible] ವಂತನೆಂದು ಧ್ವನಿತವಾಗುತ್ತದೆ. ಮದ್ರಾಸ ಸರಕಾರದವರು ತಾವೇ ಕೇಳದವರ, ಕೈಕಲು [illegible] ಕ್ಯವದರಲ್ಲಿ ಕಷ್ಟವಿಲ್ಲವೆಂದಿಲ್ಲೆಂದು [illegible] ಒಂದ ಪ್ಪರ ವಿರುದ್ಧ ಸಂಘಶಕ್ತಿಯು [illegible] ಸವಿಯ [illegible] ದು ಪ್ರತ್ಯಕ್ಷ [illegible] ಇದು ನಾನ [illegible] ಸಾಮರ್ಥ್ಯದ ಫಲವು

ರಾಜ್ಯಕರ್ತರಿಗೆ ಬಿಕ್ಕಟ್ಟಿನ ವಿಚಾರಬಂತು!!

—o—

ಬಂಗಾಲದಲ್ಲಿ ಸ್ವರಾಜ್ಯಪಕ್ಷೀಯರೇ ಕೌನ್ಸಿಲದ ಪ್ರವರ್ತಕ ಮತ್ತು ಚಾಲಕರಾಗುವರೆಂದು ಕಂಡು, ಇವರಿಗೆ ಕೌನ್ಸಿಲದ ಪ್ರಾರಂಭದ ದಿವಸ ಗವ್ಹರ್ನರರು ನಾಲ್ಕು ಉಪದೇಶಗಳನ್ನು ಹೇಳಿ, ಕೌನ್ಸಿಲಗಳನ್ನು ಮುರಿಯದೆ ಅವುಗಳ ಲಾಭ ಪಡಕೊಳ್ಳಬೇಕೆಂದರು. ಈ ಉಪದೇಶವು ಅವರ ದೃಷ್ಟಿಯಿಂದ ಬೋರ್ಗಲ್ಲಿನಮೇಲೆ ಮಳೆ ಸುರಿದಂತಾಯಿತು. ಕೌನ್ಸಿಲದಲ್ಲಿ ತಮ್ಮ ಭಾಷಣವು ಕವಡಿ ಬೆಲೆ ಬಾಳಲಾರದೆಂದು ಗೊತ್ತಿದ್ದರೂ, ಸಾಹೇಬರು ಉಪದೇಶ ಮಾಡಲಿಕ್ಕೆ ಹೋದದ್ದೇ ತಪ್ಪು. ಮೇಲಾಗಿ ದೊಡ್ಡದೊಡ್ಡ ಕಾಮದಾರರಾಗಿ, ಸರಕಾರದ ಮಾಯಿಂದ ಅಸಹಕಾರ ಚಳವಳಿಯ ಸಂಬಂಧವನ್ನು ಕೊಲೆಗೆ ಹಚ್ಚುವದು ಮತ್ತಿಷ್ಟು ದಡ್ಡತನವು. ಅಸಹಕಾರದ ಮುಖ್ಯ ಧ್ಯೇಯವು ಅಹಿಂಸೆಯುದಾಗಿರುತ್ತದೆಂದು ಜಗತ್ತೇ ಪ್ರತಿಧ್ವನಿಗೊಡುತ್ತಿದ್ದರೂ, ಸರಕಾರವು ಬಾದರಾಯಣ ಸಂಬಂಧ ಹಚ್ಚಿ, ಕೊಲೆಯ ಪಾಪವನ್ನು ಅಸಹಕಾರದ ತಲೆಯ ಮೇಲಿಡುವದನ್ನು ಕಂಡು ಎಂದೂ ಸುಮ್ಮನೆ ಕೂಡ್ರಲಾರರು. ಇವರು ಆಗಿಂದಾಗ ಖಂಡತುಂಡಿನ ಉತ್ತರ ಕೊಟ್ಟು ಅಧಿಕಾರಿಗಳ ಬಾಯಿ ಬಂದು ಮಾಡಿಸಿದರು.

ರಾಜಕೀಯ ಕೈದಿಗಳನ್ನು ಒಂದು ವಾರದೊಳಗಾಗಿ ಬಂಧಮುಕ್ತಮಾಡಬೇಕೆಂಬ ಠರಾವು ೭೬ ಅನುಕೂಲ ೪೫ ಪ್ರತಿಕೂಲ ಮತಗಳಿಂದ ಪಾಸಾಯಿತು. ಇದು ಸ್ವರಾಜ್ಯ ಪಕ್ಷೀಯರ ಸಾಮಾನ್ಯವಾದ ಜಯವಲ್ಲ. ನಾಗಪೂರಿನ ನಂತರ ಎರಡನೇ ದೊಡ್ಡ ಜಯವು. ನಾಗಪೂರ ಸರಕಾರವು ಬಿದ್ದಂಥ ಬಿಕ್ಕಟ್ಟಿನಲ್ಲಿಯೇ ಬಂಗಾಲ ಸರಕಾರವೂ ಬಿತ್ತು. ಕೌನ್ಸಿಲಗಳಲ್ಲಾದ ಠರಾವಿನಂತೆ ಇವರು ರಾಜ್ಯಕಾರಭಾರ ನಡಿಸಬೇಕು, ಇಲ್ಲವೆ ಕೌನ್ಸಿಲಗಳನ್ನು ಮುರಿದು ಪಾಶವಬಲಕ್ಕೆ ದೊರೆತನ ಮಾಡಬೇಕು ಎಂಬ ವಿಚಾರಮಾಡುವ ಹೊತ್ತು ಬಂದೊದಗಿದೆ

ಇಲಾಖೆ ಸರಕಾರಗಳಂತೆ ಹಿಂದುಸ್ಥಾನ ಸರಕಾರವೂ ಇಕ್ಕಟ್ಟಿನಲ್ಲಿ ಬರುವ ದಿವಸಗಳು ತೀರ ಸನಿಯಕ್ಕೆ ಬಂದಿವೆ. ಲೆಜಿಸಲೇಟಿವ್ಹ ಅಸೆಂಬ್ಲಿಯಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ಬಹುಮತವಿರುತ್ತದೆ. ಅಲ್ಹಾಬಾದದಲ್ಲಿ ತ್ರಿವೇಣಿ ಸಂಗಮದಲ್ಲಿ ಸತ್ಯಾಗ್ರಹ ಮಾಡಿದ ಪಂಡಿತ ಮಾಲವಿಯಾಯವರು ಸ್ವರಾಜ್ಯ ಪಕ್ಷೀಯರನ್ನು ಒಡೆದು ಹೋಗುವಂಥ ಅವಿಚಾರ ಮಾಡಲಾರರೆಂಬದಕ್ಕೆ ಜೋಡಿಸಿದಾಗಿ ಸಂಘಟಿಸಿದ ಮೇಲಿನ ಸಂಗತಿಯು ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ. ಲೆಜಿಸಲೇಟಿವ್ಹ ಅಸೆಂಬ್ಲಿಯು ಪ್ರಾರಂಭವಾಗಿದೆ. ಅಲ್ಲಾಗುವ ಚಳವಳಿಯು ಮೊದಲನೇ ಸಲ ಮಿಯು ಫೆಬ್ರುವರಿ ತಿಂಗಳ ೫ ನೇ ತಾರೀಖಿಗೆ ಪ್ರಾರಂಭವಾಗುವದು.

ಹಿಂದುಸ್ಥಾನಕ್ಕೆ ಸ್ವಯಂನಿರ್ಣಯ ತತ್ವದ ಪ್ರಕಾರ ಸ್ವರಾಜ್ಯಾಧಿಕಾರವನ್ನು ಕೊಟ್ಟರೆ- ಲ್ಯಾಂಕಶಾಯರದ ಗಿರಣಿಗಳಿಗೆ ದಾಳಿ ಬರುವದು; ಸಿವ್ಹಿಲ ಸರ್ವಂಟರೆಲ್ಲರು ಗುಡಚೀಲ ಕಟ್ಟಬೇಕಾಗುವದು, ಮೇಲಾಗಿ ಹಿಂದೂ ಮುಸಲಮಾನರೊಳಗೆ ದಂಗೆಗಳಾಗುವವೆಂದು ಇಂಗ್ಲಂಡದ ವರ್ತಮಾನಪತ್ರಗಳು ಕೂಗಿವೆ. ಈ ಕೂಗಿಗನುಸರಿಸಿ, ದಿಲ್ಲಿಯಲ್ಲಿ ಲಾರ್ಡ ರೀಡಿಂಗ ಸಾಹೇಬರ ಭಾಷಣವಾಗಿರುತ್ತದೆಂದು ಹೇಳಬಹುದು.

ವಿಜಯವನ್ನು ಏಕೆ ಅಕ್ಕರತೆಯಿಂದ ಓದಬೇಕು

ದಿಲ್ಲಿಯ ಲೆಜಿಸಲೇಟಿವ್ಹ ಅಸೆಂಬ್ಲಿ, ಮುಂಬಯಿ ಮತ್ತು ಮದ್ರಾಸದ ಕೌನ್ಸಿಲಗಳಲ್ಲಿ ಸ್ವರಾಜ್ಯ ಪಕ್ಷೀಯರಿಗೂ ಸರಕಾರಕ್ಕೂ ಆಗುವ ಜಕಮಕಿ, ಇಂಗ್ಲೇಡದಲ್ಲಿ ಕಾರ್ಮಿಕರು ದಿವಾಣರಾಗುವದರಿಂದ ಹಿಂದುಸ್ಥಾನದ ಮೇಲಾಗುವ ಪರಿಣಾಮ ಇವನ್ನು ವಿಶದವಾಗಿಯೂ ವಿವರವಾಗಿಯೂ ತಿಳಕೊಳ್ಳಲಿಕ್ಕೆ ಕರ್ನಾಟಕದಲ್ಲೆಲ್ಲ ವಿಜಯವೊಂದೇ ಪತ್ರವಾಗುವದು. ವಿಜಯದಲ್ಲಿ ಬರುವಂಥ ಸಂಗತಿಗಳು ಇನ್ನಾವ ಪತ್ರದಲ್ಲಿಯೂ ಬರಲಾರವು. ಕಾರಣ ವಿಲಂಬ ಮಾಡದೆ, ವಿಜಯದ ಚಂದಾದಾರರಾಗಿರಿ

ಮೆಸರ್ಸ ಹೊಸಮನಿ ಮತ್ತು ಹುಲಕೋಟಿಯವರ ಚುನಾವಣೆಯ ಆರ್ಜಿಯು

—o—

ವಿಚಾರಣೆಯ ಕಮೀಟಿಯ ನೇಮಣುಕು

—o—

ಧಾರವಾಡ ಜಿಲ್ಹೆಯ ಕೌನ್ಸಿಲ ಚುನಾವಣೆಯ ಹೋಟುಗಳನ್ನು ಪುನಃ ಎಣಿಸಬೇಕೆಂದೂ, ಬೇರೆ ಅಕ್ರಮಗಳ ವಿಚಾರ ಮಾಡಬೇಕೆಂದೂ, ಮೆಸರ್ಸ ಹುಲಕೋಟಿ ಮತ್ತು ಹೊಸಮನಿಯವರು ಮಾಡಿದ ಆರ್ಜಿಗಳ ವಿಚಾರ ಮಾಡುವದಕ್ಕಾಗಿ ಸರಕಾರದವರು ಕೆಳಗಿನ ಮೂವರ ಒಂದು ಕಮೀಟಿಯನ್ನು ನೇಮಿಸಿದ್ದಾರೆ

೧ ಸರ ಮಹಾದೇವ ಚೌಬಾಳ, ಅಧ್ಯಕ್ಷ

೨ ಪಿ. ಬಿ ಶಿಂಗಣೆ ಆಕ್ಟಿಂಗ ಗವ್ಹರ್ನಮೆಂಟ ಪ್ಲೀಡರ ಮುಂಬಯಿ, ಮೆಂಬರ

೩ ಧಾರವಾಡ ಡಿಸ್ಟ್ರಿಕ್ಟ ಜಡ್ಜ, ಮೆಂಬರ

ಈ ಕಮೀಟಿಯವರು ಬೆಳಗಾವಿಯಲ್ಲಾದ ಆರ್ಜಿಯ ವಿಚಾರಣೆಯನ್ನೂ ಮಾಡುವರು.

ಬೆಳಗಾವಿಯ ಚುನಾವಣೆಯು ರದ್ದಾಗುವ ಅರ್ಜಿಯು

—o—

ಪ್ರೊಫೆಸರ ಭಾಟೆಯವರ ನಾಮಿನೇಶನವು ಅಕ್ರಮವಾಗಿ ಅಂಗೀಕರಿಸಲ್ಪಟ್ಟದ್ದರಿಂದ ಅದನ್ನು ರದ್ದು ಮಾಡಬೇಕೆಂದು ಮಿ ಚನ್ನಬಸಪ್ಪಾ ಮಲ್ಲಪ್ಪಾ ಕರಾಳೆ ಎಂಬವರು ಅರ್ಜಿಯನ್ನು ಮಾಡಿದ ಪ್ರಕಾರ ಸರಕಾರದವರು ನಾಮದಾರ ಸರ ಚೌಬಾಳ, ಮಿ ಶಿಂಗಣೆ ಹಾಗು ಅಲ್ಲಿಯ ಜಡ್ಜರ ಕಮೀಟಿಯನ್ನು ನೇಮಿಸಿದ್ದಾರೆ. ಈ ಅರ್ಜಿಯು ಮಿ ಬೆಲ್ಲದ [illegible] ಯವರ ಪ್ರೇರಣೆಯಿಂದಾಗಿರುತ್ತದೆಂದು ಬರೆಯುವ ಅವಶ್ಯಕತೆ ಇರುವದಿಲ್ಲ

ಬಾಲಘಾಟಿನ ಹತ್ತರ ಒಂದು ಹಳ್ಳಿಯಲ್ಲಿ ದರೋಡೆಗಾರರು ಒಬ್ಬ ಶ್ರೀಮಂತನ ಮನೆಯಲ್ಲಿ ಹೊಕ್ಕು, ಜನರನ್ನು ಕಟ್ಟಿಹಾಕಿ, ಚಕ್ಕಡಿಗಳ ಮೇಲೆ ಕಾಳು ಹೇರಿಕೊಂಡು ಹೋದರು ಹೀಗೆ ಕಾಳು ತುಂಬಿಕೊಂಡು ಹೋದ ದರೋಡೆಯು ಇದೇ ಮೊದಲನೆಯದು.

ಮುಖ್ಯಮೊತ್ಯರಾದ ಮಿ ರಾಮಸೆ ಮ್ಯಾಕಡೋನಾಲ್ಡ ಸಾಹೇಬರು ಬರೆದ "ಹಿಂದುಸ್ಥಾನದಲ್ಲಿಯ ಜಾಗೃತಿ" ಎಂಬ ಪುಸ್ತಕವನ್ನು ಹಿಂದುಸ್ಥಾನ ಸರಕಾರದವರು ಪ್ರೊಸ್ಕ್ರಾಯಿಬ ಮಾಡಿದ್ದರು ಅದನ್ನು ಈಗ ಕಾಲಗತಿಗನುಸರಿಸಿ ಪಠ್ಯ ಪುಸ್ತಕವಾಗಿ ಮಾಡುವ ಹೊತ್ತು ಎಂದಿದೆ.

ನಾಮದಾರ ಜಿನ್ನಾ ಸಾಹೇಬರು ಬೋರಸಾದ ಹೋಲಸಾದ ರೇಲ್ವೆ ಹಾಕಬೇಕೆಂದು ಅಸೆಂಬ್ಲಿಯಲ್ಲಿ ಠರಾವು ತರುವರು. ಇದರಂತೆ ನಾಮದಾರ ಬೆಳವಿಯವರು ಬೆಳಗಾವಿಯಿಂದ ಸವದತ್ತಿ, ಯಮನೂರ ಮಾರ್ಗವಾಗಿ ಹುಬ್ಬಳ್ಳಿಗೆ ರೇಲ್ವೆ ತರುವ ಠರಾವು ತರಬೇಕೆಂದು ಕೆಲವರು ಸೂಚಿಸುತ್ತಾರೆ!!

ಅನಂತಪೂರ ಜಿಲ್ಹೆಯಲ್ಲಿ ರಿಲೀಫ ಕಾಮಗಾರಿಗಳು ಪ್ರಾರಂಭವಾಗಿದ್ದು, ಬಡವರಿಗೆ ಬಿಸಿಲಿನಲ್ಲಿ ಕಲ್ಲು ಒಡೆಯುವದಕ್ಕೆ ಹಚ್ಚಿದ್ದಾರೆ. ಬಸುರಿನ ಹೆಂಗಸರಿಗೂ ಈ ಕೆಲಸ ಹಚ್ಚುತ್ತಾರೆ. ಇದು ನಿಂದ್ಯ ಸಂಗತಿಯೇ ಸರಿ.

ಪೋಲಾಚಿಯ ಮ್ಯುನಿಸಿಪಾಲಿಟಿಯಲ್ಲಿ ಮಹಾತ್ಮರನ್ನು ಬಂಧಮುಕ್ತ ಮಾಡಬೇಕೆಂಬ ಠರಾವು ಬರತಕ್ಕದ್ದಿತ್ತು. ಅಧ್ಯಕ್ಷರು ಇದು ಮ್ಯುನಿಸಿಪಾಲಿಟಿಯ ಹೊರಗಿನ ಕೆಲಸವೆಂದು ಅಂದಕೂಡಲೆ- ಎಲ್ಲ ಮೆಂಬರರು ಎದ್ದು ಹೋದರು. ಸರಕಾರದಿಂದ ನೇಮಿಸಲ್ಪಟ್ಟ ಒಬ್ಬ ಮೆಂಬರರು ಮಾತ್ರ ಕೂತುಕೊಂಡರು!!!

ಹಿಂದೂ ಮುಸಲಮಾನರಲ್ಲಿ ಐಕ್ಯದ ಕಲಮುಗಳ ಚರ್ಚೆಮಾಡಲೋಸುಗ ನಾಳಿನ ದಿವಸ ದಿಲ್ಲಿಯಲ್ಲಿ ಉಭಯ ಬನಾಂಗಗಳ ಮಹತ್ವದ ಸಭೆಯು ಕೂಡತಕ್ಕದ್ದಿತ್ತು.

ಕಾರಿನ ಸುದ್ದಿಗಳು

—o—

ಅಂತ್ಯಾವಸ್ಥೆ

ಅಮೇರಿಕೆಯ ಅಧ್ಯಕ್ಷರಾಗಿ, ಮಹಾಯುದ್ಧ ಕಾಲದಲ್ಲಿ ೧೪ ತತ್ವಗಳನ್ನು ಹೇಳಿ, ಜರ್ಮನಿಗೆ ಮಂಕಬೂದಿಯನ್ನು ತಿನಿಸಿದ ಮೆ. ವಿಲ್ಸನ ಸಾಹೇಬರಿಗೆ ಅಜೀರ್ಣದಿಂದ ಅಂತ್ಯಾವಸ್ಥೆ ಪ್ರಾಪ್ತವಾಗಿದೆ.

ಜಪಾನ ಮಂತ್ರಿಗಳ ರಾಜೀನಾಮೆ.

ಜಪಾನ ಮಂತ್ರಿಗಳು ಪಾತಕಾಹಿಯಂತೆ ದೊರೆತನ ಮಾಡಲಾರಂಭಿಸಿದ್ದರಿಂದ ಪ್ರಜಾ ಜನರು ಇವರ ಮೇಲೆ ರೇಗಿ, ಕಚೇರಿಯ ಹತ್ತರ ನೆರೆದು ಹಾವಳಿ ಮಾಡಿದರು. ಮಂತ್ರಿಗಳು ತಮ್ಮ ರಕ್ಷಣೆಗಾಗಿ ಪೋಲೀಸರ ಬಂದೋಬಸ್ತು ತರಿಸಿಕೊಂಡರು. ಪ್ರಜಾಕ್ಷೋಭ ಹೆಚ್ಚಾದದ್ದನ್ನು ಕಂಡು ದಿವಾಣರಿಗೆ ರಾಜೀನಾಮೆ ಕೊಟ್ಟು ಪಾರ್ಲಮೆಂಟದ ಬರಖಾಸ್ತು ಮಾಡಿದರು.

ಇಂಗ್ಲಂಡ ಮತ್ತು ರಶಿಯಾದ ಗೆಳೆತನ.

ಮಿ. ಮ್ಯಾಕಡೊನಾಲ್ಡ ಸಾಹೇಬರು ರಶಿಯಾದ ಕೂಡ ರಾಜಕೀಯ ಒಪ್ಪಂದ ಮಾಡಿಕೊಳ್ಳುವದಕ್ಕಾಗಿ ತಮ್ಮ ಪ್ರತಿನಿಧಿಗೆ ಪೂರ್ಣ ಅಧಿಕಾರ ಕೊಟ್ಟು ಕಳಿಸಿಕೊಡಬೇಕೆಂದು ತಿಳಿಸಿದ್ದಾರೆ.

ಅಹಮದಾಬಾದಿನ ಅಸಹಕಾರ.

ಅಹಮದಾಬಾದ ಮ್ಯುನಿಸಿಪಾಲಟಿಯ ಚುನಾವಣೆಯಲ್ಲಿ ೩೦ ಸ್ಥಳಗಳಲ್ಲಿ ೩೪ ಸ್ಥಳಗಳನ್ನು ಅಸಹಕಾರಿಗಳು ಆಕ್ರಮಿಸಿದರು.

ಸಭೆಯಲ್ಲಿ ಪಾದರಕ್ಷೆಯ ಪ್ರಯೋಗ.

ಕಲಕತ್ತೆಯಲ್ಲಿ ಕೌನ್ಸಿಲದ ಚಾಯಿ- ಇಲೆಕ್ಶನದಲ್ಲಿ ಮತದಾರರಿಗೆ ಉಪದೇಶ ಮಾಡುವ ಕುರಿತು ಒಬ್ಬರು ಜಾಹೀರ ಸಭೆ ಕೂಡಿಸಿದ್ದರು. ಈ ಸಭೆಯಲ್ಲಿ ಬಹಳ ಗೊಂದಲವಾಗಿ ಒಬ್ಬನ ಪಾದರಕ್ಷೆ ಹಾರಿಸು. ತಮ್ಮ ಮಾತು ನಡೆಯದೆಂದು ಮವಾಳರು ಎದ್ದು ಹೋದಬಳಿಕ, ಸ್ವರಾಜ್ಯ ಪಕ್ಷೀಯರು ಸಭೆಯನ್ನು ನಿರ್ವಿಘ್ನದಿಂದ ಕೊನೆಗಾಣಿಸಿದರು.

ಕೊನ್ನ ಬಡಕನಿಗೆ ಹಿಸೆಯಿಲ್ಲ.

ಕೊನ್ನಬಡಕನಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಸೆ ಅಥವಾ ದತ್ತಕದ ಅಧಿಕಾರ ಹುಟ್ಟುವದಿಲ್ಲೆಂದು ಪ್ರಿವ್ಹಿಕೌನ್ಸಿಲದವರು ಠರಾವು ಕೊಟ್ಟಿದ್ದಾರೆ.

ಚಂದಾದಾರರಿಗೆ ವಿನಂತಿಯು

ಫೆಬ್ರವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗತಕ್ಕಂಥ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ವ್ಹಿ ಪಿ. ಸ್ವೀಕಾರ ಮಾಡಬೇಕೆಂಬ ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

THE DHARWAR BANK LIMITED
DHARWAR

—o—

The Bank will accept fixed deposits for 3 4 6- months For rates of interest apply to the manager

A. K. Katti-
Managing Director.

ಈ ಪತ್ರವನ್ನು ಅಣ್ಣಾಚಾರ್ಯ [illegible] ಹೊಸಕೇರಿ ಇವರು ಧಾರವಾಡದಲ್ಲಿ [illegible] ಮ್ಯಾನೇಜರ ಪ್ರೆಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು: ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೫) ಧಾರವಾಡ, ಮಂಗಳವಾರ ತಾರೀಖು ೧೨ ನೇ ಫೇಬ್ರುವರಿ ೧೯೨೪ (ಸಂಚಿಕೆ ೭

ವಿ ಜ ಯ

ಧಾರವಾಡ ತಾ. ೧೨ ೨ ೧೯೨೪

ಧಾರವಾಡ ಮ್ಯುನಿಸಿಪಾಲಿಟಿ ಮತ್ತು ರಾಷ್ಟ್ರೀಯ ಪಕ್ಷ

—o—

ಮಹಾತ್ಮಾ ಗಾಂಧಿಯವರು [illegible] ರಾಷ್ಟ್ರೀಯ ಪಕ್ಷದ [illegible] ಮ್ಯುನಿಸಿಪಾಲಿಟಿಗಳು ಈ ಆನಂದೋತ್ಸವವನ್ನು [illegible] ಮುಂತಾದ ಮ್ಯುನಿಸಿಪಾಲಿಟಿಗಳು [illegible] ಈ ವಿಷಯವಾಗಿ [illegible] ರಾಷ್ಟ್ರೀಯ ಪಕ್ಷದ [illegible] ಜಗತ್ತಿನ [illegible] ಈ ಸಂಗತಿಯಿಂದ [illegible] ಧಾರವಾಡದಲ್ಲಿ ಕಾಂಗ್ರೆಸ ಸಭೆಯು ಕೂಡುವಾಗ ಧಾರವಾಡ ಮ್ಯುನಿಸಿಪಾಲಿಟಿಯು ಕಾಂಗ್ರೆಸ [illegible] ಪ್ರಶ್ನೆ [illegible] ಇವನ್ನು [illegible] ಅನಿಸುವದು

[illegible] ಮೇಲೆ [illegible] ಜಾತಿ

—o—

(ಜ [illegible] ದಲ್ಲಿ ಹೊಸ [illegible] ಗ್ರಂಥ)

—:—

[illegible]

ಹಿಂದು [illegible]

[illegible] ದರು [illegible] ಈ [illegible] ಧಾರವಾಡದ [illegible] ಆಸಾಮಿಯು [illegible] ಈ [illegible] ಇದ್ದಿಲ್ಲ

ಮಹಾ [illegible] ವಾಡಿದಾಗ [illegible] ಇದರಿಂದ ಇದು [illegible] ಮಹಾತ್ಮರ [illegible] ಈ [illegible] ಮೋಪಲ್ಲೆಯ [illegible]

ಡಿ [illegible] ಇವರ [illegible] ವೃತ್ತ [illegible] ಮಾಡಿ ತೋರಿಸುವೆವು

—

ಮಿಷ್ಟರ [illegible] ಕಾರಣವು

—o—

ಮ [illegible] ವು

o—

ಮಹಾತ್ಮರು [illegible] ೧೦ನೇ [illegible]

—

ಮಹಾತ್ಮಾಜಿ ಮತ್ತು [illegible] ಯು

—o—

ಹಿಂದೆ ಪ್ರಾಂತಕ್ಕೆ [illegible] ಲೆಕ್ಟರರು [illegible] ಇಂಗ್ಲೆಂಡಕ್ಕೆ ಹೋಗುವಾಗ [illegible] ಗಾಂಧಿ ಮಹಾರಾಜರ [illegible] ಪತ್ರದ [illegible] ಸಂಪಾದಕರಾದ [illegible] ಗಾಂಧಿ [illegible] ಇವರನ್ನು [illegible]

—

ಜೋಶೀ [illegible]

ನವಸಾರಾದಲ್ಲಿ [illegible] ಕಲೆಕ್ಟರರು [illegible] ಕಲೆಕ್ಟರರಾಗಿದ್ದಾಗ ಹಿಂದೂ ಮತ್ತು ಯುರೋಪಿಯನರಲ್ಲಿ [illegible] ಇವರು [illegible] ಇಂಥ [illegible] ಪಂಚಮ ಮಹಾರಾಜರು [illegible] ಇಂಗ್ಲೆಂಡಕ್ಕೆ [illegible] ಟೊಪ್ಪಿಗೆಯನ್ನು [illegible] ಜೋಶೀ [illegible] ಪತ್ರದಲ್ಲಿ [illegible]

—

[illegible] ಪಟ್ಟಗಳ [illegible]

ಮೊನ್ನಿನ ದಿವಸ [illegible] ಕಾಂಗ್ರೆಸ [illegible] ಗಾಂಧಿ ಟೊಪ್ಪಿಗೆಗಳನ್ನು [illegible] ಮುಂತಾದವುಗಳನ್ನು [illegible] ಮತ್ತು [illegible] ಇಂಥ [illegible]

—

ಗಾಂಧಿ ಟೊಪ್ಪಿಗೆಯ ಮೇಲೆ [illegible]

ಕಲೆಕ್ಟರರ [illegible]

ಮಹುರೆಯ ಕಲೆಕ್ಟರರ ಮುಂದೆ ಗಾಂಧಿ ಟೊಪ್ಪಿಗೆ [illegible] ವಕೀಲರು [illegible] ಇವರ [illegible]

—

ಒಕ್ಕಲಿಗರಿಗೆ ಅಲಭ್ಯವಾದ ಸೌಕರ್ಯವು.



ಕಿರ್ಲೋಸ್ಕರ

ಸುಧಾರಿಸಿದ [illegible] ([illegible]) [illegible] [illegible] [illegible] ಪಡಿಸಿ ಮಾಡಿದ್ದೇವೆ. [illegible]—

ಕ್ರಯದ ಪಟ್ಟಿ

ರೂಪಾಯಿ

ನಂ. ೯ ನೇಗಿಲು	೩೩
ನಂ. ೧೦೦ ನೇಗಿಲು	೨೦
ನಂ. ೧೨ ರಂಟೆ	೨೪
ಕಬ್ಬಿನ ಗಾಣ ನಂ. ೫	೨೪೦
[illegible] ಗಾಣ	೩೦೦
ಮೇವು ಕತರಿಸುವ ಯಂತ್ರ	೭೦

ಇತ್ಯಾದಿ "ಬಿ" ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಧಾರವಾಡ ಜಿಲ್ಲೆಗೆ ನಮ್ಮ ಏಜಂಟರು— ರಾ. ರಾ. [illegible] ಹಾವೇರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್ { ಪೋ. ಕಿರ್ಲೋಸ್ಕರವಾಡಿ
ಜಿಲ್ಲಾ, ಸಾತಾರಾ.

ಪೂರಾ ೧೬ ಆಣೆ ಗುಣ ಯಾವಾಗ ಬರುತ್ತದೆ?

ಡಾಕ್ಟರರ ಪ್ರಿಸ್ಕ್ರಿಪ್ಶನದಂತೆ ತಥಾಪಿ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿಕೊಟ್ಟಾಗ ಮಾತ್ರ! ಡಾಕ್ಟರರೂ ಜನರೂ ಈ ಕೆಲಸದಲ್ಲಿ ಮೆಸರ್ಸ ಕನರಾಡಿಸ್ತ ಮೆಡಿಕಲ ಸ್ಟೋರ್ಸ್‌ನ್ನು ಬಹಳವಾಗಿ ಹೊಗಳುವ ಕಾರಣದ ಮುಖ್ಯ ಇಂಗಿತವಾದರೂ ಇದೇ ಇರುತ್ತದೆ.

ನೊಮೆಂಟ ಕ್ಯುಯರ ಅಂದರೆ- ಒಂದೇ ಕ್ಷಣದಲ್ಲಿ ಗುಣ.

ತಲೆ ಶೂಲಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಬೆಲೆ ಎರಡೇ ಆಣೆ.

ವಿಳಾಸ— ದಿ ಕನರಾಡಿಸ್ತ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟಸ
ಸ್ಟೇಶನರೋಡ, ಹುಬ್ಬಳ್ಳಿ.

ಆರ್ಯೌಷಧಿಕಾರಖಾನಾ ಚಿಕ್ರೂಂ

ಮನ್ಮಥವಿಲಾಸ— ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ. ೧೦೦ಕ್ಕೆ ೪ ರೂ.

ಹುರುಕಿನ ಔಷಧ— ಚೀಟು ೧ಕ್ಕೆ ೧ ಆಣೆ ೧೦೦ಕ್ಕೆ ೩ ರೂ. ೮ ಆಣೆ.

ಕಣ್ಣಿನ ಔಷಧ— ಚೀಟು ೧ಕ್ಕೆ ೩ ಪೈ. ೧೦೦ಕ್ಕೆ ೧ ರೂ.

ಹೇನಿನ ಔಷಧ— ಚೀಟು ೧ಕ್ಕೆ ೬ ಪೈ. ೧೦೦ಕ್ಕೆ ೨ ರೂ.

ಜ್ವರದ ಗುಳಿಗೆ— ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ, ಇನ್‌ಫ್ಲ್ಯೂಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿವೆ ಮತ್ತು ಪ್ರವಾಸಕರಿಗೆ ಉಪಯುಕ್ತವಾದಂಥವಿರುತ್ತವೆ. ೪೦ಕ್ಕೆ ೧ ರೂ. ೧೦೦ಕ್ಕೆ ೨ ರೂ.

ಸೂಚನೆ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸುಧೀನಿಧಿಯೆಂಬ ಪುಸ್ತಕವನ್ನು ಫುಕ್ಕಟೆಯಾಗಿ ಕಳಿಸುವೆವು.

ಆರ್ಯೌಷಧಿ ಕಾರಖಾನಾ, ಪೋ. ಚಿಕ್ರೂ, ಜಿಲ್ಲಾ ಬೆಳಗಾವ

ಕಾಂಗ್ರೆಸ ಕಮಿಟಿಯವರು ಪಾಸ ಮಾಡಿದ

ಶುದ್ಧ ಖಾದಿಯು.

ಯಾವತ್ತು ಬಂಧುಗಳಿಗೆ ವಿನಂತಿ— ಈಗ ಬಂದಿರುವ ಹಬ್ಬಗಳಿಗೆ ಅವಿರೋಧದಂತೆ ಸ್ವದೇಶಿ ಖಾದಿಯು [illegible] ದೇಶಕ್ಕೆಲ್ಲ ಆನಂದ ಪಡಿಸುವಿರಿ ಮಧುರದಲ್ಲಿ ಆಪ ಕೋಟಿನ ವೃಣ್ಣೆ ಅರಿವೆ ಮತ್ತು ಖಾದಿಯು [illegible] ಮಕ್ಕಳಿಗೆ ಉಡುವ ದಾತಿ ಪಟ್ಟಾ ಬಣ್ಣದ ಸಣ್ಣ ದೊಡ್ಡ ಛೀಟುಗಳು ಆವೆ ಉತ್ತಮ ತರದ ಟೊಪ್ಪಿಗೆಗಳು ಬಟನ್ನಗಳು ಅಗ್ಗ ದರದಿಂದ ನಮ್ಮಲ್ಲಿ ಸಿಗುತ್ತವೆ.

ಜಾಪಾನ (ಚಷಮೆ) ಸಮೀಪ ನೆತ್ತ ದೂರ ದೃಷ್ಟಿಯವರಿಗೆ ಪೆಬಲ್, ಕ್ರಿಸ್ಟಲ್, ದೋಶಿಯಾ, ಬಿಂದ ಗ್ಲಾಸಗಳು, [illegible] ಬೆಳ್ಳಿಯ, ಫ್ರೇಮುಗಳಲ್ಲಿ ಕೂಡಿಸಿದವು. ಸಮಕ್ಷಮ ಕಣ್ಣು ಪರೀಕ್ಷಿಸಿ ಅಗ್ಗದರದಿಂದ [illegible] ಅರ್ಡರ ತಗೊಳ್ಳುವೆವು ಮಾಲಿನಲ್ಲಿ ನಜರಚೂಕಿ ಆದಲ್ಲಿ ಪರತಮಾಡಿರಿ. ಪ್ರೀತಿಯವರ ಚಾಳಿಸ ಸಹಾಯ.

ಗಿರಾಕಿಗಳು ಹೆಚ್ಚಿಗೆ ಇದ್ದಲ್ಲಿ ಮುದ್ದಾಮ ಬರುತ್ತೇವೆ. ಡಬಲ್ ಕಾರ್ಡ ಬಂದರೆ ಜವಾಬ ಸಿಗುತ್ತದೆ.

ಧಾರವಾಡ————————ಮತ್ತು————————ಹುಬ್ಬಳ್ಳಿ

ಎಮ್ ಸೌದಾಗರ ಆ ಸೆಕ್ರೆಟರಿ — ಮೊಹದೀನ ಸಾ|| ಹನಸಿ ಸೆಕ್ರೆಟರಿ
ಖಿಲಾಫತ ಕ. ಧಾರವಾಡ — ಖಿಲಾಫತ ಕ. ಹುಬ್ಬಳ್ಳಿ

ನೋಟೀಸಿನ ದರಗಳು.

[illegible] ಶಿಂಗಲ ಕಾಲಮಿನ ಹಸ್ತಪನೆ, ಳಿಗೆ ಒಂದು ಬಾರಿ ಮುಂದೆ ಪ್ರತಿಸಲ [illegible] ಒಂದು ಸಾರಿ ಆಣೆ ಇಂಗ್ಲಿಷ ಪ್ರತಿಸಲ [illegible] ಒಂದು ಆಣೆ ಇಂಗ್ಲಿಷದಿಂದ ಬರೆದಿರಿ ಕನ್ನಡದಲ್ಲಿ ಹಾಕುವುದಿದ್ದರೆ [illegible] [illegible] ಕಾರ್ಯ [illegible] [illegible] [illegible] ವಿಳಾಸಕ್ಕೆ ಪತ್ರ ವ್ಯವಹಾರ ನಡೆಸಬೇಕು.

[illegible] ವರ್ಗಣೀ ದರ

ನಿತ್ಯಪತ್ರಕ್ಕೆ

೧೨	ತಿಂಗಳಿಗೆ	೧೨—೮—೦ ರೂ
೬	„	೭—೦—೦ ರೂ
೩	„	೪—೦—೦ ರೂ
ವಾರಪತ್ರಕ್ಕೆ	೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಗಿನ ವಿಳಾಸಕ್ಕೆ

ಹೊಲದ ಮಾರಾಟ

[illegible] ಶೇರ [illegible] ಈ ಬನಿಯ ಇರುವ [illegible] ತರಮ ರೂಪಾಯಿ [illegible] ಉತ್ತಾರ್ಕ್ಕ. ಸರಕಾರಿ [illegible] ಇದರ ಮೋಟ ಗಣೇಚಾರು [illegible] ಇದರ [illegible]ದಲ್ಲಿರುವ ನಮ್ಮ ಸ್ವಂತ ಮಾ[illegible] ಕೊಳ್ಳಲಿಚ್ಛಿಸುವವರು ನಮಗೆ ಭೆಟ್ಟಿಯಾಗಿ [illegible] ಬೇಕು [illegible] [illegible].

ಬಸಪ್ಪಣ್ಣಾ [illegible] ಅಲ್ಯಣ್ಣಾ ವರ ಉರ್ಫ ಧಣಿ.

ಮು. [illegible] ಯೋಸಯಲ್ಲಾಪೂರ ಧಾರವಾಡ.

THE AN[illegible]LIGI BANK Ltd

DHARWAR.

—○—

[illegible] ಧಾರವಾಡ [illegible]

[illegible] ಬ್ಯಾಂಕಿನ [illegible] [illegible] [illegible] [illegible] [illegible] ಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ [illegible] ೧೦—೩೦ ಸಾಯಂಕಾಲ [illegible] ವರೆಗೆ ನಡಿಯುವದು.

K B [illegible]

ಮ್ಯಾನೇಜಿಂಗ ಡಾಯರೆಕ್ಟರ

THE DHARWAR BANK LIMITED

DHARWAR.

—○—

The B[illegible] [illegible] Fixed de[illegible] For [illegible] of [illegible] apply to the ma[illegible]ger.

A. K. K[illegible]

Ma[illegible] Director

ಅಸ್ಸಲ	ಪವಿತ್ರ	ತಾಜಾ
ಇಂಗು	ಇಂಗು	ಇಂಗು

ಈ ಇಂಗು ಬಹಳ ಸ್ವಾದಿಷ್ಟವಾದದ್ದು ರುಚಿಕರ ಮತ್ತು ಸ್ವಾದಿಷ್ಟವಾದದ್ದು ತೀಕ್ಷ್ಣವಾದದ್ದು ಇರುವದರಿಂದ ಸ್ವಲ್ಪವೇ ಸಾಕಾಗುವದು. ಇದು ಸರ್ವ ರೋಗ [illegible] ಪ್ರಸಿದ್ಧವಿರುವದರಿಂದ ಎಲ್ಲರೂ ಅವಶ್ಯ ಸಂಗ್ರಹಿಸಬೇಕು. ಅದ ಬೆಲೆ ಮಾತ್ರ

ತೊಲೆ ೪೦ ೨೦ ೧೦

ಇವಾಣೇ ನ್ಯಾಚರ ಇಂಗು ೯—೩ ೪—೧೨ ೨—೮
ಕ ಒಳ್ಳೆ ಡಾಯಲ ಇಂಗು ೬—೦ ೩— ೪ ೧—೭೪
ಪತಾಬಂದಿ ಸ್ಪೇರು ಇಂಗು ದರದಿಂದ ೬—೧೧
ಎಲ್ಲ ಕಡೆ ಪ್ಯಾಕಿಂಗ ಪೋಸ್ಟ ಖರ್ಚ ಮಾಫ
ಶಹಬಂದೀ ಇಂಗನ್ನು ರತಲಕ್ಕಿಂತ ಕಡಿಮೆ ಕಳಿಸಲಾಗದು.

ಮೆಸರ್ಸ ಕೆ ಬ್ರದರ್ಸ
ಪೋ. ಕುಲಗೋಡ ತಾ ಗೋಕಾಕ ಜಿ ಬೆಳಗಾವ

ಧಾರವಾಡದಲ್ಲಿ ರಾಷ್ಟ್ರೀಯ ಸಭೆಯು ವಿಘ್ನ.

—○—

ತಾ|| ೩ ೨ ನೇ ದಿವಸ ಧಾರವಾಡ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬರುವ ರಾಷ್ಟ್ರೀಯ ಸಭೆಯ ಅಧಿವೇಶನವನ್ನು ಧಾರವಾಡದಲ್ಲಿ ಏರ್ಪಡಿಸುವ ಕುರಿತು ಚರ್ಚಿಸುವವರ ಬಗ್ಗೆ ಚೆಲ್ಲಿಯ ಪ್ರಮುಖ ಜನರ ಸಭೆಯನ್ನು ಕೂಡಿಸಿತ್ತು. ಸಭೆಗೆ ಬಹುತೇಕ ಬಹಳ ಜನರು ಸಭೆಯ ಸಂಗತಿಯನ್ನು ಅವರಿಗೆ ತಿಳಿಸಿದಾಗ್ಯೂ ಗೈರ ಹಾಜರಿದ್ದರೆಂಬ ದನ್ನು ತಿಳಿಸಲಿಕ್ಕೆ ಅತ್ಯಂತ ಖೇದವಾಗುತ್ತದೆ. ಈ ಜನರು ಸಭೆಗೆ ಯಾಕೆ ಬರಲಿಲ್ಲೆಂಬುದರ ವಿಚಾರವನ್ನು ಈಗ ಮಾಡುತ್ತ ಕೂಡ್ರುವದರಲ್ಲೇನೂ ಅರ್ಥವಿಲ್ಲ. ಆದರೂ ಸಭೆಗೆ ಬಂದಿದ್ದ ಜನರಲ್ಲಿ ಈ ವಿಷಯದಲ್ಲಿ ಉತ್ಸಾಹವಿಲ್ಲೆಂಬುದು ಸ್ಪಷ್ಟವಾಗಿ ತೋರಿತು. ಈ ಸಂದರ್ಭದಲ್ಲಿ ಒಂದೇ ಸಂಗತಿಯು ಆಶಾಜನಕ ವಿದು ಯು ಅಧ್ಯಕ್ಷರಾದ ಎ. ಬಿ. ಎಲ್. ಪಾಟೀಲ ಇವರು ದಣಿ ಸಭೆಗೆ ಬರಲಿಕ್ಕಾಗುವದಿಲ್ಲ ಆದರೂ ಧಾರವಾಡದಲ್ಲಿ ಕಾಂಗ್ರೆಸ ಕರೆಯುವ ಬಗ್ಗೆ ತಮ್ಮ ಸಂಪೂರ್ಣ ಸಹಾನುಭೂತಿ ಇರುತ್ತದೆಂತಲೂ ಮತ್ತು ತಾವು ಹಣದಿಂದ ತಮ್ಮ ಕೈಯಿಂದಾದಷ್ಟು ಸಹಾಯ ಮಾಡುತ್ತೇವೆಂತಲೂ ಶ್ರೀ ಶೇಖರ ವಕೀಲರ ಕಡಿಯಿಂದ ಹೇಳಿ ಕಳಿಸಿದ ಸಂಗತಿಯು ಇದಲ್ಲದೇ ಸಭೆ [illegible] ಬೇಕಾಗಿದ [illegible] [illegible] ಇನ್ನೂ ನಿರಾಶರಾಗಿ [illegible]. ಅದ್ದರಿಂದ ಈ ಪ್ರಶ್ನೆಯನ್ನು ಅವತ್ತೇ ನಿರ್ಣಯ [illegible] ಅದನ್ನು ತಾ ೧೨-೩-೨೪ರ ತನಕ ಮುಂದ ಹಾಕಿ ಶ್ರೀ. [illegible]ರಾವ ಜೋಶಿ. (ಚೇರಮನ್) ಶ್ರೀ. [illegible], ಶ್ರೀ ಜಂಬಳ, ಶ್ರೀ [illegible] ಒಂದು ಸಿಕ್ಷಣ ಕಮಿಟಿಯನ್ನು ನೇಮಿಸಿ [illegible] ಜಿಲ್ಲೆಯ ಪ್ರಮುಖ ಜನರಲ್ಲಿ [illegible] ಭೆಟಿಯಾಗಿ ಬರುವ ಎಪ್ರಿಲ ತಿಂಗಳ [illegible] ಪ್ರತಿಯೊಬ್ಬರು ೨೦೦೦ ರೂ [illegible] ತೊಡಲಿಕ್ಕಿರುವ ೩೦ ಪ ಜನ ಪ್ರಮುಖ ಜವಾಬುದಾರ ಜನರು ಸಿಗುವರೇ ಎಂಬ [illegible] ನೋಡಿ ೧೭-೩-೨೪ನೇ ತಾರೀಖಿಗೆ ಪುನಃ ಕೂಡುವ ಸಭೆಗೆ [illegible] ರಿಪೋರ್ಟ ಸಾದರ ಮಾಡಬೇಕೆಂದು ಸಭೆಯಲ್ಲಿ ಠರಾವು ಪಾಸಾಯಿತು. ಈ [illegible] [illegible] ೨೦ [illegible] ಜನಸ್ಟು [illegible] [illegible] ದರ್ಜೆಯಲ್ಲಿ ಕಾಂಗ್ರೆಸ [illegible] ತಿಂಗಳ ಕೊನೆಯ ಒಳ [illegible] ೨೦೦೦ [illegible] ಕೈಯಲ್ಲಿ [illegible] ಎಪ್ರಿಲ ತಿಂಗಳ ಕೊನೆ [illegible] ೨೦೦೦ ರೂಪಾಯಿ ಕೊಡ [illegible] [illegible] [illegible] [illegible] [illegible] ಕಾಂಗ್ರೆಸ ಕೆಲಸವು [illegible] ಮತ್ತು [illegible] ಇಂಥ ಪವಿತ್ರ ಮತ್ತು [illegible] ಕಾರ್ಯವನ್ನು ಮನಸ್ಸಿನಲ್ಲಿ [illegible] ೪೦೦೦೦ ರೂಪಾಯಿ [illegible] ತಿಂಗಳಲ್ಲಿ ಕೊಡ [illegible] ಮನಸ್ಸಿದ್ದರೆ [illegible], ಎಲ್ಲರೂ ಈ ಕಾರ್ಯದಲ್ಲಿ ಸಹಾಯ ಮಾಡಬೇಕೆಂದು ಸೂಚಿಸುವ

ಬಿ. ರಾ. [illegible] | [illegible] ಕೇವಳ
ಧಾರವಾಡ | [illegible] ಗುತ್ತಳ
ತಾ ೫ ೨ ೨೪ | ಕಾರ್ಯದರ್ಶಿ.

ಕಾಲೇಜುಗಳಲ್ಲಿ ದೇಶಭಾಷೆಗಳ ಶಿಕ್ಷಣ.

—○—

ಮದ್ರಾಸದ ಯುನಿವ್ಹರ್ಸಿಟಿಯಲ್ಲಿ ತಮಿಳು, ತೆಲಗು, ಮಲಿಯಾಳಿ, ಕನ್ನಡ ಮತ್ತು ಸಂಸ್ಕೃತ ಈ ಭಾಷೆಗಳನ್ನು ಅವಶ್ಯವಾಗಿ ಕಲಿಸಬೇಕೆಂಬ ಚಳವಳಿಯು ನಡೆಯಿತು. ಹೋದ ವಾರದಲ್ಲಿ ಮದ್ರಾಸಿನಲ್ಲಿ ಕೂಡಿದ ಸಭೆಯಲ್ಲಿ ಮಂತ್ರಿಗಳಲ್ಲೊಬ್ಬರಾದ ಮಿ. ಶಿವಜ್ಞಾನ ಪಿಳ್ಳೆಯವರು ಅಧ್ಯಕ್ಷರಾಗಿದ್ದರು. ಮತ್ತು ಕೌನ್ಸಿಲದ ಅಧ್ಯಕ್ಷರಾದ ಮಿ ಸ್ವಾಮಿಕನ್ನು ಪಿಳ್ಳೆ, ಶ್ರೀ ಸತ್ಯಮೂರ್ತಿ ಮೊದಲಾದ ಪ್ರಮುಖರು ಸಭೆಗೆ ಬಂದಿದ್ದರು. ಇಂಗ್ಲಿಷದಂತೆ ದೇಶ ಭಾಷೆಗಳನ್ನು ಇಂಗ್ರೇಜಿ ಕಾಲೇಜುಗಳಲ್ಲಿ ಅಗತ್ಯವಾಗಿ ಕಲಿಯುವ ದಿವಸಗಳು ಬಹಳ ಉಳಿಯಲಿಲ್ಲೆಂದು ಶ್ರೀ ಸತ್ಯಮೂರ್ತಿಯವರು ತಮ್ಮ ಭಾಷಣದಲ್ಲಿ ಹೇಳಿದರು

ಮಂಗಳೂರಲ್ಲಿ ಕಾಂಗ್ರೆಸ ಸಭೆಯಾಗಬೇಕೆಂದು ಶ್ರೀ ಕರ್ನಾಡ ಸದಾಶಿವರಾವ, ಭಾರದ್ವಾಜ ವೇಲಾಯುದರು ಅಭಿಮಾನ ಪಡುತ್ತಿದ್ದರೂ, ಅದು ಮಂಗಳೂರಿನ ಮುಖಂಡರ ಸಂಕೋಚವೃತ್ತಿಯ ಮೂಲಕ ಶಕ್ಯವಾದದ್ದಲ್ಲೆಂದು ಅಲ್ಲಿಯ ಕಂಠೀರವ ಪತ್ರ

ಆನಂದದ ಸುದ್ದಿಯು

ಮಹಾತ್ಮರ ಬಿಡುಗಡೆ.

(ತಾ॥ ೬-೨-೨೪)

ಮಹಾತ್ಮಾ ಗಾಂಧಿಯವರನ್ನು ನಿನ್ನೆ ಮುಂಜಾನೆ ಸರಕಾರದವರು ಬಂಧಮುಕ್ತ ಮಾಡಿದರೆಂಬ ಸುದ್ದಿಯನ್ನು ಒರೆಯುವದಕ್ಕೆ ಸಂತೋಷ ಪಡುತ್ತೇವೆ. [illegible] ವರ್ತಮಾನವನ್ನು ಅವರಿಗೆ ತಿಳಿಸುವಾಗ ಅವರ ಹತ್ತಿರ ಕರ್ನಲ್ ಮಾಡಾಕ ಮತ್ತು ಮಿ ಆಂಡ್ರ್ಯೂಜ ಸಾಹೇಬರಿದ್ದರು. ಇವರು ಮಹಾತ್ಮರ ಅಭಿನಂದನ ಮಾಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಬಿಡುಗಡೆಯ ಸುದ್ದಿಯನ್ನು ಮಹಾತ್ಮರು ಸಂತೋಷದಿಂದ ಕೇಳಿದರು. ಮಹಾತ್ಮರು ಇನ್ನೂ ಒಂದು ವಾರ ಆಸ್ಪತ್ರೆಯಲ್ಲಿಯೇ ಇದ್ದು ಆರೈಕೆ ಹೊಂದುವರು. ಇವರ ಪ್ರಕೃತಿಯು ಈಗ ಪೂರಾ ನೆಟ್ಟಗಿದೆ. ಎದ್ದು ಓಡಾಡುತ್ತಿದ್ದಾರೆಂದು ಮೊದಲನೇ ತಾರಿನ ಸುದ್ದಿಯಾಗಿತ್ತು, ಯಾವ ಕರಾರಕ್ಕೊಳಪಡದೆ, ಬಿಡುಗಡೆ ಮಾಡಲ್ಪಟ್ಟರೆಂದು ಎರಡನೇ ತಾರು ಆಗಿರುತ್ತದೆ.

ಮಹಾತ್ಮರ ಜಯಜಯಕಾರ.

—o—

ನಿನ್ನೆ ಪ್ರಾತಃಕಾಲದಲ್ಲಿ ಮಹಾತ್ಮರು ಬಂಧಮುಕ್ತರಾದರೆಂಬ ತಾರು ಈ ಊರಿಗೆ ಬಂದ ವರ್ತಮಾನ ಕೇಳಿ ನಾಗರಿಕರಿಗೆಲ್ಲ ಆನಂದವಾಯಿತು ಧಾರವಾಡದವರಂತೆ ಹಿಂದುಸ್ಥಾನದ ಪ್ರತಿಯೊಂದು ಭಾಗದಲ್ಲಿಯೂ ಆನಂದವಾಗಿತ್ತೆಂಬ ಮಾತು ನಿರ್ವಿವಾದವಾದದ್ದು. ಮಹಾತ್ಮರು ಜಡ್ಡಿನಿಂದ ಮಲಗುವ ಪೂರ್ವದಲು ಕೌನ್ಸಿಲದಲ್ಲಿ ಇವರ ಬಿಡುಗಡೆಯ ಬಗ್ಗೆ ದೊಡ್ಡ [illegible] ಮೆಂಬರರು ಠರಾವು ತರತಕ್ಕವರಾಗಿದ್ದರು ಈ ಠರಾವು ಬಹುಮತದಿಂದ ಪಾಸಾಗುವದು ಖಚಿತವಾಗಿತ್ತು. ಅದರಲ್ಲಿ ಇವರ ಜಡ್ಡು ಜಗತ್ತಿನ ಸಹಾನುಭೂತಿಯನ್ನು ಸೆಳೆಯಲು ಕಾರಣವಾಯಿತು. ಮಿ. ಪಾಲರು, ಕ್ರಿಶ್ಚನ್ ಮಿಶನರಿಗಳು ಅನೇಕ ಜನ ಜ್ವಲಂತ ಜಹಾಲ [illegible]ರು ಇವರ ಬಂಧಮುಕ್ತತೆಗಾಗಿ ಲೆಜಿಸ್ಲೇಟಿವ್ಹ ಅಸೆಂಬ್ಲಿಯು ಠರಾವಿನ ಮೂಲಕ, ಸಾರ್ವಜನಿಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇವೆಲ್ಲ ಮುಂದಾಗುವ ಕಥೆಯ ಚಿಹ್ನೆಗಳಾದವು. ಲಾರ್ಡ ರೀಡಿಂಗಸಾಹೇಬರು ಈಗಿನ [illegible] ದಿವಸ ಅಸೆಂಬ್ಲಿಯಲ್ಲಿ ಭಾಷಣಮಾಡುವಾಗ ಮಹಾತ್ಮರನ್ನು ಬಂಧಮುಕ್ತ ಮಾಡಿದಂತೆ ಜಾಹೀರಮಾಡಿ, ಈಗೀ ಹಿಂದುಸ್ಥಾನದಿಂದ [illegible]ಕೊಳ್ಳುವರೆಂದು ಬಹುಜನರು ನಿರೀಕ್ಷಿಸಿದ್ದರು. ಆದರೆ ಉಲ್ಟಾವಾಯಿತು. ಅಸೆಂಬ್ಲಿಯಲ್ಲಿಯು ಠರಾವಿನಿಂದಲೇ ಸರಕಾರವನ್ನು ಮಣಿಸಬೇಕೆಂದು ಮೆಂಬರರು ಪಂಥಕಟ್ಟಿದರು. ಇದರಲ್ಲಿ ಇವರ ಸ್ವರಾಜ್ಯ ಪಕ್ಷೀಯರನ್ನುದ್ದೇಶಿಸಿದ ಅನವಶ್ಯಕವಾದ ಟೀಕೆಯು ಉರುವಲದಲ್ಲಿ ಪೆಟ್ರೋಲನ್ನು ಹಾಕಿದಂತಾಯಿತು ಮಹಾತ್ಮರನ್ನು ಬಂಧಮುಕ್ತ ಮಾಡುವ ಠರಾವು ಪಾಸಾದನಂತರ ಸರಕಾರವು ಏನ ಮಾಡಲ್ಲೆಂದು ಹೇಳುವದು ದುಸ್ತರವಾಗುತ್ತಿತ್ತು ಏಕೆಂದರೆ ಸರಕಾರಕ್ಕೆ ಹಣದ ಮಂಜೂರಿಯನ್ನೇ ಕೊಡುವದಿಲ್ಲೆಂದು ಬ್ಯಾರಿಸ್ಟರ ಜಿನ್ನಾಸಾಹೇಬರು ಮೊದಲಾಗಿ ಎಲ್ಲ ಪಂಗಡದವರು ಮುಂದಾಗಿ ಗಟ್ಟಿಮುಟ್ಟಾದ ಮಾತು ಆಡಿಬಿಟ್ಟಿದ್ದರು. ಇದು ಸರಕಾರದ ಹಲ್ಲು ಹಾರಿಸುವಂತಹದಾಗಿತ್ತು. ಬಂಗಾಲದ ಕೌನ್ಸಿಲದ ಬಾಗಿಲು ಹಾಕಿದರು, ನಾಗಪುರದ ಕೌನ್ಸಿಲದ ಬಾಗಿಲು ಎಂದು ತೆರೆಯುವದೆಂಬ ನಿಯಮವಿಲ್ಲವಾಯಿತು; ಅದರಂತೆ ತಮ್ಮ ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿಯೂ ಆಗಬಾರದು ಹ್ಯಾಗೆಮಾಡಿದವನು ಉಣ್ಣುವೆನು ಮಣಿಯಂಥ ಕಡಬು ಎಂಬಂತಾಗಿ ಸಾಹೇಬರು ಪುರುಷಾರ್ಥವೆನಿಸುವಂಥ ಭಾಷಣ ಮಾಡಿದರು. ಈ ಭಾಷಣವು [illegible] ಭಾಷಣೆಯ ವಿರುದ್ಧ ಪರಿಣಮಿಸಿತು ಸ್ವರಾಜ್ಯ, ಸ್ವತಂತ್ರ ವೃತ್ತೀಯ ಪಂಥಿಯ ಜನರೆಲ್ಲರೂ ಒಂದಾಗಿ ಸರಕಾರವನ್ನು ಪೂರಾ ವಿರೋಧಿಸತಕ್ಕವರಾದರು. ಲಾರ್ಡ ರೀಡಿಂಗ ಸಾಹೇಬರ ಬೆದರಿಕೆಯು ಬಾವಿ ತೋಡಿ ಬೇತಾಳ ತೆಗೆದಂತಾಯಿತು ಅವರ ಮಂತ್ರವು ಅವರಿಗೇ ತಿರುಗುವ ಹೊತ್ತು ಬಂತು. ಇದನ್ನು ಲಕ್ಷ್ಯಕ್ಕೆ ತಂದು ಮೊದಲು ಒಂದು ಪೀಡೆಯನ್ನಾದರೂ ದೂರ ಮಾಡಿಕೊಳ್ಳುವಾ ಎಂಬ ಧೂರ್ತ ವಿಚಾರದಿಂದ ಇವರನ್ನು ಬಂಧಮುಕ್ತ ಮಾಡಿದರೆಂದು ಯಾರಿಗಾದರು ತಿಳಿಯದು. ಮಹಾತ್ಮರನ್ನು ಬಿಡುವೆ[illegible]ಂಬ ಠರಾವು ನಿನ್ನೆ ದಿವಸವೇ ಅಸೆಂಬ್ಲಿಯಲ್ಲಿ ಬರತಕ್ಕದ್ದಿತ್ತು. ಆದರೂ ಒಂದು ದಿವಸ ಮುಂದಾಗಿ ಬಿಟ್ಟು [illegible] ಸರಕಾರ ಪಕ್ಷದ ಮೆಂಬರರು [illegible] ಅವರ ಹಿತದಿಂದ [illegible] ಮಾಡಿಕೊಂಡಂತಾಯಿತು. ಮಹಾಶಯ, ಉಪವಾಸ, ಅಪಮಾನ ಮುಂತಾದವುಗಳಿಗೆ ಸಮಯೋಚಿತ, ಸರಕಾರದವರು ಬಾಣವನ್ನು ಉಪಯೋಗಿಸಿದ್ದರಿಂದ ಒಂದು ಸಂಗತಿಯು ದೃಢವಾಗುತ್ತದೆ. ಅದು ಲಾರ್ಡ ರೀಡಿಂಗ ಸಾಹೇಬರ ವಾಕ್ಯಗಳಲ್ಲಿಯೇ ಇರುವದು. "[illegible] ಎಂದಿಗೂ ಸಮ್ಮತಿಸಲಾರರು ಆದ್ದರಿಂದ ಬಾಣವನ್ನು ಉಪಯೋಗ ಮಾಡಿ, ಇಲ್ಲವಾದರೆ ಮುಂದೇನಾಗುವದು [illegible] ಬಲ್ಲರು." ಇದನ್ನು [illegible] ಸ್ವರಾಜ್ಯದ [illegible] ಹಿಂದುಸ್ಥಾನದ ಸ್ವರಾ[illegible] ಮಹಾತ್ಮರನ್ನು ಬಂಧಮುಕ್ತ [illegible] ದೇಶದ ವಿಚಾರದ [illegible]ವಾಗುವದು

ಮಹಾತ್ಮರ ಅಭಿನಂದನೆ

ಮತ್ತು

ಸ್ವರಾಜ್ಯದ ಸಂಕೋಚ ವಿಚಾರ

—o—

ಸರಕಾರದವರು ಮಹಾತ್ಮರನ್ನು ಬಂಧಮುಕ್ತ ಮಾಡುವಾಗ ಬೇನೆಯ ಕಾರಣವನ್ನು ಮುಖ್ಯವಾಗಿಟ್ಟುಕೊಂಡರು. ಮಹಾತ್ಮರ ರೋಗದ ಮೇಲೆ ಶಸ್ತ್ರಕ್ರಿಯೆ ಮಾಡಿ, ಅವರು [illegible]ರಾದ ಬಳಿಕ, ಅವರನ್ನು ತಿರುಗಿ ಸೆರೆಮನೆಗಳಿಗೆ ಕಳಿಸುವದು ಸರಕಾರದ ಧರ್ಮವಾಗಲಾರದೆಂಬದೇ ಲೋಕಮತವಾಯಿತು. ಮವಾಳ, ರಾಜನಿಷ್ಠ ಮೊದಲಾದ ಜನರು ಈ ಸಂಗತಿಯನ್ನು ವಿಶೇಷವಾದ ಒತ್ತಾಯದಿಂದ ಸಾರಿ ಹೇಳಿದರು ಮತ್ತು ಕರ್ನಲ ಮಾಡಾಕ ಸಾಹೇಬರು ಮಹಾತ್ಮರು ಪೂರಾ ನೆಟ್ಟಗಾಗಲಿಕ್ಕೆ ಕನಿಷ್ಠ ಆರು ತಿಂಗಳಾದರೂ ಬೇಕೆಂದು ಅಭಿಪ್ರಾಯಪಟ್ಟರು. ಸರಕಾರಕ್ಕೆ ಇಂಥದೊಂದು ನೆವನ ಸಿಕ್ಕ ಕೂಡಲೆ ಮಹಾತ್ಮರನ್ನು ಬಂಧಮುಕ್ತ ಮಾಡಿದರು. ರಾಜಕೀಯ ಕಾರಣಕ್ಕಾಗಿ ಬಿಡುವದು ಸರಕಾರಕ್ಕೆ ಅಗೌರವದ ಕೃತ್ಯವೆನಿಸುವದಾದ ಮೂಲಕ, ಅನಾಯಾಸವಾಗಿ ಲಭಿಸಿದ ಮಾರ್ಗವನ್ನು ಸ್ವೀಕರಿಸಿದರು. [illegible] ಭಾಷಣವಾಯಿತು. [illegible] ಮಹಾತ್ಮರನ್ನು ಬಂಧಮುಕ್ತ ಮಾಡುವ ಠರಾವು ಪಾಸಾಗುವದಿತ್ತು. ಠರಾವು ಅಸೆಂಬ್ಲಿಯ ಮುಂದೆ ಬರುವದಕ್ಕೆ ಎರಡು ದಿವಸಗಳ ಅವಧಿಯು ಮಾತ್ರ ಉಳಿದಾಗ, ಮಧ್ಯ ರಾತ್ರಿಯಲ್ಲಿ ಬಿಡುಗಡೆಯ [illegible] ಹಚ್ಚಿ, ಅದನ್ನು ಒಬ್ಬ ದಫೇದಾರನ [illegible] ಕಳಿಸಿದ್ದು [illegible]. ಮಹಾತ್ಮರು ಕಳೆದ ಆರುತಿಂಗಳಿಂದ ಜಡ್ಡಿನಿಂದಿರುವರು. ಆಗ್ಗಿಂದ ಈ ಪರ್ಯಂತರ ಸರಕಾರಕ್ಕೆ ಬಿಡುವ ಸುಬುದ್ಧಿಯಾಗಲೇ ಇಲ್ಲ. ಈಗ್ಗೆ ಸರಕಾರದ ಅಂತಃಕರಣವು ದ್ರವಿಸಿದ್ದಾದರೆ ಅಸೆಂಬ್ಲಿಯಲ್ಲಿ ಬರುವದಾಗಿದ್ದ ಹೆದರಿಕೆಯ ಠರಾವೇ [illegible] ಕಾರಣವಾಯಿತೆಂದು ಯಾರಿಗಾದರು ಅನಿಸುವದು.

ಮಹಾತ್ಮರ ಶರೀರ [illegible] ಸ್ವತಂತ್ರವು ಎರಡನೇ ವಿಷಯವಾಗಿರುವದು [illegible] ಮಹಾತ್ಮರು ನುಡಿಸಿದ ಕೆಲಸ [illegible] ಮೂರು ತಿಂಗಳಾದರೂ ಬೇಕು, ಆ ಮಧ್ಯಂತರ ಸ್ವರಾಜ್ಯ ಪಕ್ಷದವರಾಗಿ ಮಾಡಿದ್ದಕ್ಕೆ [illegible] ಬಗ್ಗೆ ಅವರು ಇಂಥದೇ ನಿರ್ಧಾರವನ್ನು ಅಂಗೀಕರಿಸಿದರು [illegible] ಅಸೆಂಬ್ಲಿಯಲ್ಲಿ [illegible] ಸ್ವರಾಜ್ಯ ಪಕ್ಷದ [illegible] ಸರಕಾರಕ್ಕೆ [illegible] ಸ್ವರಾಜ್ಯ [illegible] ಕಾರ್ಯಕ್ರಮ [illegible] ಅಸೆಂಬ್ಲಿಯಲ್ಲಿ [illegible] ಸಾಕಾರವು ಒಂದು [illegible] ತಿಳಿಸಬೇಕು, [illegible] ಮಾಡಬೇಕು, [illegible] ರಾಜಕಾರಣ [illegible] ಎಂದು [illegible] ಈ ಠರಾವಿನಿಂದ [illegible] ಹಿಂದುಸ್ಥಾನದ [illegible] ಸ್ವರಾಜ್ಯ ಪಕ್ಷೀಯರು [illegible] ಆದ್ದರಿಂದ ಸ್ವರಾಜ್ಯ ಪಕ್ಷ[illegible] ಮೊದಲನೆ ಅಪೇಕ್ಷವು ಈಗುಳಿಲ್ಲೆಂಬ ಅಸಮಾಧಾನದ ಸಂಗತಿಯಾಗಿದೆ. ಇದರಿಂದ ಎಲ್ಲ ಜನರು ಒಂದಾಗಿರುವದರಿಂದ ಇದಕ್ಕೆ ಸರಕಾರವು ಸಮ್ಮತಿ ಕೊಟ್ಟ ಹೊರತು ಅನ್ಯ ಮಾರ್ಗವೇ ಇರುವದಿಲ್ಲ. ಈ ಬಗ್ಗೆ ಸರಕಾರಕ್ಕೆ ಕಳಿಸಬೇಕಾದ ಉಪಸೂಚನೆಯನ್ನು ಪಂಡಿತ ಮೋತೀಲಾಲರೇ ಬರೆದು ಕಳಿಸಿದ್ದಾರೆ.

ಗಾಂಧೀ ಮಾಸ, ಖಾದೀ ಪ್ರಸಾರ.

—o—

ಶ್ರೀ. ರಾಜಗೋಪಾಲಾಚಾರ್ಯ,

ಶೇಟ ಶಂಕರಲಾಲ ಬ್ಯಾಂಕರ ಮತ್ತು

ಶ್ರೀ. ರಾಘವೇಂದ್ರರಾಯರ ಭಾಷಣಗಳು.

—o—

[ತಾ. ೮-೨-೨೪]

ಬೆಳಗಿನ ಸಂಚಿಕೆಯಲ್ಲಿ ಪ್ರಸಿದ್ಧವಾದ ಮೇರೆಗೆ ಶ್ರೀಯುತ ರಾಜಗೋಪಾಲಾಚಾರ್ಯ, ಶೇಟ ಶಂಕರಲಾಲ ಬ್ಯಾಂಕರ ಮತ್ತು ನಿಜಾಮ ಸರಕಾರದ ಕೃಪೆಯಿಂದ ರಾಜಕೀಯ ಚಳವಳಿಯು ದೆಸೆಯಿಂದ ವಕೀಲಿಯ ಸನದು ಕಳಕೊಂಡಂಥ ಶ್ರೀ ರಾಘವೇಂದ್ರರಾಯರು ನಿನ್ನಿನ ದಿವಸ [illegible] ದರು. ಬಳಿಕ ಆಗ್ಗೆ [illegible] ಶ್ರೀ [illegible] ಮತ್ತು ಶ್ರೀ. [illegible] ಇವರು ಮುಂತೆ ಸುಬ್ಬಯ್ಯಗೆ [illegible]ದರು, ರಾತ್ರೀಯ ಶಾಲೆಯಲ್ಲಿ ಇವರ [illegible] ಗಳಾದವು. ಇವರ ವ್ಯಾಖ್ಯಾನಗಳ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ.

ಶ್ರೀ. ರಾಜಗೋಪಾಲಾಚಾರ್ಯ [illegible] ಆನಂದಾನಂದವು.

ಮಹಾತ್ಮರ ಬಿಡುಗಡೆಯ ಹಿಗ್ಗಿನಸಮಗೆ [illegible] ನಂದವಾಗಿದೆ. ಈ ಆನಂದದ [illegible] ನಮ್ಮ ಕರ್ತವ್ಯವನ್ನು [illegible] ಒಂದು ತಿಂಗಳು ಗಾಂಧೀ ಮಾಸವೆಂದು [illegible] ತಿಂಗಳು ಖಾದಿಯ ಪ್ರಸಾರ [illegible] ಮಾಡಿಸಿದೆ. [illegible] ಮಹಾತ್ಮರು ಬಂದ [illegible] ಮಹಾತ್ಮರ [illegible] ಮಾಡುವ [illegible]

[illegible]

ಮಹಾತ್ಮರ [illegible] ಈಗ [illegible] ಮಹಾತ್ಮರು [illegible] ಅವರ [illegible] ಮಹಾತ್ಮರು [illegible]

[illegible] ಕಾಂಗ್ರೆಸಿನಿಂದ [illegible] ಇದು ಪ್ರತಿಯೊಬ್ಬರ ಕೆಲಸವು [illegible] ಜನರಿಗೆ [illegible] ಜನವು, ಹೆಂಗಸರು, [illegible] ರುವ ರಾಟಿಗಳ ಮೇಲಿನ [illegible] ಮತ್ತು ಅದನ್ನೆ [illegible] ಖಾದಿಯ ಮಹತ್ವವನ್ನು [illegible] ಖಾದಿಯನ್ನು ನೆಯುವದೂ, [illegible] ದಿಲ್ಲೆಂದು ಹೇಳುತ್ತಾರೆ. [illegible] ದನ್ನು. ಆದರೂ ಖಾದಿಯ ಮಹತ್ವ [illegible] ವೇ ತಿಳಿಯಿತು.

ಖಾದಿ ಮತ್ತು [illegible]

[illegible] ಬೇಕಾದರೆ [illegible] ನಮ್ಮ [illegible] ಆನಂದದ ಕರ್ತವ್ಯ [illegible] ಮಹಾತ್ಮರು [illegible] ಸಂಗ್ರಹ ಮಾಡುತ್ತಾರೆ. ಆ ಪ್ರಕಾರ ಖಾದಿಯ ಸಂಗ್ರಹ ಮಾಡಿ, [illegible] ಮಾಡಬೇಕು [illegible] ಮಾಡುವ ವಿದ್ಯಾರ್ಥಿಯು [illegible]

ಕನು ತಿಂಗಳಿಗೆ ಸಾವಿರಾರು ರೂಪಾಯಿಗಳನ್ನು ಸಹಜವಾಗಿ ಗಳಿಸುವನು ವಿಲಾಯತಿಯಲ್ಲಿ ಬಡವರು ಕೋಟ್ಯಾಧೀಶರಾದರೆಂಬುದನ್ನು ಲಕ್ಷ್ಯಕ್ಕೆ ತನ್ನಿರಿ. ಬಡವರಾಗಿ ಬೀದಿಗಳಲ್ಲಿ ಮಾರಿದಂಥವರೇ ಕುಬೇರರಾಗಿದ್ದಾರೆ. ಈಗಂತೂ ಇವರೇ ಮಂತ್ರಿ ಪದಾರೂಢರಾಗಿದ್ದಾರೆ.

ಖಾದಿಯ ಏಜಂಟರಾಗಿರಿ.

ವಿಲಾಯತಿಯ ಬಟ್ಟೆಗಳನ್ನು ಕೊಳ್ಳುವಂಥ ಪ್ರತಿಯೊಬ್ಬನು ಅವುಗಳ ಏಜಂಟನಾಗಿರುತ್ತಾನೆ. ಜಾನಕೊಂದು ಉಲವಾರಿನ ಅರಿವೆ, ಇಟಲಿಯ ಟೊಪ್ಪಿಗೆ, ಕೃವಸ್ತ್ರ ಕೊಂಡನೆಂದರೆ- ಅದರ ಶಿಫಾರಸ ಮಾಡಿ, ಎರಡನೆಯವರಿಗೂ ಅದನ್ನು ಕೊಳ್ಳಲಿಕ್ಕೆ ಹಚ್ಚುತ್ತಾನೆ ಆದ್ದರಿಂದ ಸಂದಿಗೊಂದಿಯಲ್ಲಿರುವ ಹಳ್ಳಿಯಲ್ಲಿಯೂ ಅದರ ಪ್ರವೇಶವಾಗಿರುತ್ತದೆ. ಇದರಂತೆ ನಾವು ಖಾದಿಯ ಪ್ರಸಾರ ಮಾಡತಕ್ಕದ್ದು. ಇದರ ಸಲುವಾಗಿ, ಹರಿ ಮುಂತಾದ [illegible] ಭೇದಗಳನ್ನೆಣಿಸದೆ, ಇವುಗಳಿಂದಾದ ಪ್ರಯೋಜನವನ್ನು ಲಕ್ಷ್ಯಕ್ಕೆ ತಂದು ಖಾದಿಯ ಏಜಂಟರಾಗತಕ್ಕದ್ದು.

ಒಂದು ಹಳ್ಳಿಯ ಸೊಬಗು-

ನಿನ್ನೆ ನಾವೊಂದು ಹಳ್ಳಿಗೆ (ಪಾಚ್ಛಾಪೂರ) ಹೋಗಿದ್ದೆವು ಅಲ್ಲಿ ಲಿಂಗಾಯಿತರ ಒಬ್ಬ ಹೆಣ್ಣುಮಗಳು ಖಾದಿಯಿಂದ ತನ್ನ ಮನೆಯಲ್ಲಿ ಹೇಗೆ ರೊಕ್ಕ ಉಳಿಕ್ಕೆ ಹತ್ತಿರುತ್ತದೆಂಬುದನ್ನು ಹೇಳಿದಳು ಆಗ ಸುಮಾರು ೩೦-೪೦ ಹೆಂಗಸರು ಕೂಡಿದ್ದರು ಇವರೆಲ್ಲರೂ ನೂಲುತ್ತಿದ್ದಾರೆ. ಇವರು ನೂಲಲಿಕ್ಕೆ ಪ್ರಾರಂಭಿಸಿದ ಬಳಿಕ ಉಪ್ಪು ಎಣ್ಣೆಯನ್ನೂ ತಾವೇ ಕೊಳ್ಳುತ್ತಿರುವರಲ್ಲದೆ, ತಮ್ಮ ಅರಿವೆಗಳನ್ನೂ ಕೊಳ್ಳುತ್ತಿದ್ದಾರೆ. ಈ ಸ್ತ್ರೀಯರಲ್ಲಿ ಬಹಳ ಉತ್ಸಾಹವಿರುವು. ಇವರು ಕುಸು ದಿವಸಗಳಲ್ಲಿಯೇ ತಮ್ಮ ಕರಕೇ ನೇಯಿಸಿದ, ಅವೇ ಬಟ್ಟೆಗಳನ್ನು ಧರಿಸುವಂತೆ ಪವಣಾನ ತೊಟ್ಟಿದ್ದಾರೆ. ಆ ಪ್ರಕಾರ ಪ್ರತಿಯೊಂದು ಊರಲ್ಲಿ ಅಭಿಮಾನ ಜಾಗೃತವಾಗಿರತಕ್ಕದ್ದು.

ಖಾದಿಯ ವ್ಹಾಲಂಟಿಯರರು-

ಶ್ರೀ ಪಟವರ್ಧನ ವಕೀಲರು ಖಾದಿಯ ಪ್ರಚಾರಕ್ಕಾಗಿ ನೂರು ರೂಪಾಯಿ ಕೊಡಲೊಪ್ಪಿದ್ದಾರೆಂದು ಈಗಲೆ ಕೇಳಬ್ಬಾಯಿತು ಇದೇ ಪ್ರಕಾರ ಅನೇಕ ಜನ ತರುಣರು ಎದ್ದುನಿಂತು ಖಾದಿ ವ್ಹಾಲಂಟಿಯರರಾಗುವದನ್ನು ನೋಡಿ ಸಂತೋಷವಾಯಿತು. ಅವರು ಇಲ್ಲಿ ಹೆಸರು ಬರಿಸಲಿಕ್ಕೆ ಸಂಜಬಹುದು. [illegible] ರಿಂದ ಇಂಥವರು ಕಾಂಗ್ರೆಸ ಕಚೇರಿಗೆ ಹೋಗಿ ತಮ್ಮ ಹೆಸರು ಬರೆಸತಕ್ಕದ್ದು. ಈವರ್ಷವೆಲ್ಲ ಖಾದಿ ಪ್ರಸಾರದಲ್ಲಿ ಕಳೆಯಬೇಕೆಂಬ ಕಾಂಗ್ರೆಸದ ನಿರ್ಣಯದೆ. ಅದಕ್ಕೆ ನೀವೆಲ್ಲರೂ ಸಹಾಯ್ಯಮಾಡುವಿರೆಂದು ಪೂರಾ ನಂಬಿದ್ದೇನೆ.

ಮಹಾತ್ಮಾ ಗಾಂಧಿಯವರು ಹೆಚ್ಚಿನ ಜೇಲರರು.

—o—

೧. ಬ್ಯಾಂಕರರ ಭಾಷಣ-

ಖಾದಿಯ ವಿಷಯವಾಗಿ ಪ್ರಾರಂಭದಲ್ಲಿ ನಾನು ಮೂನಸೀಕ ಮಾಡಿದ್ದೆನು. ನಾನು ಬನಿಯಾದರೂ ಅದರಲ್ಲಿ ಲಾಭ್ಯವೆಂದು ನನಗೆ ಅನಿಸಲಿಲ್ಲ. ಗೆಲುವದಿಲ್ಲೆಂದು ನಾನು ಪರಿಪರಿಯಿಂದ ಮಹಾತ್ಮರಿಗೆ ನಿವೇದನ ಹೇಳಿದೆನು. ಕೆಮ್ಮು, ದಮ್ಮು ಕ್ಷಯ ರೋಗಬರುವದೆಂದು ಸಹ ಹೇಳಿಕೊಂಡೆನು. ಆದರೆ ಎರಡು ತಾಸು ನೂಲಲಿಕ್ಕೇಬೇಕೆಂದು ಅವರು ಆಗ್ರಹ ಮಾಡಿದರು. ಯರವಡೆಯ ತುರಂಗಕ್ಕೆ ದಬಿಕ ಅವರಿಗೆ ಪ್ರಾರಂಭದಲ್ಲಿ ಚರಕಾ ಕೊಡಲಿಲ್ಲ ಆದರೆ ಮುಂದೆ ಅವರು ತನಗೆ ಮಾತ್ರವಲ್ಲ, ಎಲ್ಲ ರಾಜಕೀಯ ಕೈದಿಗಳಿಗೆ ಚರಕಾ ದೊರೆಯುವಂತೆ ಮಾಡಿಕೊಟ್ಟರು. ಮಹಾತ್ಮಾಜಿಯವರು ದಿನಾಲು ನಾಲ್ಕು ತಾಸು ನೂತಹೊರತು ಸಾಯಂಕಾಲದ ಭೋಜನ ಮಾಡುತ್ತಿದ್ದಿಲ್ಲ; ಇದೇ ಪ್ರಕಾರ ಎಲ್ಲರೂ ದುಡಿಯಬೇಕೆಂಬುದು ಇವರ ಅಭಿಲಾಷೆಯು. ಇವರು ರಾಜಕೀಯ ಕೈದಿಗಳ ಮೇಲೆ ಜೇಲರರಿಗಿಂತ ಹೆಚ್ಚಿನ ಜೇಲರರಾಗಿದ್ದರು. ಈ ಕೈದಿಗಳು ನೂತದ್ದೆಲ್ಲ ದಿನಾಲು ಮಹಾತ್ಮರ ಕಡೆಗೆ ಬರುವದು. ಅವರು ಇವುಗಳ ಗುಣದೋಷದ ಪರೀಕ್ಷೆ ಮಾಡುವರು. ಚಲೋದ್ದಕ್ಕೆ ಶಾಬಾಸ ಕೊಡುವರು. ಕೆಟ್ಟದ್ದನ್ನು ತೋರಿಸಿ, ಸುಧಾರಿಸಲಿಕ್ಕೆ ತಿಳಿಸುವರು. ಇದಕ್ಕಿಂತ ಸುಸಕ್ಕದ ಸಂದೇಶವನ್ನು ಹೇಳತಕ್ಕದ್ದು ಮಹಾತ್ಮರಿಗೆ ಬೇರೊಂದಿರುವದಿಲ್ಲ.

ಕೆಲಸ ಮಾಡತಕ್ಕವನಿಗೆ ಹೊತ್ತುಂಟು-

ಎಷ್ಟೋ ಜನರು ಕೆಲಸ ಮಾಡಲಿಕ್ಕೆ ಹೊತ್ತು ಇಲ್ಲೆಂದು ಹೇಳುತ್ತಾರೆ. ಮಧುರೆಯಲ್ಲಿ ಒಬ್ಬ ದೊಡ್ಡ ವಕೀಲರು ತಕರಾರು ತೆಗೆದರು. ಅವರಿಗೆ ಸಂಗೀತದಲ್ಲಿ ಬಹಳ ಆಸಕ್ತಿ, ಮೇಜವಾಗಿ ಆಟಗಳಲ್ಲಿಯೂ ಮನಸ್ಸು ಹಾಕುವರು. ಮನುಷ್ಯನಿಗೆ ವ್ಯರ್ಥವಾಗಿ ಹೊತ್ತುಗಳೆಯುವ ಒಂದಲ್ಲೊಂದು ಆಟ ನೋಟದ ಚಟಿಯು ಇದ್ದೇ ಇರುತ್ತದೆ. ಇದರಲ್ಲಿಯೇ ಕುಸು ವೇಳೆಯನ್ನು ನೂಲುವದರಲ್ಲಿ ಕಳೆದರೆ ದೇಶದ ಕಲ್ಯಾಣವಾಗುವದು ನಾವು ನಿನ್ನಿನ ದಿವಸ ನೋಡಿದ ಹಳ್ಳಿಯಿಂದ ಕರ್ನಾಟಕದಲ್ಲಿ ಖಾದಿ ಹುಟ್ಟುವಳಿಗೆ ಬಹಳ ಅನುಕೂಲ ಸ್ಥಳವಿರತ್ತದೆಂದೆನಿಸಿತು. ಜನರು ತಂತಮ್ಮ ಯೋಗ್ಯತೆಯ ಪ್ರಕಾರ ಒಂದು ನಿಧಿಯನ್ನು ಕೂಡಿಹಾಕುವದರಿಂದ ಮತ್ತು ಕಾಂಗ್ರೆಸ ಕಮಿಟಿಯವರು [illegible] ಸಹಾಯದಿಂದ ಲಕ್ಷೆರಡು ಲಕ್ಷ ರೂಪಾಯಿಗಳ ಸಂಗ್ರಹವಾಗಿ ಖಾದಿಯ ಕೆಲಸವು ದೊಡ್ಡ ಪ್ರಮಾಣದಿಂದ ನಡೆಯುವದು. "

ಶ್ರೀ ರಾಘವೇಂದ್ರಾಚಾರ್ಯ ಭಾಷಣ-

ಕರ್ನಾಟಕದ ಸೇವೆ.

ನಿಜಾಮ ಸಾಹೇಬರು ನನ್ನ ಸನದು ಕಸಕೊಂಡರು. ಈ ಬಗ್ಗೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಏಕೆಂದರೆ- ಸನದು ಕಸಕೊಂಡದ್ದರಿಂದಲೇ ದೇಶಸೇವೆ ಮಾಡಲು ನನಗೆ ಸಂಪೂರ್ಣ ಸವುಡು ದೊರೆಯಿತು. ಈ ವರ್ಷ ಕರ್ನಾಟಕದಲ್ಲಿ ಕಾಂಗ್ರೆಸ ಸಭೆಯು ಕೂಡತಕ್ಕದ್ದಿರುತ್ತದಷ್ಟೇ, ಈ ಸಂಧಿಯಲ್ಲಿ ಕರ್ನಾಟಕದ ಸೇವೆ ಮಾಡಬೇಕೆಂದಿರುತ್ತೇನೆ, ಈ ಸೇವೆಯನ್ನು ನೀವು ತಕ್ಕೊಳ್ಳುವಿರೆಂದು ಆಶಿಸುತ್ತೇನೆ.

ಈ ಪ್ರಕಾರ ಇವರ ಭಾಷಣಗಳಾದ ಬಳಿಕ ದೇಶಭಕ್ತ ವಿನಾಯಕರಾವ ಜೋಶಿಯವರು ಇವರ ಆಭಾರಮನ್ನಿಸಿದರು. ಮತ್ತು ಅತಿಥಿಗಳು ಮೋಟಾರಿನಿಂದ ಹುಬ್ಬಳಿಗೆ ಪ್ರಯಾಣಬೆಳೆಸಿದರು.

ಇಂಗ್ರೇಜಿ ದಂಡಿನಲ್ಲಿ ಹಿಂದೀ ಸೈನ್ಯದ ಮಿಶ್ರಣ.

—o—

ಅಸೆಂಬ್ಲಿಯಲ್ಲಿ ಶ್ರೀ ವೆಂಕಟಾಪತಿರಾಜು ಇವರು ಕೆಂಪು ಹಾಗು ಕರಿ ಈ ಸೈನ್ಯಗಳನ್ನು ಬೇರೆಬೇರೆ ಮಾಡದೆ, ಇವುಗಳ ಮಿಶ್ರ ಪಥಯನ್ನೆ ಮಾಡಬೇಕೆಂಬ ಠರಾವು ತಂದರು ಇದರಲ್ಲಿ ಇವರು ಮುಖ್ಯವಾಗಿ ಮೂರು ಮಾತುಗಳನ್ನು ಹೇಳಿದರು.

೧ ಜನಾಂಗ ಭೇದವನ್ನು ಅಳಿಯಲೋಸುಗ ಯುರೋಪಿಯನ ಮತ್ತು ಹಿಂದೀ ಎಂಬ ಭೇದವನ್ನು ಮಾಡದೆ, ಉಭಯತರನ್ನು ಒಂದೇ ದಂಡಿನಲ್ಲಿ ಸೇರಿಸಿಕೊಳ್ಳಬೇಕು.

೨ ಪ್ರತಿವರ್ಷ ಹತ್ತುಸಾವಿರದಂತೆ ಹಿಂದೀ ಸೈನ್ಯವನ್ನು ಹೆಚ್ಚಿಸುತ್ತಾ ಹೋಗಬೇಕು; ಮತ್ತು ಈಗಿನ ಕೆಂಪು ಸೈನ್ಯವನ್ನು ಆ ಪ್ರಮಾಣದಿಂದ ಅರ್ಧದ ತನಕ ಕಡಿಮೆ ಮಾಡುತ್ತಾ ಹೋಗಬೇಕು.

೩ ಹೊಸ ಸೈನ್ಯದ ಶಿಕ್ಷಣಕ್ಕೆ ದ್ರವ್ಯದ ಏರ್ಪಾಡು ಮಾಡಬೇಕು.

ಹಿಂದುಸ್ಥಾನವು ಸ್ವರಾಜ್ಯದ ತಳಿಜಾಗಿಬದಲ್ಲಿ ನಿಂತಿರುವಾಗ ಸರಕಾರವು ಇಂಗ್ಲಿಷ ಮತ್ತು ಹಿಂದೀ ಎಂಬ ಭೇದ ಮಾಡಬಾರದು, ಮತ್ತು ಲೇಬರ ಸರಕಾರವು ನಮಗೆ ಸಹಾಯ ಮಾಡಬೇಕೆಂದು ಇವರು ಭಾಷಣ ಮಾಡಿದ ನಂತರ ಶ್ರೀ. ಬಿಪಿನ ಚಂದ್ರಪಾಲರು ಅಂದದ್ದೇನಂದರೆ-

" ಜನಾಂಗ ಭೇದವು ಮೂರ್ತಿಮಂತವಾಗಿರುವ ತನಕ ಸೈನ್ಯದಲ್ಲಿ ಸೇರಿರೆಂದು ನಾನೆಂದೂ ನನ್ನ ತರುಣ ಜನರಿಗೆ ಉಪದೇಶ ಮಾಡಲಾರೆನು. ಹಿಂದೀ ಜನರು ದೇಶ ರಕ್ಷಣೆಯ ಕೆಲಸದಲ್ಲಿ ಭಾಗ ತಕ್ಕೊಂಡ ಹೊರತು ಹಿಂದುಸ್ಥಾನವು ಸ್ವರಾಜ್ಯ ಪಡೆದಂತಾಗಲಾರದು, ಹಿಂದೂ ಜನರು ಮುಳಕೀ ಕಾರಭಾರವನ್ನು ಮಾತ್ರ ಒಪ್ಪಿಸಿಕೊಂಡು, ದಂಡಿನ ಖಾತೆಯನ್ನು ಯುರೋಪಿಯನರಿಗೇ ಒಪ್ಪಿಸಬೇಕೆನ್ನುತ್ತಾರೆಂದು ನಾವೆಂದೂ ಅಂದಿಲ್ಲ. ಸರಕಾರವು ಈ ಪ್ರಕಾರ ಭೇದ ನೀತಿಯನ್ನು ನಡಿಸಿದರೆ- ಬಂಗಾಳದಲ್ಲಿ ಹೊರಟಂಥ ಗುಪ್ತ ಸಂಘಗಳು ಹೊರಡುವವು. ಇದರಿಂದ ಅನರ್ಥಕ್ಕೇ ಕಾರಣವಾಗುತ್ತದೆ''

ಇದಕ್ಕೆ ಯುರೋಪಿಯನ ಮೆಂಬರರು ಕೊಟ್ಟ ಉತ್ತರದ ಸಾರಾಂಶವು—

ಹಿಂದುಸ್ಥಾನದ ಸಂರಕ್ಷಣೆಗಾಗಿ ಹಿಂದೀ ಜನರು ಭಾಗ ತಕ್ಕೊಳ್ಳಬೇಕೆಂಬುದನ್ನು ಹಕ್ಕಿನಿಂದ ಕೇಳುವದು ಸಂಪೂರ್ಣ ನ್ಯಾಯವಾದದ್ದೂ ಯೋಗ್ಯವಾದದ್ದೂ ಇರುತ್ತದೆ. ಹಿಂದೀ ಟೆರಿಟೋರಿಯಲ ಸೈನ್ಯದ ಜವಾಬದಾರಿಯು ಆಂಗ್ಲೋ ಇಂಡಿಯನರ ಆಗ್ಜಲರಿ ಸೈನ್ಯಕ್ಕಿಂತ ದೊಡ್ಡದಾಗಿರುತ್ತದೆ. ಯುರೋಪಿಯನ, ಯುರೇಶಿಯನ ಮತ್ತು ಹಿಂದೀ ಜನರನ್ನು ಭೇದ ಭಾವವಿಲ್ಲದೆ ಒಂದೇ ಕಂಪನಿಯಲ್ಲಿ ಕಲೆ ಹಾಕುವದರಿಂದ, ದಂಡಿನ ಸಾಮರ್ಥ್ಯಕ್ಕೆ ದೊಡ್ಡ ಧಕ್ಕೆ ಬಡೆದಂತಾಗುವದು."

ಇದಕ್ಕೆ ಪಂಡಿತ ಮಾಲವೀಯರವರು ಉಪಸೂಚನೆ ತಂದು-

" ಸೈನ್ಯದಲ್ಲಿಯ ಜಾತಿಭೇದವನ್ನು ತೆಗೆದು ಹಾಕಿ, ಹಿಂದೀ ಟೆರಿಟೋರಿಯಲದ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೆ ಒಂದು ಕಮಿಟಿ ನೇಮಿಸಬೇಕೆಂದು "

ಭಾಷಣ ಮಾಡಿದರು ಈ ಸೂಚನೆಯನ್ನು ಸರಕಾರದವರು ಕೊನೆಯಲ್ಲಿ ಒಪ್ಪಿದರು. ಸೊಲ್ಜರ ಮತ್ತು ಯುರೇಶಿಯನರ ಸಂಬಳ ಹೆಚ್ಚು, ಆದರೆ ಅವರ ಜವಾಬದಾರಿಯು ಕಡಿಮೆ ಈ ಪ್ರಕಾರ ಸದ್ಯದಲ್ಲಿ ಹಿಂದೀ ಸೈನ್ಯದ ಪರಿಸ್ಥಿತಿಯಾಗಿದೆ. ಬೆಂಕಿಯ ಬಾಯಿಗೆ ಹೋಗಲು ಹಿಂದೀ ಸೈನಿಕರು ಎಳಿಬೇಕು, ಯುರೋಪಿಯನ ಯುರೇಶಿಯನರು ಇವರ ಬೆಂಗಾವಲಲ್ಲಿರಬೇಕೆಂಬನೇದು ಮತ್ತೊಂದು ಪದ್ಧತಿಯಾಗಿರುತ್ತದೆ. ಆದ್ದರಿಂದಲೇ ಇವುಗಳಲ್ಲಿ ಭೇದ ಮಾಡಬಾರದೆಂತಲೇ ಮೇಲಿನ ಠರಾವು ಇರುತ್ತದೆ

ದಿವಂಗತ ವಿಲ್ಸನ್ ಸಾಹೇಬರ ೧೪ ತತ್ವಗಳಿಂದ ಜಗತ್ತಿನಲ್ಲಾದ ಕ್ರಾಂತಿಯು

—o—

ಅಮೇರಿಕೆಯ ಅಧ್ಯಕ್ಷರಾಗಿ ಪರಲೋಕವಾಸಿಯಾಗಿರುವ ಮಿ ವಿಲ್ಸನ್ ಸಾಹೇಬರ ಹೆಸರು ಮಹಾ ಯುದ್ಧದ ಇತಿಹಾಸದಲ್ಲಿ ಚಾಣಕ್ಯ ಚಂದ್ರಗುಪ್ತ ಕಲಹದಂತೆ ಪ್ರಸಿದ್ಧವಾಗಿರುವದು. ಮಹಾಯುದ್ಧ ಪ್ರಾರಂಭವಾದಕೂಡಲೆ ಇವರು ತಟಸ್ಥ ವೃತ್ತಿಯವರಂತೆ ನಟಿಸಿದರೂ, ಜರ್ಮನಿಯ ವಿರುದ್ಧ ನಿಲುವ ದೇಶಗಳಿಗೆ ತಮ್ಮ ದೇಶದಿಂದಾಗುತ್ತಿದ್ದ ನೆರವಿಗೆ ಯಾವಪ್ರಕಾರದ ಪ್ರತಿಬಂಧ ಮಾಡಲಿಲ್ಲ, ಸಂಯುಕ್ತರಿಗೆ ಮದ್ದುಗುಂಡಿನ ಪೂರೈಕೆ ಮಾಡುವದು ಕಾಳಗಗಳ ಕಟ್ಟಳೆಗೆ ವಿರುದ್ಧವಾಗಿರುತ್ತದೆಂದು ಜರ್ಮನ್ ರಾಯಭಾರಿಯು ಹೇಳುತ್ತಾ ಬಂದರೂ, ಅದನ್ನು ಲಕ್ಷಿಸಲಿಲ್ಲ. ಜರ್ಮನಿಯು ಅತ್ಯಾಚಾರಕ್ಕೆ ನಿಂತಿತು. ಅದನ್ನು ಶಿಕ್ಷಿಸಲಿಕ್ಕೆ ಬೇಕೆಂದು, ಅಮೇರಿಕೆಯನ್ನು ಸಂಯುಕ್ತರಲ್ಲಿ ಸೇರಿಸಿ, ಲಕ್ಷಸಂಖ್ಯೆಯಿಂದ ದಂಡು ಕಳಿಸಿ, ಮದ್ದುಗುಂಡು ಧನ-ಧಾನ್ಯ ಮೊದಲಾಗಿ ಪ್ರತಿಯೊಂದು ಪ್ರಕಾರದ ನೆರವನ್ನು ವಿಲಾಯತಿಗೆ ಕಳಿಸಿದ್ದರಿಂದ, ಜರ್ಮನಿಯು ಶಸ್ತ್ರವನ್ನು ಕೆಳಗಿಟ್ಟಿತು. ಶಸ್ತ್ರ ಕೆಳಗಿಡುವಾಗ ತನಗೆ ಮಾಜಿಸಿ ತನ್ನ ವಿರುದ್ಧ ಶಕ್ತಿ ಹರಿಬಿಟ್ಟಂಥ ವಿಲ್ಸನ್‌ಸಾಹೇಬರಿಗೇ ಮರೆಹೊಕ್ಕಿತು ಈ ಸಾಹೇಬರು ಆ ಮುಂದಾಗಿ ಪ್ರಸಿದ್ಧ ಮಾಡಿದ ೧೪ ತತ್ವಗಳಂತೆ ಒಪ್ಪಂದವಾದರೆ ತಮಗೇನೂ ಬಾಧೆಯಿರುವದಿಲ್ಲೆಂದು ಜರ್ಮನ ಪ್ರಜರು ದೃಢವಾಗಿ ನಂಬಿಕೊಂಡರು. ಪ್ರಾರಂಭದಲ್ಲಿ ಇವು ಬಲು ಚಂದಕಂಡವು. ಇವುಗಳಂತೆ ಜಗತ್ತು ನಡಿಯಬೇಕೆಂದು ಒಡಂಬಡಿಕೆಯ ಶರ್ತುಗಳನ್ನು ಠರಿಸುವದಕ್ಕಾಗಿ ಇವರು ಸ್ವತಃ ಪಾರೀಸಕ್ಕೆ ಬಂದರು. ಆದರೆ ಅಲ್ಲಿ ಫ್ರಾನ್ಸದ ಹುಲಿಯೆಂದು ಹೆಸರು ಪಡೆದ ಮಿ. ಕ್ಲೆಮನ್ಸೊ ಮತ್ತು ರಾಜಕಾರಣ ಒಂದ ಕೂಡಲೆ ಟೊಪ್ಪಿಗೆಯನ್ನು ಹೇಗೆ ತಿರುಗಬೇಕೆಂಬುದನ್ನು ಪೂರಾ ಬಲ್ಲವರಾಗಿದ್ದ ಇಂಗ್ಲಂಡದ ಮಿ ಲಾಯಿಡ ಜಾರ್ಜಸಾಹೇಬರ ತಂತ್ರದಲ್ಲಿ ಸಿಕ್ಕು, ಅಂದಿದಂತೆ ಮಾಡಲಾಗದೆ, ಹತಾಶರಾಗಿ ಸ್ವದೇಶದ ದಾರಿ ಹಿಡಿದರು. ಜರ್ಮನಿಯು ಉಬ್ಬಿದಷ್ಟು ರಸಾತಳಕ್ಕೆ ಹೋಯಿತು, ತುರ್ಕಸ್ಥಾನದಲ್ಲಿ ಕೆಮಾಲ ಪಾಶ್ಯಾ ಇವರು ಸ್ವತಂತ್ರವಾದ ರಾಜ್ಯ ಸ್ಥಾಪನೆ ಮಾಡಿದರು. ರಶಿಯವನ್ನು ಇಂದಿಗೂ ರಾಷ್ಟ್ರ ಸಂಘದಲ್ಲಿ ಸೇರಿಸಿಕೊಳ್ಳಲಿಲ್ಲ. ಒಡಂಬಡಿಕೆಯಾದರೂ ಜರ್ಮನಿಯು ರಾಷ್ಟ್ರ ಸಂಘದ ಮೆಂಬರವಾಗಲಿಲ್ಲ. ಹಿಂದುಸ್ಥಾನವು ಈ ಸಂಘದ ಮೆಂಬರವಾದರೂ, ಸ್ವಯಂ ನಿರ್ಣಯ ತತ್ವವೆಂದರೇನೆಂಬುದು ಇನ್ನೂ ಗೊತ್ತಾಗಲೊಲ್ಲದು. ೧೪ ತತ್ವಗಳ ಪ್ರಕಾರ ಜಗತ್ತಿನಲ್ಲಿ ಮುಖ್ಯವಾಗಿ ವಿಲಾಯತಿಯಲ್ಲಿ ಶಾಂತತೆಯು ನೆಲೆಗೊಳ್ಳಬೇಕಾಗಿದ್ದರೂ, ಹಾಗೇನೂ ಸಂಭವಿಸಿಯಾಗಲಿಲ್ಲ ಜರ್ಮನಿಯನ್ನು ದಬಾಯಿಸಲಿಕ್ಕೆ ಒಟ್ಟಿನ ಕಾರ್ಯದಲ್ಲಿ ಕಂಕಣ ಬದ್ಧವಾದ ಇಂಗ್ಲಂಡ ಫ್ರಾನ್ಸಗಳು ಒಂದಕ್ಕೊಂದು ಸಂಶಯ ಭಾವದಿಂದ ನೋಡುತ್ತಿರುವವು. ಇಂಗ್ಲಂಡವು ಕಳೆದೊಂದು ವರ್ಷದಿಂದ ಜರ್ಮನಿಯ ಕಡೆಗಾಗಿದ್ದು, ಫ್ರಾನ್ಸವು ಜರ್ಮನಿಯ ರಕ್ತ ಹೀರುವದು ಇದಕ್ಕೆ ಇಷ್ಟವಿಲ್ಲ. ಇಟಲಿ, ಸ್ಪೇನ-ಮುಂತಾದ ದೇಶಗಳಲ್ಲಿ ಸ್ವಯಂ ನಿರ್ಣಯ ತತ್ವವು ವಿಪರೀತ ಮಾರ್ಗದಿಂದ ಬಳಿಗೊಂಡು, ಗಟ್ಟಳ್ಳವರು ರಾಜ್ಯಕರ್ತರಾಗಿ, ಅರಸರೆ-ಬವರು ಹೆಸರಿಗೆ ಉಳಿದಿದ್ದಾರೆ. ಪ್ರತಿಯೊಂದು ದೇಶವು ತನಗೆ ಕಂಡ ದಾರಿಯಿಂದ ರಾಜ್ಯಕಾರಭಾರ ಮಾಡುತ್ತಿದ್ದು, ಪರರ ಒಳಬೇಶದ ಕಾರಭಾರದಲ್ಲಿ ತಾವೇಕೆ ಕೈ ಹಾಕಬೇಕೆಂದು ಎಲ್ಲ ದೇಶಗಳು ತುಷ್ಣೀಂಭಾವದಲ್ಲಿರುತ್ತವೆ. ವಿಲಾಯತಿಯಲ್ಲಿ ನಿಜವಾದ ಶಾಂತತೆ ಎಂಬುವದು ಇಲ್ಲವೇ ಇಲ್ಲ. [illegible] ಮದ್ದಿನ ಕೋಣೆಯಾಗಿದೆ ಯಾವಾಗ ಇದರಲ್ಲಿ ಕಿಡಿ ಬೀಳುವದೆಂಬ ನಂಬಿಗೆಯಿಲ್ಲೆಂದು ಮುತ್ಸದ್ದಿಗಳು ಅನ್ನುವದು ತಪ್ಪಿರುವದಿಲ್ಲ. ಇಂಗ್ಲಂಡ ಮತ್ತು ಜಪಾನದ ಗಾಢವಾದ ವಿಶೇಷ ಮಿತ್ರತ್ವವಿದ್ದರೂ, ಇಂಗ್ಲಂಡವು ಸಿಂಗಾಪೂರದಲ್ಲಿ ಕಟ್ಟಲೆಣಿಸಿದ ಹಡಗಗಟ್ಟೆಯ ಬಂದರದ ಬಗ್ಗೆ ಜಪಾನವು ಇಂಗ್ಲಂಡದ ಉದ್ದೇಶದ ವಿಷಯವಾಗಿ ಸಂಶಯಗೊಂಡಿರುತ್ತದೆ. ಮೇಲಿನ ಸಂಗತಿಗಳನ್ನು ಧ್ಯಾನಕ್ಕೆ ತರಲು- ಸ್ವರ್ಗವಾಸಿ ವಿಲ್ಸನ ಸಾಹೇಬರ ೧೪ ತತ್ವಗಳಿಂದ ಜಗತ್ತಿನಲ್ಲಿ ಉತ್ಕ್ರಾಂತಿಯಾಗದೆ, ರಾಜ್ಯಕ್ರಾಂತಿಯಾಗಿರುತ್ತದೆಂದು ಕಂಡು ಬರುವದು ಮತ್ತು ಮುಂದೆ ಮಹಾಯುದ್ಧದಂಥ ಯುದ್ಧವಾಗಿ ಯಾವನಾದರು ತತ್ವಜ್ಞಾನಿಯು ವಿಲ್ಸನ ಸಾಹೇಬರಂಥ ತತ್ವಗಳನ್ನು ಹೇಳಿ ಒಪ್ಪಂದ ಮಾಡಿಸಲಿಕ್ಕೆ ಬಂದರೆ- ಅವನಿಗೆ ನೋಡುವರು ಸಹ ದೂರದಿಂದಲೇ ತದಣಾ ಮಾಡದಿರರು.

ರಶಿಯಾ, ಇಂಗ್ಲಂಡ ಮತ್ತು ಇಟಲಿ.

ಹೊಸ ಒಡಂಬಡಿಕೆಗಳು.

—o—

ಮಿ. [illegible] ದ ಬಾರ್ಜರಾಲಿ, ಇವರ ಕಲುನಾವಾ ಮಂತ್ರಿಯಾಗಿ ಬಂದ ಮಿ ಬಾಲ್ಡವಿನ ಸಾಹೇಬರೇ ಆಗಲಿ, ರಶಿಯಾದ ಕೂಡ ರಾಜಕೀಯ ಒಪ್ಪಂದ ಮಾಡಿಕೊಂಡರೆ- ಬೋಲ್ಷವಿಕ ಭೂತವು ತಮ್ಮ ರಾಜ್ಯದಲ್ಲಿ ಸೇರುವದೆಂದು ಹೆದರಿಕೊಂಡು, ರಶಿಯಾದಿಂದ ಆದಷ್ಟು ದೂರಿರುವ ಉಪಾಯವನ್ನೇ ಹುಡುಕುತ್ತಿದ್ದರು. ಮಿ ಮ್ಯಾಕಡೋನಾಲ್ಡ ಸಾಹೇಬರು ದಿವಾನರಾಗಿ ಬಂದ ಕೂಡಲೆ- ರಶಿಯಾದ ಕೂಡ ರಾಜಕೀಯ ಒಪ್ಪಂದ ಮಾಡಿಕೊಳ್ಳಲುದ್ಯುಕ್ತರಾದರು. ಇವರಂತೆ ಇಟಲಿಯೂ ಮುಂದೊರೆದಿದೆ. ರಶಿಯಾದಿಂದ ರಾಯಭಾರಿತ್ವದ ಸಂಪೂರ್ಣ ಅಧಿಕಾರವನ್ನು ಹೊಂದಿದಂಥ ಒಬ್ಬ ವಕೀಲನು ಸಂದೀ ಮಾಡಿಕೊಳ್ಳಲೋಸುಗ ಲಂಡನಕ್ಕೆ ಬರಬೇಕೆಂದು ಇವರು ಪತ್ರ ಬರೆದಿರುವಾಗ, ಇಟಲಿ ಮತ್ತು ರಶಿಯಾದ ನಡುವೆ ಒಪ್ಪಂದವಾಗಿ ಎರಡೂ ದೇಶಗಳು ತಂತಮ್ಮ ರಾಯಭಾರಿಗಳನ್ನು ಅಯಾ ದೇಶಗಳಲ್ಲಿಡಬೇಕೆಂದು ಗೊತ್ತಾಯಿತು ರಶಿಯಾದಲ್ಲಿ ವಿಪುಲ ಧಾನ್ಯ ಬೆಳೆಯುತ್ತಿದ್ದು ಇದು ಇಟಲಿಯಲ್ಲಿ ಮಾರಬೇಕೆಂದು ಸುಂಕ ಕಡಿಮೆ ಮಾಡಲ್ಪಟ್ಟಿತು ಇಟಲಿಗೆ ರಶಿಯಾ ರಾಜ್ಯದಲ್ಲಿ ಖನಿಜ ಪದಾರ್ಥಗಳ ಗುತ್ತಿಗೆ ಸಿಕ್ಕಿತು ಈಪ್ರಕಾರ ಪರಸ್ಪರ ಹಿತವಾಗುವಂಥ ಶರ್ತುಗಳೊಂದಿಗೆ ಈವೆರಡೂ ದೇಶಗಳಿಗೆ ಒಪ್ಪಂದವಾಗಿರುವದು.

ಎಲ್. ಎಲ್. ಬಿ. ಅಭ್ಯಾಸಕ್ಕಾಗಿ ಮುಂಬಯಿಯಲ್ಲಿ ಮಾತ್ರ ಕಾಲೇಜವುಂಟು ಇಂಥ ಕಾಲೇಜವನ್ನು ಪುಣೆಯಲ್ಲಿಯೂ ಇಡುವಂತೆ ಸರಕಾರದ ಠರಾವು ಆಗಿರುತ್ತದೆ.

ಮುಷ್ಕಾಳದ ದೆಸೆಯಿಂದ ಸರಕಾರಕ್ಕೆ ತೀರ್ವೆಯನ್ನು ಕೊಡಬಾರದೆಂಬ ಚಳವಳಿಯು ಅನಂತಪೂರ ಜಿಲ್ಹೆಯಲ್ಲಿ ನಡೆದಿದೆ.

ದಿಲ್ಲಿಯಲ್ಲಿ ವಿಪರೀತ ಚಳಿಯು ಬಿದ್ದಿದೆ. ಅಂಗಡಿಕಾರರು ತುಪ್ಪ ಕೊಬ್ಬರ ಎಣ್ಣೆಯನ್ನು ಕಾಗದದಲ್ಲಿ ಕಟ್ಟಿಕೊಡುವರು.

ಸುಪ್ರಸಿದ್ಧ

ಶಾಂತವೀರ

ಔಷಧಾಲಯ

[illegible] ಔಷದೆ ಚೀಟು ೧೦೦ಕ್ಕೆ ೪-೪-೦	೯ ಬಚ್ಚಲ [illegible] ಡಬ್ಬಿ ೧ಕ್ಕೆ	೦-೪-೦
ದಂತಮಂಜನ ೧೦೦ಕ್ಕೆ ೪-೪-೦	೧೦ ಗಜಕರ್ಣ ಮಲಮು ,, ,,	೦-೪-೦
೧ ಕ್ರಿಮಿಸಂಹಾರಿ ,, ೪-೮-೦	೧೧ ಇಸುಬಿನ ಮಲಮು ,, ,,	೦-೪-೦
೨ ಹೇನೂ ಶೀತ ನಾಶಕ ,, ,, ೧-೧೨-೦	೧೨ ವ್ರಣನಾಶಕ ಮಲಮು ,, ,,	೦-೦-೦
೩ ಕಣ್ಣುಬೇನೆಯ ಔಷಧ ,, ,, ೧-೦-೦	೧೩ ಮೊಳಕೆಮೂಲವ್ಯಾಧಿಗೆ ಮಲಮು ,,	೧-೬-೦
೪ [illegible]ನಾಶಕ(ಜಂತುಸಪುಡಿ) ,, ೪-೦-೦	೧೪ ರಕ್ತಮೂಲವ್ಯಾಧಿನಾಶಕ ಚೂರ್ಣ ,,	೧-೦-೦
೫ ಜ್ವರಹರ ಚೂರ್ಣ ,, ,, ೧-೦-೦	೧೫ ಬಾಲಾಮೃತ ಗುಳಿಗೆಗಳು ,, ,,	೬-೦-೦
೬ ಪಿತ್ತಶಾಂತಿಯಾಗುವದಕ್ಕೆ ,, ೪-೦-೦	ಪಶುಸಂಜೀವಿನಿ (ದನದ ಔಷಧ) ,,	೧-೨-೦
೭ [illegible]ಕಪ್ಪು ಮಶಿಪುಡಿ ,, ೧-೦-೦		
೮ ಗರ್ಭಪ್ರತಿಬಂಧಕ ಗುಳಿಗೆ ,, —೨-೦		

ಸೂಚನೆ—ಪ್ರತಿನಿತ್ಯ ಸಾವಿರಾರು ಚೀಟುಗಳು ಖರ್ಚಾಗುವವು. ಎಲ್ಲ ಪ್ರಸಿದ್ಧ ವ್ಯಾಪಾರಸ್ಥರಲ್ಲಿ ಮಾರಲಿಕ್ಕೆ ಸಿಗುವವು. ಥೋಕ ತೆಗೆದುಕೊಂಡರೆ ಭರಪೂರ ಕಮಿಶನ್. ೧ ರೂಪಾಯಿಗಿಂತ ಕಡಿಮೆ ಔಷಧ ನಮ್ಮಲ್ಲಿ ವ್ಹಿ.ಪಿ.ಯಿಂದ ಕಳಿಸಲಿಕ್ಕಾಗುವದಿಲ್ಲ. ಔಷಧವನ್ನು ಬೇಡುವವರು ಒಂದು ನಾಲ್ಕನೇ ಅಂಶ ರಕಮು ಮುಂಗಡ ಕಳಿಸಬೇಕು. ಟಪಾಲ ಖರ್ಚು ಬೇರೆ.

ಡಾಕ್ಟರ— ಎಸ್. ಆರ್. ಕಿತ್ತೂರ (V. D

ಶಾಂತವಿಳಾಸ
ಶಾಂತೇಶ್ವರ ಧಾರವಾಡ

[illegible] "ಔಷಧ"
ಮಂಗಳವಾರ ಪೇಟೆ ಧಾರವಾಡ

---

೩೫ ವರ್ಷದ ಅನುಭವದಿಂದ ತಯಾರಿಸಿದೆ.	೧೯[illegible] [illegible] ಪ್ರದರ್ಶನದಲ್ಲಿ [illegible] (ಗುಣಕಾರಿತ್ವದ ಪ್ರಶಸ್ತಿ ಪತ್ರ)	[illegible] [illegible] ಉಪಯೋಗಿಸಿ [illegible]

ಉತ್ತಮ ಗುಣಕಾರಿಯಾದ ರಾಮಬಾಣ ಔಷಧಗಳು.

೧ ಮದನೋದ್ಭವ ಗುಳಿಗೆ— ಇದು ಎಲ್ಲ ವೀರ್ಯದೋಷಗಳನ್ನು ಗುಣಪಡಿಸಿ ಸ್ತ್ರೀ ಪುರುಷರಿಗೆ ಸಂಪೂರ್ಣ ಶಕ್ತಿಯನ್ನುಂಟುಮಾಡುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦ ಇದರ ಸಂಗಡ ನಮ್ಮ [illegible] ತೈಲವನ್ನು ಉಪಯೋಗಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿ ೧ಕ್ಕೆ ೩-೮-೦

೨ ಪ್ರಮೇಹ ನಿವಾರಿಣಿ— ಇದರಿಂದ ಸರ್ವ ಪ್ರಕಾರದ ಪ್ರಮೇಹ (ಪರಮಾ ಗರಮಿ) ರೋಗ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ೩-೧೨-೦

೩ ಧಾತುಪೌಷ್ಟಿಕ ಲೇಹವು— ಇದು [illegible] ಕಿ. ೬ ೦-೦

೪ ವ್ರಣ ನಾಶಕ ಮಲಮು— ಇದು [illegible] ಉಪಯೋಗಿಸುವದರಿಂದ ಗುಣಪಡಿಸುವದು ಕಿಮ್ಮತ್ತು ಡಬ್ಬಿ [illegible]

೫ ಗಜಕರ್ಣದ ಮಲಮು ಡಬ್ಬಿ ೧ಕ್ಕೆ ೦-೪-೦ [illegible] ಡಬ್ಬಿ ೧ಕ್ಕೆ ೧-೮-೦ ಸುಗಂಧಿತ ಹಲ್ಲುಪುಡಿ ೧೨ ಡಬ್ಬಿಗೆ ೨-೦-೦

ಇವುಗಳ ಕಿಮ್ಮತ್ತಿನ ಶಿವಾಯ ಟ. ಖ. ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ ೦-೧-೦ ಸ್ಟ್ಯಾಂಪು ಕಳಿಸಿದರೆ ಪ್ರತ್ಯೇಕವಾಗಿ ಫುಕಟ

ನಮ್ಮ ವಿಳಾಸ:— ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ, ಪೊ. ಬನವಾಸಿ
ಉತ್ತರಕಾನಡಾ.

ಕುಲಕರ್ಣಿ ಸನ್ಸ ಕಂಪನಿ, ಧಾರವಾಡ ಇವರ ಪೇಟಂಟದಾರ ರೆಂಟೆಗಳು



ಈ ರೆಂಟೆಯ ಶ್ರೇಷ್ಠ ಗುಣಗಳೆಂದರೆ—

೧ ಸಾಮಾನ್ಯರೆಂಟೆಗಳ ಹೋಲಿಕೆ ಇದ್ದು ಎತ್ತಿಗೆ ಅತಿ ಹಗುರವಾದ್ದು.

೨ ಕಾಲೊಳಗೆ ಹೆಂಟೆಗಳು ಬೀಳದೆ ಇರುವದರಿಂದ ಎತ್ತಿನ ಮೇಲೆ ಎಷ್ಟು ಭಾರ ಆಗುವದಿಲ್ಲ

೩ ರೆಂಟೆಯು ಎಷ್ಟು ಹೊಡಿದ್ದಾಗ್ಯೂ [illegible] ಈಸು ಡೊಂಕಾಗಿದ್ದ ಆಸಕ್ತಿ ಮತ್ತು ಕುಳಕರ್ಣ ನಡವೆ [illegible] ಬೇಳು ಸಿಕ್ಕುವದಿಲ್ಲ.

ಇದರೊಳಗೆ [illegible] ದೊಡ್ಡ ಆಕೃತಿಯು ೪ ಪ್ರಕಾರದ ರೆಂಟೆಗಳುಂಟು. ವಿಶೇಷ ಸಂಗತಿ [illegible] ತಿಳಿಕೊಳ್ಳಬೇಕು. ೧-೧-೩೩ ಕುಲಕರ್ಣಿ ಸನ್ಸ ಕಂಪನಿ [illegible] ಧಾರವಾಡ.

ಶ್ರೀ ಧೂತಪಾಪೇಶ್ವರ ಆಯುರ್ವೇದ ಔಷಧಾಲಯ ಪನವೇಲ

ಈ ಕಾರಖಾನೆಯಲ್ಲಿ ಶಾಸ್ತ್ರೋಕ್ತ ತಯಾರಿಸಲ್ಪಟ್ಟ [illegible] ಎಲ್ಲ ಬಗೆಯ ಔಷಧಗಳು ನಮ್ಮಲ್ಲಿ ದೊರೆಯುತ್ತವೆ [illegible] ಔಷಧಗಳನ್ನು ತೆಗೆದುಕೊಳ್ಳಲು ನಮ್ಮಲ್ಲಿ [illegible] ಸಿದ್ಧ ರಸಾಯನಗಳೂ [illegible] ಗುಟಿಕಾದಿಗಳೂ, ಎಲ್ಲ ಬಗೆಯ ಔಷಧ ಚೂರ್ಣಗಳು, [illegible] ಗುಳಿಗೆಗಳು; [illegible] ಕೈವಾರು ಪೇಟೆಯಲ್ಲಿರುವ ಔಷಧಗಳ ಬೆಲೆಯನ್ನು [illegible] ಪುಸ್ತಕವನ್ನು [illegible] ಔಷಧಗಳನ್ನು [illegible] ಕೇವಲ ತೆಗೆದು ಕೊಳ್ಳಿರಿ.

ಎಸ್. ಪಾಟೀಲ ಎಜಂಟರು [illegible] ಧಾರವಾಡ.

[illegible] ಅಧ್ಯಕ್ಷ ಶ್ರೀ. ಜಗದ್ಗುರು ಪಂಚಾಚಾರ್ಯರ ಲಿಂಗಪೂಜಾ [illegible] ಹಾಗೂ [illegible] ಬೇರೆ ಬೇರೆ [illegible] ಗಳನ್ನು ಬಹು ಪ್ರಯಾಸದಿಂದ ತಯಾರಿಸಿರುತ್ತವೆ. ವೀರಶೈವ ಬಾಂಧವರು ಇತ್ತ ಕಡೆ ಲಕ್ಷ್ಯಕೊಡಬೇಕು. [illegible] ಬರೆದು ಒಂದು ರೂಪಾಯಿಯ ಮನಿ ಆರ್ಡರ ಮಾಡಿದರೆ [illegible] ಕೊಡಲಾಗುವದು.

[illegible] ಫೋಟೋಗ್ರಾಫರ ಧಾರವಾಡ

ಅಲಲಾ ಪರಾಕು ತಕ್ಕೆಮ!

[illegible]

ಯಾವ ವೇಳೆಯಲ್ಲಿ [illegible] ಯಾವ ಸ್ಥಳದಲ್ಲಿ [illegible] ರೋಗಗಳ ಬಾಧೆಯು [illegible] ಇಲ್ಲ. [illegible] ಇಂಥಾ ಪ್ರಸಂಗದಲ್ಲಿ [illegible] (ಟಿಳಕ ಛಾಪ) [illegible] ತಲೆನೋವು, ಕೆಮ್ಮು, [illegible] ಸಂಗ್ರಹಣಿ, ಅಜೀರ್ಣ, [illegible]

[illegible] ೨-೪-೦ [illegible] ೦-೧೨-೦ [illegible]

[illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ [illegible]

[illegible]

[illegible] ಹುಬ್ಬಳ್ಳಿ

ದಿ ಪೂನಾ ಬ್ಯಾಂಕ ಲಿಮಿಟೆಡ್ ಹುಬ್ಬಳ್ಳಿ ಶಾಖೆ.

ಸೇವಿಂಗ್ಸ ಬ್ಯಾಂಕ:— ೧೦,೦೦೦ ರೂಪಾಯಿಗಳ ವರೆಗೆ [illegible] ಇಡಬಹುದು. [illegible] ಬಡ್ಡಿ ದರ ೩ ಟಕ್ಕೆ

ಚಾಲೂ ಖಾತೆ:— [illegible] ಬಡ್ಡಿ ದರ [illegible]

ಮುದತ ಠೇವು— [illegible] ಬಡ್ಡಿ ಕೊಡಲಾಗುವದು.

[illegible]

ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್.

[illegible] ಧಾರವಾಡ.

ಚಾಲೂ ಖಾತೆಗಳು:— [illegible]

ಸೇವಿಂಗ್ಸ ಬ್ಯಾಂಕ:— [illegible]

ಮುದ್ದತಿ ಠೇವುಗಳು:— [illegible]

ಇತರ ಕಾರ್ಯಗಳು:— [illegible]

[illegible]

ಅಸೆಂಬ್ಲಿಯಲ್ಲಿ ಸ್ವರಾಜ್ಯದ ವಾದವಿವಾದ

—o—

ಸರ ಹೇಲಿ ಮತ್ತು ಪಂಡಿತ ನೆಹರುರವರಿಗೆ ವಾಗ್ಯುದ್ಧ

—o—

ಶುಕ್ರವಾರದ ದಿವಸ ಅಸೆಂಬ್ಲಿಯಲ್ಲಿ ಸ್ವರಾಜ್ಯದ ಠರಾವಿನ ಚರ್ಚೆಗೆ ಪ್ರಾರಂಭವಾಯಿತು. ಅಂದಿನ ದಿವಸ ಎಂಟು ಜನರು ಭಾಷಣ ಮಾಡಿದರು. ಈ ಸಮಯದಲ್ಲಿ ಸರ ಮಾಲ್ಕಮ ಹೇಲಿ ಸಾಹೇಬರು ಮಾಡಿದ ಭಾಷಣವು ಕೌತುಕಪಡುವಂತಹದಾಗಿರುವದರಿಂದ ಅದರ ಸಾರಾಂಶವನ್ನು ಕೊಡುತ್ತೇವೆ.

ಹಿಂದುಸ್ಥಾನ ಸರಕಾರದ ಕಾಯದೆಯಲ್ಲಿ ಜವಾಬದಾರ ರಾಜ್ಯ ಪದ್ಧತಿ ಎಂಬದನ್ನು ಬೇಕೆಂದು ತಿಳಿದು ಹಾಕಿದ್ದಾರೆ. ವಸಾಹಾತಿನ ಸ್ವರಾಜ್ಯದ ವ್ಯಾಪ್ತಿಯು ಜವಾಬದಾರ ರಾಜ್ಯ ಪದ್ಧತಿಗಿಂತ ವಿಸ್ತಾರವಾದದ್ದಿರುತ್ತದೆ. ಹಿಂದುಸ್ಥಾನದ ಜವಾಬದಾರ ರಾಜ್ಯ ಪದ್ಧತಿಯ ವಿಚಾರವು ಕ್ರಮೇಣ ಬೆಳೆಯುತ್ತಾ ಹೋಗಬೇಕಲ್ಲದೆ, ಅವಸರಪಡತಕ್ಕದ್ದಲ್ಲವೆಂದು ಹಿಂದೂ ಮುಖಂಡರೇ ಒಪ್ಪಿದ್ದಾರೆ. ಕಲಕತ್ತೆಯಲ್ಲಿ ೧೯೨೦ರಲ್ಲಿ ಕೂಡಿದ ಕಾಂಗ್ರೆಸ ಸಭೆಯು ೧೫ ವರ್ಷದಲ್ಲಿ ಈ ಅಧಿಕಾರ ಪೂರ್ಣ ಮಾಡಿ ಕೊಡಬೇಕೆಂದಿರುತ್ತದೆ. ಅನಿಬಿಸೆಂಟಬಾಯಿಯವರು ಕಂಠದಿಂದಲೇ ಬೇಡಿದ್ದಾರೆ. ಪ್ರಾಂತಿಕ ಸ್ವಾತಂತ್ರ್ಯ ಕೊಟ್ಟರೆ ಸಾಕೆಂದು ಪಂಡಿತ ಮಾಲವಿಯರು [illegible] ಅಂದಿರುತ್ತಾರೆ. ಮಿ. ಪಟೇಲರು ಸಂಪೂರ್ಣ ಸ್ವರಾಜ್ಯ ಬೇಕೆನ್ನಲಿಲ್ಲ. ಮಿ. ಟಿಳಕರು ೧೫ ವರ್ಷಗಳ ಅವಧಿ ಸಾಕೆಂದಿದ್ದರು. ವಿಲಾಯತದ ಅಧ್ಯಕ್ಷರಾಗಿದ್ದ ಮಿ. ಜಿನ್ನಾ ಇವರಾದರೂ ಈ ಕ್ಷಣವೇ ಸ್ವರಾಜ್ಯ ಬೇಕೆನ್ನಲಿಲ್ಲ. ಈಗ ಇಂಗ್ಲಂಡದ ಮಂತ್ರಿಯಾಗಿರುವ ಮಿ. ಮ್ಯಾಕಡೋನಾಲ್ಡ ಸಾಹೇಬರು ೧೯೧೭ನೇ ಇಸವಿಯಲ್ಲಿ ಸ್ವರಾಜ್ಯವು ಸಾವಕಾಶವಾಗಿಯೇ ಸಿಗತಕ್ಕದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಈಗ ಠರಾವು ತಂದ ರಂಗಾಚಾರ್ಯರು ಸಹ ಹಸ್ತಬಂದಿಯ ಭಾಷಣವನ್ನು ಇದೇ ಅಸೆಂಬ್ಲಿಯಲ್ಲಿ ಹಿಂದಕ್ಕೆ ಮಾಡಿದ್ದಾರೆ. ಈಗ ಏಕೆ ಈಗಿಂದೀಗ ಸ್ವರಾಜ್ಯ ಬೇಕೆಂದು ನೀವೆನ್ನುತ್ತೀರೆಂಬದು ನನಗೆ ತಿಳಿಯುವದಿಲ್ಲ. ಕಾಂಗ್ರೆಸ ಸಭೆಯಲ್ಲಿ ಬ್ರಿಟಿಶ ಸರಕಾರದಿಂದ ಅಗಲಬೇಕೆಂಬ ವಿಚಾರ ನಡೆದಿರುವದನ್ನು ನಾನು ಬಲ್ಲೆನು. ಆದರೆ ಇಲ್ಲಿ ರಾಜನೀತಿಯನ್ನು ಅನುಸರಿಸಿ ನಡೆಯುವಿರೆಂದು ನಾನು ಆಶಿಸುತ್ತೇನೆ. ಹಿಂದುಸ್ಥಾನದ ಸಂಸ್ಥಾನಿಕರು ಜವಾಬದಾರ ರಾಜ್ಯ ಪದ್ಧತಿಯು ಜನರ ಕೈಯಲ್ಲಿ ಸೇರುವದನ್ನು ಸಮ್ಮತಿಸುವರೇನೆಂಬದು ಮೊದಲನೇ ಪ್ರಶ್ನೆವಾಗಿದೆ. ಇದರ ಶರುವಾಯೂ ವಸಾಹಾತಿನಂಥ ಸಂಪೂರ್ಣ ಜವಾಬದಾರ ಪೊರೆತನದಿಂದ ಅಲ್ಪ ಸಂಖ್ಯಾಕರನ್ನು ಬಹು ಸಂಖ್ಯೆಯುಳ್ಳ ಜನಾಂಗದ ಕೈವಶ ಮಾಡಿದಂತಾಗುತ್ತದೆ. ಅಲ್ಪ ಸಂಖ್ಯೆಯುವರನ್ನು ದಕ್ಷಿಣ ಆಫ್ರಿಕೆಯವರು ಹೇಗೆ ನಡಿಸಿಕೊಳ್ಳುತ್ತಾರೆಂಬದು ನಮ್ಮ ಕಣ್ಮುಂದೆ ಕಟ್ಟಿದೆ. ಜಾತಿ ಜಾತಿಗಳೊಳಗಿನ ಕಲಹವಂತೂ ಇದ್ದೇ ಇರುತ್ತದೆ. ವಸಾಹಾತಿನ ಸ್ವರಾಜ್ಯವೆಂದರೆ- ವಸಾಹಾತಿನ ಸೈನ್ಯ. ಶತ್ರುಗಳೇ ಬಲಾಢ್ಯವಾದ ದೇಶವಿರುವದರಿಂದ, ಸ್ವರಾಜ್ಯ ದೊರೆತ ನಂತರ ಹಿಂದುಸ್ಥಾನದ ಗತಿಯು ಏನಾಗುವದೆಂದು ಎದೆಯು ಧಸಕು ಹೊಡೆಯುತ್ತದೆ. ದೇಶದಲ್ಲಿ ಹಿಂದುಳಿದ ಜನರುಂಟು. ಅವರ ಉನ್ನತಿಯ ಮಾರ್ಗವನ್ನು ನೋಡಬೇಕಾಗಿದೆ. ವಸಾಹಾತಿನ ಸ್ವರಾಜ್ಯ ಅಥವಾ ಜವಾಬದಾರಿ ರಾಜ್ಯ ಪದ್ಧತಿ ಎಂಬದರಲ್ಲಿ ಭೆ [illegible] ಭೇದವಿದೆ, ಇಂದಿರಲಿ; ನಾವು ಕಳೆದ ನಾಲ್ಕು ವರ್ಷ ಹೊಸ ಆಡಳಿತೆಯಲ್ಲಿ ಕಂಡು ಬಂದ ದೋಷಗಳ ಬಗ್ಗೆ ಇಲಾಖೆ ಸರಕಾರಗಳ ಅಭಿಪ್ರಾಯ ಕೇಳಿಕೊಂಡು, ಪಾರ್ಲಮೆಂಟ ಸಭೆಗೆ ಕಾಯದೆಯಲ್ಲಿ ಮಾಡಬೇಕಾದ ದುರಸ್ತಿಯ ಬಗೆಯಿಂದ ರಿಪೋರ್ಟ ಮಾಡುವೆವು"

ಈ ಪ್ರಕಾರ ಸಾಹೇಬರು ಅತ್ಯಂತ ನಿರಾಶಜನಕವಾದ ಭಾಷಣ ಮಾಡಿದರು. ಇವರ ಭಾಷಣದಿಂದ ಹಿಂದೀ ಜನರು ಸಾಹೇಬರಿಗೆ ಇಂದೇ ಗುಡಿಗೆ ಕಟ್ಟಿ ಒಂದು ಸ್ವದೇಶದ ದಾರೀ ಹಿಡಿಯಿರಿ ಎಂದು ಹೇಳುತ್ತಾರೆಂಬ ಭಾವವಾಗಿದೆ. ಇದಕ್ಕೆ ಪಂಡಿತ ನೆಹರು ಇವರು ಉತ್ತರ ಕೊಟ್ಟರು. ಅದರೊಳಗಿನ ಮುಖ್ಯ ಮಾತುಗಳನ್ನು ಮಾತ್ರ ಕೊಡುತ್ತೇನೆ.

೧ ಈಗಿನ ಸ್ವರಾಜ್ಯದ ಕಾಯದೆಯು [illegible] ಕುಂದು ಬರುವಂತಹದಾಗಿದೆ.

೨ ನಾವು ಮನುಷ್ಯರಿದ್ದೇವೆಂಬುದು ತಿಳಿಯುತ್ತೇವೆ ಮತ್ತು ನಿಮ್ಮ ಕೂಡ ಸಹಕಾರ ಮಾಡಲಿಕ್ಕೆ ಬಯಸ್ಸೇವೆ. ನಮ್ಮ ಮಾತಿಗೆ ನೀವು ಒಪ್ಪದಿದ್ದರೆ ನಾವು ಅಸಹಕಾರಿಗಳೆಂದೇ ತಿಳಿಯಿರಿ

೩. ನಾವು ಬೇಡುವ ಸ್ವರಾಜ್ಯವು ಯೋಗ್ಯ ಮತ್ತು ಪ್ರಾಮಾಣಿಕತನದ್ದಿರುತ್ತದೆ. ಇದನ್ನು ನೀವು ಅಂಗೀಕರಿಸದಿದ್ದರೆ- ಪರಿಣಾಮವು ತಿಳಿದೇ ಅದೆ

ಬಲಿಯು ದಾನ ಕೊಡುವಾಗ ಶುಕ್ರಾಚಾರ್ಯನು ಅಡ್ಡ ಬಂದನೆ!!

ಹಿಂದುಸ್ಥಾನ ಸರಕಾರದವರು ಮಹಾತ್ಮರನ್ನು ಬಿಟ್ಟುಕೊಟ್ಟದ್ದು ಸರ ಠೋಣ್ಸರೆಂಬ ಅಸೆಂಬ್ಲಿಯ ಮೆಂಬರರಿಗೆ ಸಹನವಾಗಲಿಲ್ಲ. ಈ ಬಗ್ಗೆ ವಾದವಿವಾದ ಮಾಡಲೋಸುಗ ಅಸೆಂಬ್ಲಿಯಲ್ಲಿ ನಡೆಯುವ ಕೆಲಸವನ್ನು ಬದಿಗಿಟ್ಟು ಇದೇ ವಿಷಯವಾಗಿ ವಿಚಾರ ಮಾಡಬೇಕೆಂಬ ಠರಾವು ತರುವದಕ್ಕಾಗಿ ತಮಗೆ ಸಹಾಯ ಮಾಡಬೇಕೆಂದು ಮೊದಲು ಯುರೋಪಿಯನ ಮೆಂಬರರಲ್ಲಿ ಯಾಚನೆ ಮಾಡಿದರು. ಇದಕ್ಕೆ [illegible] ಸದಸ್ಯರು ಯಾರೂ ಬಾಯಿಮುಚ್ಚಿಕೊಂಡು ಕುಳಿತರು ವಿಘ್ನಸಂತೋಷಿಗಳು ಹೀಗಿರುತ್ತಾರೆ.

ಮಹಾತ್ಮರ ದರ್ಶನದ ಮೊದಲನೆಯ ಮಾನವು ಯಾವ ನಾಡಿಗೆ? ಯಾವ ಊರಿಗೆ?

ಮಹಾತ್ಮರು ಪುನಃ ತಮ್ಮೊಳಗೆ ಕೂಡಿದ್ದರಿಂದ ಸಮಸ್ತ ಜನತೆಯರಿಗೂ ಆನಂದವಾಗಿ ಅವರ ದರ್ಶನ ಲಾಭವು ತಮ್ಮ ಪ್ರಾಂತಕ್ಕೆ ಆಗಬೇಕೆಂದು ಪ್ರತಿಯೊಂದು ಸ್ಥಳದವರು ಉತ್ಸಾಹಾಸಕ್ತಿಯನ್ನು ತೋರಿಸುವದು ಸಹಜವಿದೆ. ಇದಕ್ಕೆ ಮೌಲಾನಾ ಮಹಮದಲ್ಲಿಯವರು ಒಂದು ಬೀಳ ಹಾಕಿದ್ದಾರೆ. ಯಾವ ನಾಡು ಹೆಚ್ಚು ಖಾದಿಯ ಪ್ರಸಾರ ಮಾಡಿದೆ; ಟಿಳಕ ಸ್ವರಾಜ್ಯ ಫಂಡು ಕೂಡಿಸಿದೆ ಮತ್ತು ಕಾಂಗ್ರೆಸ ವ್ಹಾಲಂಟಿಯರರನ್ನು ಮಾಡಿದೆ, ಆ ನಾಡಿಗೆ ಮಹಾತ್ಮರು ಮೊದಲು ದರ್ಶನ ಕೊಡುವ ಕಾರ್ಯಕ್ರಮವನ್ನು ಗೊತ್ತು ಪಡಿಸುವೆನೆಂದು ಇವರು ಅಂದಿರುತ್ತಾರೆ. ಇದು ಪ್ರತಿಯೊಂದು ದೇಶದವರು ವಿಚಾರ ಮಾಡುವಂಥ ಪ್ರಶ್ನವಾಗಿರುತ್ತದೆ.

ನಾಳೆ ಗಾಂಧೀ ಮಹೋತ್ಸವ.

ನಾಳೆ ಹತ್ತನೇ ತಾರೀಖಿನ ದಿವಸ ಪ್ರತಿಯೊಂದು ಊರಲ್ಲಿ ಮಹಾತ್ಮರ ಬಿಡುಗಡೆಯ ಉದ್ದಿಶ್ಯವಾಗಿ ಉತ್ಸವ ಮಾಡಿ ದೇವತಾರಾಧನೆ, ಖಾದಿಯ ಪ್ರಸಾರ ಮತ್ತು ಟಿಳಕ ಸ್ವರಾಜ್ಯ ಫಂಡಿನ ಎತ್ತುಗಡೆ ಮಾಡಬೇಕೆಂದು ಕಾಂಗ್ರೆಸದ ಅಧ್ಯಕ್ಷರಾಗಿದ್ದ ಮೌಲಾನಾ ಮಹಮದಲ್ಲಿಯವರು ಜಾಹೀರ ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ.

ಮಹಾತ್ಮರ ಬಿಡುಗಡೆಯ ವರ್ತಮಾನ ಕೇಳಿದ ಕೂಡಲೆ, ಮೌಲಾನಾ ಮಹಮ್ಮದಲ್ಲಿಯವರು ಪುಣೆಗೆ ಬಂದು, ಮಹಾತ್ಮರ ದರ್ಶನತೆಗೆದುಕೊಂಡರು ದೇಶಕ್ಕೆ ಯಾವ ಸಂದೇಶ ಕಳಿಸಬೇಕೆಂದು ಇವರು ಪ್ರಶ್ನಮಾಡಲು- ಮಹಾತ್ಮರು (ಖದರ) ಖಾದಿ ಎಂದು ಉತ್ತರ ಕೊಟ್ಟರು,

ಮದ್ರಾಸಿನಲ್ಲಿ ಬಿಡುಗಡೆಯು ಆನಂದದ ದೆಸೆಯಿಂದ ಧಾರವಾಡದಂತೆ ವಿಲಾಯತಿ ಬಟ್ಟೆಗಳ ಹೋಮವಮಾಡಿ, ಜಯೋತ್ಸವ ಮಾಡಿದರು.

ದಿಲ್ಲಿಯಲ್ಲಿ ಅಸೆಂಬ್ಲಿಯ ಮೆಂಬರರು ಮಲಗಿರುವಾಗಲೇ, ಟೆಲಿಫೋನಿನಿಂದ ಬಿಡುಗಡೆಯ ಸುದ್ದಿಯು ತಿಳಿಸಲ್ಪಟ್ಟಿತು ಸ್ವರಾಜ್ಯ ಪಕ್ಷದ ಮೊದಲನೇ ಜಯವೆಂದು ಮೆಂಬರರು ಹರ್ಷ ಭರಿತರಾದರು.

ಪುಣೆಯಲ್ಲಿ ಈ ವರ್ತಮಾನವಾದ ಕೂಡಲೆ ಎಲ್ಲ ಶಾಲೆಗಳು ಬಂದು ಮಾಡಲ್ಪಟ್ಟವು ಫರ್ಗ್ಯೂಸನ ಕಾಲೇಜಕ್ಕೆ ರಜೆ ಇರಲಿಲ್ಲ ಮ್ಯುನಿಸಿಪಾಲಿಟಿಯ ನೌಕರರಿಗೂ ರಜೆ ಸಿಕ್ಕಿತು. ಆದರ ಮೇಲೆ ರಾಷ್ಟ್ರೀಯ ನಿಶಾನೆಯನ್ನು ಏರಿಸಿದರು

ಮಹಾತ್ಮರು ಬಿಡುಗಡೆ ಹೊಂದಿದರಷ್ಟೇ, ಇವರಂತೆ ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದು ಅಸೆಂಬ್ಲಿಯಲ್ಲಿ ಠರಾವು [illegible] ಕ್ಕದ್ದದೆ

ಆಜಾರಿಯಲ್ಲಿ ಬಿಡಿಬಿದ್ದದರಿಂದ, ಆದರ ಗೌರವಾರ್ಥವಾಗಿ ಮಹಾತ್ಮರು ಬೇಗನೆ ಆ ಊರಿಗೆ ಹೋಗುವರು.

ಉಚಿತ! ಅಂಚೆವೆಚ್ಚವಿಲ್ಲ !!

ನೈತಿಕ ಮತ್ತು ಶಾರೀರಿಕವಾದ ಎಲ್ಲ ಸಂಕಟಗಳಿಂದ ಪಾರಾಗಬೇಕಾದರೆ- ದಯವಿಟ್ಟು

ಕಾಮಶಾಸ್ತ್ರ

ಎಂಬ ನಮ್ಮ ಪುಸ್ತಕವನ್ನು ಓದಿರಿ; ಈ ಪುಸ್ತಕವು

ಆರೋಗ್ಯ, ಸಂಪತ್ತು ಮತ್ತು ಸಂತಾನಾಭ್ಯುದಯದ ಮಾರ್ಗದರ್ಶಕವಾಗಿರುತ್ತದೆ.

ಪುಸ್ತಕದ [illegible]

ವೈದ್ಯಶಾಸ್ತ್ರೀ—ಮಣಿಶಂಕರ ಗೋವಿಂದಜಿ

ಆತಂಕ ನಿಗ್ರಹ ಫಾರ್ಮಸಿ, ಜಾಮನಗರ ಕಾಠೇವಾಡ ಇವರಿಗೆ ಅಥವಾ

೨೭ ಬ್ರಾಡ ವೇ ಮದ್ರಾಸ, ಇವರಿಗೆ ಬರೆದು ತರಿಸಿಕೊಳ್ಳಿರಿ

ಜಾಹೀರಾತು.

ಯಮನೂರ ಮ್ಯುನಿಸಿಪಾಲಿಟಿಯಿಂದ-

ಜನಪದ್ದು ಜನರಿಗೆ ತಿಳಿಸುವದೇನಂದರೆ ಈ ವರ್ಷ ಯಮನೂರ ಜಾತ್ರೆಯು ತಾರೀಖು ೨೧-೩-೧೯೨೪ ಪಾ. ೨೭-೩-೧೯೨೪ ರವರೆಗೆ ಕೂಡುತ್ತದೆ. ಯಮನೂರಲ್ಲಿ ನೀರಿನ ಪುರವಠೆ [illegible] ಯಮನೂರಲ್ಲಿ [illegible] ಇರುವದಿಲ್ಲ.

೧ ಗ್ಯಾಸಲಾಯಿಟ [illegible] ೩ [illegible] ೪ ಜಾತ್ರೆಯಲ್ಲಿ ಹೋದ [illegible] ಆಗಿಯಂತೆ ಕಲಮಿಟ್ಟು ವಸೂಲ ಮಾಡುವ ಮುತ್ತೆ ಈ ಪ್ರಕಾರ ಮುತ್ತಿಗಳನ್ನು ತಾರೀಖು ೧೫-೩-೧೯೨೪ನೇ ದಿವಸ ಮಧ್ಯಾಹ್ನ ೪ ಘಂಟೆಕ್ಕೆ ಜನರಲ ಕಮಿಟಿ ಸಮಕ್ಷಮ [illegible] ಆಫೀಸಿನಲ್ಲಿ [illegible] ಕೊಡುವದರಲ್ಲಿ ಬರುವದು [illegible] ಗ್ಯಾಸಲಾಯಿಟ [illegible] ಅಗ್ಗೀನ [illegible] ಸಂದರ ಜಾಬತ [illegible] ಅಗ್ಗೀನೇ [illegible] ಸುತ್ತದೆ. ಬೇಡಿಕೆ [illegible] ನಮ್ಮ [illegible] ಯಿಂದ [illegible]

೨ ತಾರೀಖು [illegible] ೧೯೨೪ ಇಸ್ವಿ ವರಿಗೆ [illegible] ಸನ್ನ ಕೊಡುವದಲ್ಲ [illegible] ಮೋನ [illegible] ಈ ಪದ್ಧತಿಯಲ್ಲಿ [illegible] ಬೇಡಿದವರಿಗೆ ಕೊಡೆ [illegible] ದಲ್ಲಿ ಬರುವದು [illegible] ೧೯೨೪ ಇಸ್ವಿ

N. R. Bhandiwad
ಚೀಫ ಆಫೀಸರ

B. S. Patil
ಪ್ರೆಸಿಡೆಂಟ ಯಮನೂರ ಮ್ಯುನಿಸಿಪ್ಯಾಲಿಟಿ

ಮಹಾತ್ಮರೇ ಕರ್ನಾಟಕದ ಕಾಂಗ್ರೆಸದ ಅಧ್ಯಕ್ಷರು

—o—

ಬೆಳಗಾವಿಯಲ್ಲಿಯೇ ಕಾಂಗ್ರೆಸ ಸಭೆಯಾಗಬೇಕು ಮತ್ತು ಮಹಾತ್ಮರು ಅದರ ಅಧ್ಯಕ್ಷರಾಗಬೇಕೆಂದು ಬೆಳಗಾವಿಯ ರಿಸೆಪ್ಶನ ಕಮಿಟಿ ಅಪೇಕ್ಷಿಸಿದ್ದಾರೆ.

ಮಹಾತ್ಮರನ್ನು ಬಿಟ್ಟ ದಿವಸ ಮುಂಬೈಯಲ್ಲಿ ವಿದ್ಯಾರ್ಥಿಗಳಿಗೆ ಸಕ್ಕರೆ ಹಂಚಲ್ಪಟ್ಟಿತೆಂದು ವಾರ್ತಾ ಪ್ರಸಾರಕ ಸಂಘದವರು ತಿಳಿಸುತ್ತಾರೆ.

ಕಾಬೂಲದಲ್ಲಿದ್ದ ಅಂಗೋರಾದ ವಕೀಲರು ಮುಂಬಯಿಯಲ್ಲಿ ಖಿಲಾಫತ ಕಮಿಟಿಯಲ್ಲಿ ಇದ್ದವರು. ಮೌಲಾನಾ ಶೌಕತಲ್ಲಿಯವರು ವಿಶ್ರಾಂತಿಯ ವೇಳೆಯಲ್ಲಿ ಇವರ ಕೂಡ ಸಂಭಾಷಣೆ ಮಾಡುತ್ತಿರುವರು.

ಪಸ್ತ್ರೈಯು ನಡೆಯಿಂದ ದೊಡ್ಡ ದೊಡ್ಡ ಜಮೀನದಾರರ ಮೇಗೇ ಒತ್ತೆಯು.

—o—

ತಂಜಾವರ ಜಿಲ್ಲೆಯ ಮಿರಾಸದಾರರು ಗವರ್ನರ ಸಾಹೇಬರನ್ನು ಕಾಣುವ ಕಾಲಕ್ಕೆ [illegible] ಬಾರದೆಂಬ ಒತ್ತೆಯನ್ನು [illegible] ಮಾಡಬೇಕೆಂದು [illegible] ಸಾಹೇಬರು [illegible] ಬಂದರು. ಇದರ ಮೂಲಕ ಈ ಮಿರಾಸದಾರರು [illegible] ದೊಡ್ಡ [illegible] ವತನದಾರರ [illegible] ಬಿಟ್ಟಿಲ್ಲ. ಇದು ನಿಜವಾಗಿ ಇಂಗ್ರೇಜಿ ರಾಜ್ಯದಲ್ಲಿ ವಿಸ್ಮಯಗೊಳಿಸುವಂಥ ಸಂಗತಿಯು. [illegible] ಪಕ್ಷದವರಾಗಿದ್ದಾರೆ. [illegible] ರು ತಮ್ಮ [illegible] ನ್ನು ಒತ್ತೆಯಲ್ಲಿ [illegible] ದ್ದು. ಜಮೀನದಾರರು ಮಾತ್ರ [illegible] ಯನ್ನು [illegible] ಮತ್ತು ಸರಕಾರದವರು [illegible]

[illegible] ಮಾಡಬೇಕೆಂಬುದು ತೀರ ಮೊಗಲಾಯಿ ನ್ಯಾಯವೇ ಸರಿ.

ಮಿರಜೆಯಲ್ಲಿ ನೀರಿನ ಬರ.

ಮಿರಜೆಯಲ್ಲಿ ನೀರಿನ ಭಯಂಕರ ತುಟಾಗ್ರತೆಯಾಗಿದೆ. ಪ್ರಜರು ನೀರಿನ ಅನುಕೂಲತೆಯನ್ನು ಮಾಡಿಕೊಡಿರೆಂದು ಯಜಮಾನರಿಗೆ ಅನೇಕ ವರ್ಷಗಳಿಂದ ಬೇಡಿಕೊಳ್ಳುತ್ತಿರುವರು. ಈ ವರ್ಷದಂತೆ ತುಟಾಗ್ರತೆಯು ಹಿಂದೆ ಎಂದೂ ಆಗಿಲ್ಲ. ನೀರು ನೀರು ಎಂದು ಪಟ್ಟಣಿಗರು ಯಜಮಾನರ ಬೆನ್ನು ಹತ್ತಿದ್ದಾರೆ, ನೀರಿಗೆ ಮೂರು ಒಕ್ಕದ ಪೆಟ್ಟ ಬರುತ್ತದೆ. ಇದಕ್ಕೆ ನೂರಕ್ಕೆ [illegible]ರಂತೆ ಪಟ್ಟಿಯನ್ನು ಕೊಟ್ಟರೆ- ನಳ ತಂದು ಹಾಕುವೆವೆಂದು ಯಜಮಾನರು ಹೇಳಿದ್ದಾರೆ. ಇವರು ನೀರಿನ ವ್ಯಾಪಾರ ಮಾಡಿಕೊಳ್ಳುತ್ತಿದ್ದಾರೇನೆಂದು ಪ್ರಜರು ಆಡಿಕೊಳ್ಳುತ್ತಿದ್ದಾರೆ.

ಪ್ರಿಂಟರರು ಬೇಕು

ವಿಜಯ ಮುದ್ರಾಲಯದಲ್ಲಿ ಕೆಲಸ ಮಾಡುವದಕ್ಕಾಗಿ ಹ್ಯಾಂಡ ಪ್ರೆಸ್ಸಿನ ಕೆಲಸ ಬಲ್ಲಂಥ ಪ್ರಿಂಟರ ಬೇಕಾಗಿದ್ದಾನೆ. ವಿಶೇಷ ಸಂಗತಿಗಳನ್ನು ಸಮಕ್ಷಮ ತಿಳಕೊಳ್ಳಬೇಕು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ವಿನಂತಿಯು

ಫೇಬ್ರುವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗತಕ್ಕಂಥ ಚಂದಾದಾರರ ಹೆಸರಿನಿಂದ ವ್ಹಿ. [illegible]ಯನ್ನು ಕಳಿಸುವೆವು. ವ್ಹಿ. ಪಿ. ಸ್ವೀಕಾರ ಮಾಡಬೇಕೆಂಬ ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿರುವ [illegible] ಪ್ರೆಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R N B 1443

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೫) ಧಾರವಾಡ, ಮಂಗಳವಾರ ತಾರೀಖು ೧೯ ನೇ ಫೇಬ್ರುವರಿ ೧೯೨೪ (ಸಂಚಿಕೆ ೮

ವಿ ಜ ಯ.

ಧಾರವಾಡ ತಾ॥ ೧೮ ರ ೧೯೨೪ ಇಸ್ವಿ

ಅಸೆಂಬ್ಲಿಯಲ್ಲಿ
ಸ್ವರಾಜ್ಯದ ಬಗ್ಗೆ ಹುರುಪಿನ ಭಾಷಣಗಳು

ಸ್ವರಾಜ್ಯದ ವಾದವಿವಾದವು ಹೋದ ಬುಧವಾರದ್ದ ದಿವಸ ಹಿಂದಿನಿಂದ ಮುಂದೆ ಸಾಗಿತು. ಅಂದೇ ಇದರ ನಿರ್ಣಯವಾಗಲಿಲ್ಲ. ನಿನ್ನೆ, ಸೋಮವಾರ ಅಥವಾ ನಾಳೆ ಬುಧವಾರದ ಪ್ರಶ್ನೋತ್ತರ-ಪ್ರತ್ಯುತ್ತರಗಳಾಗಿ ಮತಗಳನ್ನು ತಕ್ಕೊಳ್ಳುವ ಶಿಷ್ಟಾಚಾರವಾಗುವದು. ಬುಧವಾರದ ದಿವಸ ಆದ ಭಾಷಣಗಳು ಸಂತೋಷಕ್ಕೆ [illegible] ಸರಕಾರ [illegible] ಬಂಧಪುಗಳಾಗಿವೆ. ಅವುಗಳ ಭಾವವನ್ನು ಇದರ ಕೆಳ ಕೊಟ್ಟಿರುತ್ತೇವೆ.

ಸರ ಪುರುಷೋತ್ತಮದಾಸ

ಕಾಂಗ್ರೆಸ ಸಭೆಯಿಂದ ಎಡಿಯು ದೂರ ಇದ್ದಂಥ ಹಿಂದೀ ವರ್ತಕರು ಸಹ ಸ್ವರಾಜ್ಯದ [illegible] ರಾಜಕೀಯ ಚಳವಳಿಯಲ್ಲಿ ಸೇರಿದ್ದಾರೆ. ಯುರೋಪಿಯನರ ದೊಡ್ಡ ದೊಡ್ಡ ಕಂಪನಿಗಳು ಗುತ್ತಿಗೆಯನ್ನು ಹಿಡಿದು, ಅದನ್ನು ಪೂರ್ತಿ ಆಕ್ರಮಿಸಿದ್ದರಿಂದ, ಹಿಂದೀ ವರ್ತಕರ ಆಟ ಸಾಗದಂತಾಗಿರುತ್ತದೆ. ನಾವು ಸ್ವರಾಜ್ಯದಲ್ಲಿ ಯುರೋಪಿಯನರಿಗೆ ನಮ್ಮಂತೆ ಸರಿ ಹಕ್ಕು ಕೊಡುವೆವು. ಆದರೆ ಯಾವ ದೊಂಬರ ಗುತ್ತಿಗೆ ಸಿಗಲಾರದು. ತಮ್ಮ ಗುತ್ತಿಗೆಯು ಹೋಗುವದೆಂತಲೇ [illegible] ಸಾಹೇಬರು ಸ್ವರಾಜ್ಯವನ್ನು ವಿರೋಧಿಸುತ್ತಿದ್ದಾರೆ. ಕೆಲವು ಯುರೋಪಿಯನರು ಹಿಂದೂ ಜನರನ್ನು ನಡಿಸಿಕೊಳ್ಳುವಂತೆ, ನಾವು ಯುರೋಪಿಯನರನ್ನು ಹೀನ ಭಾವದಿಂದ ನೋಡುವದಿಲ್ಲೆಂಬದನ್ನು [illegible] ತಿಳಿಸಿರಿ. ರಾಯಲ ಕಮೀಶನದಲ್ಲೇನೂ ಅರ್ಥವಿಲ್ಲ. ಈಗೊಂದು ಕಮೀಶನ ಕೂಡಿದೆ. ಯುರೋಪಿಯನರು ತಮ್ಮಂತೆ ಆಡುವರು, ನಾವು ನಮ್ಮಂತೆ ಹೇಳುವೆವು. ಪಂಡಿತ ಮೋತಿಲಾಲರು ನ್ಯಾಯವಾದ ಹಕ್ಕನ್ನು ಬೇಡುವಾಗ ರೋಕ್ಸ ಸಾಹೇಬರು ಲಷ್ಕರೀ ಕಾಯಿದೆಯನ್ನು ಜಾಹೀರ ಮಾಡಿ ದಂಡಿನ ಯುಕ್ತಿಯಿಂದ ರಾಜ್ಯವಾಳುವ ಹೆದರಿಕೆ ತೋರಿಸುತ್ತಾರೆ. ಇದೇ ಜವಾಬದಾರ ರಾಜ್ಯ ಪದ್ಧತಿಯ ಅಧಿಕಾರ ದಾನವೇನು?

ಪಂಡಿತ ಮಾಲವಿಯಾ-

ಈ ಶಿಲಾಮೂರ್ತಿಯ ವೆಚ್ಚವನ್ನು ಮ್ಯುನಿಸಿಪಾಲಿಟಿಯೇ ಮಾಡಬೇಕೆಂದು ಗೊತ್ತಾಗಿದ್ದರೂ, ಸರಕಾರದವರು ಇದನ್ನು ವಿರೋಧಿಸಿದ್ದಾರೆ. ಆದರೂ ಇದರ ಪರಿವೆಯಿಲ್ಲದೆ, ನಾಗರಿಕರು ಸಮಾರಂಭವನ್ನು ಲೋಕಮಾನ್ಯರ ಯೋಗ್ಯತೆಗೆ ಅನುರೂಪವಾಗಿ ಒಪ್ಪುವಂತೆ ಸಾಂಗಗೊಳಿಸಿದರು.

ಪಂಡಿತರು ಕಾಲೋಚಿತವಾಗಿ ಮಾಡಿದ ಭಾಷಣದ ಸಾರಾಂಶವು—

೧೭ ನೇ ಶತಮಾನದಲ್ಲಿ ಶ್ರೀ ಶಿವಾಜೀ ಮಹಾರಾಜರು ಮಾಡಿದಂಥ ಕಾರ್ಯವನ್ನು ೨೦ ನೆಯ ಶತಮಾನದಲ್ಲಿ ಲೋಕಮಾನ್ಯರು ಮಾಡಿದರು. ಶ್ರೀ ಶಿವಾಜಿ ಮಹಾರಾಜರು ಔರಂಗಜೇಬನ ಕಟ್ಟಾಳಿಕೆಯ ಪ್ರತೀಕಾರ ಮಾಡಿದರು. ಪ್ರಕೃತದಲ್ಲಿ ನಾವು ನಮ್ಮ ದೇಶದಲ್ಲಿಯೇ ಸಂಪೂರ್ಣ ಪರಕೀಯರಾಗಿದ್ದೇವೆ. ಆದ್ದರಿಂದ ಲೋಕಮಾನ್ಯರ ಕರ್ತೃತ್ವದಿಂದ ನಮ್ಮ ಅಂತಃಕರಣದಲ್ಲಿ ಹುಟ್ಟುವಂಥ ಸ್ಫೂರ್ತಿಯು ನಮ್ಮ ದಾಸ್ಯ ವಿಮೋಚನೆಗಾಗಿ ಅವಶ್ಯವಾಗಿ ಬೇಕಾಗಿರುತ್ತದೆ.

ಲೋಕಮಾನ್ಯರ ಮೇಧಾಶಕ್ತಿಯು ಅದ್ಭುತವಾಗಿತ್ತು. ಸಾಮಾನ್ಯ ಜನರಿಗೆ ಶಿಕ್ಷಣ ಕೊಡುವದಕ್ಕಾಗಿ ಲೋಕಮಾನ್ಯರು ತಮ್ಮ ಬುದ್ಧಿ ಸಾಮರ್ಥ್ಯವನ್ನು ವೆಚ್ಚ ಮಾಡಿದರು. ಗೀತಾರಹಸ್ಯ, ಆರ್ಕ್ಟಿಕ ಹೋಮ್, ಓರಾಯನ ಮುಂತಾದ ಗಹನ ವಿಷಯಗಳ ಮೇಲೆ ಗ್ರಂಥಗಳನ್ನು ಬರೆದವರು ಕೇವಲ ಲೋಕ ಸೇವೆಗಾಗಿ ವರ್ತಮಾನ ಪತ್ರದ ಸಂಪಾದಕರಾಗುವದು ಸಾಮಾನ್ಯ ಕೆಲಸವಲ್ಲ.

ಇವರು ಶ್ರೀಗಣಪತಿ ಮತ್ತು ಶ್ರೀ ಶಿವಾಜಿ ಉತ್ಸವಗಳನ್ನು ಪ್ರಾರಂಭಿಸಿ, ಮರಾಟರು ಕಳಕೊಂಡಂಥ ವೈಭವವನ್ನು ಪುನಃ ಸಂಪಾದಿಸುವಂತೆ ಪ್ರೇರಣೆ ಮಾಡಿದರು. ಶ್ರೀ ಶಿವಾಜಿ ಉತ್ಸವವು ರಾಜ್ಯಕ್ರಾಂತಿ ಪ್ರವರ್ತಕವಾಗಿರುತ್ತದೆಂದು ಸರಕಾರದವರು ಅಂದರು. ಆದರೆ ಪ್ರಿನ್ಸ ಆಫ ವೇಲ್ಸರು ಇದೇ ಮಹಾರಾಜರ ಸ್ಮಾರಕೋತ್ಸವದ ಮಂದಿರದ ಪಾಯಾ ಹಾಕುವ ಸಮಾರಂಭವನ್ನು ನೆರವೇರಿಸಿದರು. ೧೮೯೭ನೇ ಇಸವಿಯಲ್ಲಿ ರಾಜದ್ರೋಹವೆನಿಸಿದ್ದಕ್ಕೆ ೧೯೨೧ನೇ ಇಸವಿಯಲ್ಲಿ ಸರಕಾರದ ಶಿಕ್ಕಾ ಮೊಹರು ಬಿತ್ತು. ಸ್ವರಾಜ್ಯವು ಜನ್ಮಸಿದ್ಧ ಹಕ್ಕು ಆಗಿರುವದೆಂಬ ಲೋಕಮಾನ್ಯರ ರಣಗರ್ಜನೆಯು ಆಸೇತು ಹಿಮಾಲಯದ ತನಕ ದುಮು ದುಮಿಸುತ್ತಿರುವದು.

ಲೋಕಮಾನ್ಯರು ಕಾಂಗ್ರೆಸದಲ್ಲಿ ಹೊಕ್ಕು ಹುರುಪು ಹಾಕುವ ತನಕ ಅದರ ಅವಸ್ಥೆ ಹೇಗಿತ್ತು? ಕೆಲವು ಬುದ್ಧಿವಂತರು ವರ್ಷಕ್ಕೊಮ್ಮೆ ಸೇರಿ ಪರದೇಶಿಯರ ವಿಚಾರಗಳನ್ನು ಹಿಂದುಸ್ಥಾನಕ್ಕೆ ಹೇಗೆ ತರಬೇಕೆಂದು ವಾದವಿವಾದ ಮಾಡುವ ಒಂದು ಸಂಸ್ಥೆಯಾಗಿತ್ತು. ರಾಜಕೀಯ ಸ್ವಾತಂತ್ರ್ಯದ ಅಮೃತಪಾನವನ್ನು ಜನತೆಗೆ ಮೊದಲು ಮಾಡಿಸಿದವರೆ ಲೋಕಮಾನ್ಯರೇ. ಸ್ವಜನತೆಗೆ ಸ್ವರಾಜ್ಯದ ಶುಭ ವರ್ತಮಾನವನ್ನು ಸಾರಿದವರೇ ಇವರು. ಇವರ ಸ್ವರಾಜ್ಯವು ಜನಸಮೂಹದ ರಕ್ತಹೀರುವಂಥ ಕೆಲ ಬುದ್ಧಿವಂತರ ಮಟ್ಟಿಗಾಗಿರಲಿಲ್ಲ.

ಪಂಡಿತರು ಈ ಪ್ರಕಾರ ಭಾಷಣ ಮಾಡಿದ ನಂತರ ಲೋಕಮಾನ್ಯರ ಮೂರ್ತಿಯ ಮೇಲಿನ ಬುರಕಿಯನ್ನು ತೆಗೆದು ಮೂರ್ತಿಯ ರೂಪದಿಂದ ಲೋಕಮಾನ್ಯರ ದರ್ಶನ ಮಾಡಿಸಿದರು. ಆಗ ಟಿಳಕ ಮಹಾರಾಜಕೀ ಜಯವೆಂದು ಸಭಿಕರು ಜಯಘೋಷ ಮಾಡಿದರು.

ಬೆಳಗಾವಿಯ ಮಾಮಲೇದಾರರಾಗಿದ್ದ ಮಿ. ಗುರುರಾವ ಜಮಖಂಡಿಯವರು ಕಿಬ್ಬೊಟ್ಟೆಯ ಕೆಳಗೆ ನಾರಿಗೆಯಂತೆ ಎದ್ದಂಥ [illegible] ಬೆಳಗಾವಿಯಲ್ಲಿ ಕೊಯಿಸಿದರು. ಇದರಿಂದ ಗುಣವಾಗದೆ, ಅವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಪಾರ್ಲಮೆಂಟ ಸಭೆಯಲ್ಲಿ ಹಿಂದುಸ್ಥಾನದ ಸ್ವರಾಜ್ಯದ ವಿಚಾರ.

—o—

ಮಾತು ಬಹಳ, ತಥ್ಯ ತುಸು

—o—

ಹಿಂದುಸ್ಥಾನದ ಹಿಂದಿನ ಸ್ಟೇಟ ಸೇಕ್ರೆಟರಿಯಾದ ನಾಮದಾರ ಲಾರ್ಡ ಪೀಲ ಸಾಹೇಬರು ಲಾರ್ಡ್ಸ ಸಭೆಯಲ್ಲಿ ಹೋದ ಸೋಮವಾರದ ದಿವಸ ಹಿಂದುಸ್ಥಾನದ ಪ್ರಕೃತದ ರಾಜಕೀಯ ಆಂದೋಲನದ ವಿಷಯವಾಗಿ ವಾದವಿವಾದವನ್ನು ಪ್ರಾರಂಭಿಸಿದರು. ಇವರಿಗೆ ಲಾರ್ಡ ಕರ್ಜನ ಹಾಗು ಲಾರ್ಡ ಲೀ ಸಾಹೇಬರು ಬೆಂಬಲ ಕೊಟ್ಟರು. ಇವರಿಗೆ ಉತ್ತರ ಕೊಡತಕ್ಕವರು ಈಗಿನ ಸ್ಟೇಟ ಸೆಕ್ರೆಟರಿಯವರಾದ ಲಾರ್ಡ ಆಲಿವ್ಹರ ಸಾಹೇಬರೊಬ್ಬರೇ ಆಗಿದ್ದರು. ಲಾರ್ಡ ಪೀಲಸಾಹೇಬರು ಮುಖ್ಯವಾಗಿ ಮೂರು ಸಂಗತಿಗಳನ್ನು ಪ್ರಸ್ತಾಪಿಸಿದರು.

೧ ಲೀ ಕಮೀಶನದ ಮೇರೆಗೆ ಸಿವ್ಹಿಲ ಸರ್ವಂಟರ ಸಂಬಳ ಭತ್ತೆ ಹೆಚ್ಚಿಸುವದು

೨ ದೇಶಬಂಧು ದಾಸರ ಗೋಪೀನಾಥ ಶಹಾನ ಅಭಿನಂದನದ ನಿಷೇಧ ಮತ್ತು ಅವರ ವೇಳೆ ಬಿಟ್ಟ

೩ ಹಿಂದುಸ್ಥಾನದ ಆಡಳಿತೆಯ ವಿಷಯವಾಗಿ ನಡಿಸಿದ ಸ್ವರಾಜ್ಯ ಕಮಿಟಿಯ ವಿಚಾರಣೆಯ ಸ್ವರೂಪ

ಲಾರ್ಡ ಲೀ ಸಾಹೇಬರು ಬರೆದ ರಿಪೋರ್ಟಿನ ಮೇರೆಗೆ ಸಿವ್ಹಿಲ ಸರ್ವಂಟರ ಇಷ್ಟಿಯನ್ನು ಪೂರ್ಣ ಮಾಡದಿದ್ದರೆ ಹಿಂದುಸ್ಥಾನದ ರಾಜ್ಯಕಾರಭಾರವು ಸುರಕ್ಷಿತವಾಗಿ ಸಾಗಲಾರದು. ಮತ್ತು ಆ ದೇಶದಲ್ಲಿ ರಾಜ್ಯಕಾರಭಾರ ಮಾಡಲೋಸುಗ ವಿಲಾಯತಿಯಿಂದ ಹೋಗಲು ಉತ್ಸಾಹದವರು ದೊರೆಯರು ಮತ್ತು ಕೆಲಸ ಮಾಡುವ ಸಿವ್ಹಿಲ ಸರ್ವಂಟರು ತಮ್ಮ ಅವಸ್ಥೆ ಹೇಗಾದೀತೆಂಬ ಚಿಂತೆಯಲ್ಲಿದ್ದಾರೆಂದು ಲಾರ್ಡ ಪೀಲ ಸಾಹೇಬರು ಅಂದರು. ಮತ್ತು ಇದಕ್ಕೆ ಲಾರ್ಡ ಲೀ ಸಾಹೇಬರು ಅನುಮೋದನ ಕೊಟ್ಟರು. ಲಾರ್ಡ ಆಲಿವ್ಹರ ಸಾಹೇಬರು ಒಂದೇ ದಿಮಾಖಿನಿಂದ ಇವರ ಮನದಿಚ್ಛೆಯನ್ನು ಪೂರ್ಣ ಮಾಡಿದರು. ಸಪ್ಟಂಬರದಲ್ಲಿ ಕೂಡುವ ಅಸೆಂಬ್ಲಿಯಲ್ಲಿ ಸಂಬಳದ ಮಂಜೂರಿಯ ವಿಷಯವಾಗಿ ಯಾವದೇ ಪ್ರಕಾರದ ನಿರ್ಣಯವಾಗಲಿ ಆರು ತಿಂಗಳ ಮುಂಚಿನಿಂದ ಅಂದರೆ ಎಪ್ರಿಲದಿಂದ ಕಮೀಶನದ ಶಿಫಾರಸ್ಸಿನ ಪ್ರಕಾರ ಇವರ ಸಂಬಳವನ್ನು ಕೊಡುವೆವು. ಜನರು ಸಿಗುವದಿಲ್ಲೆಂಬ ಹೆದರಿಕೆ ಎಳ್ಳಷ್ಟು ಇಲ್ಲ. ಪೂರ್ವೇಸ ಪಾಠಶಾಲೆಯಲ್ಲಿ ಸಾಕಷ್ಟು ಜನರು ಸಿಕ್ಕಿದ್ದಾರೆ. ಮುಲಕೀ ಖಾತೆಯ ಪರೀಕ್ಷೆಯನ್ನು ಲಂಡನದಲ್ಲಿಯೂ ತಕ್ಕೊಳ್ಳುವೆವು. ಇಂಥ ಹೆದರಿಕೆಗೆ ಕಾರಣವಿಲ್ಲೆಂದರು.

ದೇಶಬಂಧು ದಾಸರು ಸಿರಾಜಗಂಜದ ಪ್ರಾಂತಿಕ ಸಭೆಯಲ್ಲಿ ಗೋಪಿನಾಥ ಶಹಾನ ಕೃತ್ಯವನ್ನು ಹೊಗಳಿದ್ದು ಅನುಚಿತವೆಂದೂ ಇವರೊಬ್ಬರು ದೊಡ್ಡ ಮನುಷ್ಯರಿದ್ದು ಇವರ ಮೇಲೆ ಖಟ್ಲೆ ಹಾಕದೆ, ಸಾಧಾರಣ ಪ್ರತಿಯ ಜನರನ್ನು ಕಾರಾಗೃಹಕ್ಕೆ ಕಳಿಸುತ್ತಿರುವದು ನಿಮ್ಮ ಧೈರ್ಯ ಸ್ಥೈರ್ಯದ ರಾಜನೀತಿಯಲ್ಲವೆಂದೂ ಲಾರ್ಡ ಪೀಲ ಸಾಹೇಬರು ಕೆಣಕಿದ ಭಾಷಣ ಮಾಡಿದರು. ಮಹಾತ್ಮ ಗಾಂಧಿಯವರ ಚಳವಳಿಯು ಅಹಿಂಸೆಯ ಅನುಸಾರದಾಗಿದೆ. ಯಾವ ರೀತಿಯ ವರ್ತನೆಯಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವದೆಂಬದನ್ನು ದೇಶಬಂಧು ದಾಸರು ಬಲ್ಲರು. [illegible] ಜೊತೆಯಿಂದ ಬ್ರಿಟಿಶ ಸರಕಾರವನ್ನು ಹೆದರಿಸಬೇಕೆಂದರೆ ಈ ಸರಕಾರವು ಹೆದರಲಾರದು. ನಮ್ಮ ಕೂಡ ಸಹಕಾರದಿಂದ ನಡೆದರೇ ಸ್ವರಾಜ್ಯದ ದಾರಿಯು ಸುಗಮವಾಗುವದೆಂದು ಮಿ ಮ್ಯಾಕಡೋನಾಲ್ಡ ಸಾಹೇಬರು ಈ ಮುಂದಾಗಿ ಹೇಳಿದ್ದಾರೆ. ನಾವು ಮಿ ದಾಸರ ಮೇಲೆ ಕೆಲಸ ನಡಿಸಲಿಚ್ಛಿಸುವದಿಲ್ಲ. ಈ ವಿಚಾರವನ್ನು ಹಿಂದುಸ್ಥಾನ ಮತ್ತು ಬಂಗಾಲ ಸರಕಾರಗಳಿಗೆ ಬಿಟ್ಟುಕೊಟ್ಟಿದ್ದೇವೆಂದು ಲಾರ್ಡ ಆಲಿವ್ಹರ ಸಾಹೇಬರು ಉತ್ತರ ಕೊಟ್ಟರು.

ಸ್ವರಾಜ್ಯ ಕಮೀಟಿಯ ವಿಚಾರಣೆಯು ಹಿಂದೂ ಒಂದು ವಿಚಾರದಿಂದ ಬಹಳ ಶುಷ್ಕವಾಗಿರುತ್ತದೆ. ರಾಜ್ಯದಾಡಳಿತೆಯಲ್ಲಿ ಕಂಡು ಬಂದ ದೋಷಗಳನ್ನು ತೆಗೆದುಹಾಕುವ ಹುಟ್ಟಿಗೆ ವಿಚಾರ ನಡೆದಿದೆಯೆಂದು ಸಾಹೇಬರು ಉತ್ತರ ಕೊಟ್ಟರು. ಈ ಉತ್ತರವು ಹಿಂದೂ ಜನರನ್ನು ಲಂಡನದಲ್ಲಿ ನೆಲ ಹಿಡಿದು ಕೂತಂಥ ನಾಮದಾರ ಶ್ರೀನಿವಾಸ ಶಾಸ್ತ್ರಿ ಮತ್ತು ಅನಿಬೆಜಾಂಟಮ್ಮನವರನ್ನು ತಕ್ಕ ನಿರಾಶೆಗೊಳಿಸಿರುವದು. ಇವರ ಶ್ರಮವು ವ್ಯರ್ಥವಾಗಿ ಗುಡ್ಡಕ್ಕೆ ಕಲ್ಲು ಹೂತ್ತಂತಾಯಿತೆಂಬದು ನಿಃಸಂದೇಹವಾದದ್ದು.

ಸ್ವರಾಜ್ಯ ಸಾಧನೆಗಾಗಿ
ಹಿಂದುಸ್ಥಾನದಿಂದ ಹೋದ ಜನರ ಪುನರಾಗಮನ.

—o—

ಪಾರ್ಲಮೆಂಟ ಸಭೆಯಲ್ಲಾದ ಸ್ವರಾಜ್ಯ ಸಂಬಂಧದ ಭಾಷಣದಿಂದ ನಿರಾಶೆಗೊಂಡ ಹಿಂದೀ ಗೃಹಸ್ಥರೆಲ್ಲರೂ ಬಂದ ಹಾದಿಗೆ ಸುಂಕವಿಲ್ಲೆಂದು ಸ್ವದೇಶದ ದಾರೀ ಹಿಡಿಯಲು ಪ್ರಸ್ಥಾನ ತೆಗೆದಿದ್ದಾರೆ. ನಾಮದಾರ ಶಾಸ್ತ್ರಿಯವರು ೧ನೇ ಅಗಸ್ಟದ ದಿವಸ ಹೊರಡುವರು. ಶ್ರೀ. ರಂಗಾಚಾರ್ಯರು ಕೂಡ ಕೊಲಂಬೋದ ಹಡಗದಲ್ಲಿ ಕೂಡಲೆ ಮದ್ರಾಸಕ್ಕೆ ಬರುವರು. ಸರ ಅಲಿ ಇಮಾಮ ಮತ್ತು ಸರ ಕೃಷ್ಣಗುಪ್ತರು ಬರುವ [illegible]ನೆಯ ತಾರೀಖಿನ ದಿವಸ ಲಂಡನ ಬಿಡುವರು. ಅನಿಬೆಝಾಂಟಮ್ಮನವರು [illegible]ನೇ ತಾರೀಖಿಗೆ ವಿಲಾಯತಿಗೆ ಶರಣು ಹೊಡೆಯುವರು.

ಈ ಗೃಹಸ್ಥರು ಒಮ್ಮೆಯಲ್ಲ, ಎರಡು ಸಾರೆಯಲ್ಲ, ಹಲವು ಸಾರೆ ಸ್ಟೇಟ ಸೇಕ್ರೆಟರಿಯವರಾದ ಲಾರ್ಡ ಓಲಿವ್ಹರ ಸಾಹೇಬರನ್ನೂ ಮುಖ್ಯಾಮಾತ್ಯರಾದ ಮಿ ಮ್ಯಾಕಡೋನಾಲ್ಡ ಸಾಹೇಬರನ್ನೂ ಕಂಡು, ಅವರ ಮುಂದೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಅಂದರೆ ವಸಾಹತಿನ ಮಾದರಿಯ ಸ್ವರಾಜ್ಯ ಕೊಡಿರಿ ಮತ್ತು ಈ ವಿಷಯವಾಗಿ ಒಂದು ರಾಯಲ ಕಮಿಶನ ನೇಮಿಸಿರೆಂದು ಬಹುವಾಗಿ ಹೇಳಿಕೊಂಡರು. ಆದರೆ ಇವರು ಇದಾವದನ್ನೂ ಅಂಗೀಕರಿಸಲಿಲ್ಲ. ಇದನ್ನು ಕಂಡು ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಅತ್ಯಂತವಾಗಿ ನಿರಾಶೆ ಹೊಂದಿ ಬ್ರಿಟಿಶ ಮುತ್ಸದ್ದಿಗಳಿಂದ ಹಿಂದುಸ್ಥಾನಕ್ಕೆ ಹಿತದ ಗುರಿ ಏನೂ ದೊರೆಯದೆಂಬ ಅಭಿಪ್ರಾಯದವರಾಗಿದ್ದಾರೆಂದು ಮ್ಯಾಂಚೆಸ್ಟರ ಗಾರ್ಡಿಯನ ಪತ್ರವು ಹೇಳುತ್ತದೆ.

ಆನಿಬೆಜಾಂಟಮ್ಮನವರು ಹೋದ ವಾರದಲ್ಲಿ ಮುಖ್ಯ ಮಂತ್ರಿಗಳನ್ನು ಕಂಡರೆಂದೂ ಅವರು [illegible] ಆಶೋಕದಾರರೆಂದೂ ಇನ್ನೊಂದ ವಾರ [illegible] ಆನಂತರ ವಸಾಹತಿನ ಸ್ವರಾಜ್ಯ ಕೊಡುವ ವಿಷಯವಾಗಿ ವಿಚಾರ ಮಾಡುವಂತೆ ಮಂತ್ರಿಗಳು ಉಸುರಿದಂತೆ ಈ ವರ್ತಮಾನವಾಗಿರುವದು. ಇದು ಅಶಿರದ ಕಾಲಹರಣ ಎನ್ನುವದಕ್ಕಿಂತ ಹೆಚ್ಚೆಂದಾಗಲಾರದೆಂದು ಹೇಳಬೇಕಾಗುತ್ತದೆ.

ಹಿಂದುಸ್ಥಾನ ಸರಕಾರದವರು ಇಲಾಖೆಯ ಗವ್ಹರ್ನರರ [illegible] ಸ್ವಾಮಿ, [illegible] ಬೇಗನೆ ತಮ್ಮ ರಿಪೋರ್ಟನ್ನು ವಿಲಾಯತಿ ಸರಕಾರಕ್ಕೆ ಕಳಿಸುವ ಉದ್ಯೋಗದಲ್ಲಿ ತೊಡಗಿದ್ದಾರೆ. ಇದಕ್ಕಿಂತ ಕೌನ್ಸಿಲಗಳ ಮೇಲೆ ರಿಫಾರ್ಮ ಬಗ್ಗೆ [illegible]ವಾಗಿ ವಿಚಾರ ನಡೆಸಿದ್ದಾರೆ. ಆದರೆ ಈ ವಿಚಾರದಲ್ಲಿ ಸ್ವರಾಜ್ಯ ಪಕ್ಷೀಯರು ಸೇರಿರುವದಿಲ್ಲ. ಏಕೆಂದರೆ ರೌಂಡ ಟೇಬಲ ಪರಿಷತ್ತಿನ ಹೊರ್ತು ಮಿಕ್ಕ ಕಮಿಟಿ ಕಮಿಶನಗಳು ಕೇವಲ ಫಾರ್ಸ ಆಗುವವೆಂದು ಇವರ ವ್ಯಕ್ತವಾದ ಅಭಿಪ್ರಾಯವಾಗಿರುತ್ತದೆ. ಮೈ ಮೇಲೆ ಭಾರ ಹಾಕಿದರೇ ಇಂಗ್ಲಿಷ ಸರಕಾರವು ಮಣಿಯುವದಲ್ಲದೆ, ನ್ಯಾಯ ನೀತಿಗನುಸರಿಸಿ ನಡಿಯಲಾರದೆಂದೂ ಸ್ವರಾಜ್ಯವನ್ನು ಕಸಕೊಳ್ಳುವದೇ ತಮ್ಮ ಧ್ಯೇಯವಾಗಿರಬೇಕೆಂದೂ ಮಹಾತ್ಮರು ಪರೋಪರೀ ಹೇಳುತ್ತಾ ಬಂದಿರುತ್ತಾರೆ. ಮಹಾತ್ಮರ ಈ ಮಾತಿನ ಪ್ರತ್ಯಕ್ಷ ಅನುಭವವು ಕೊನೆಯ ಸಾರೆ ನಾಮದಾರ ಶ್ರೀನಿವಾಸ ಶಾಸ್ತ್ರಿಯವರಿಗೆ ಬಂತು. ಅವರು ಈ ನಂತರವಾದರೂ ರಾಷ್ಟ್ರೀಯ ಪಕ್ಷವನ್ನೇಕೆ ಕೂಡಿಕೊಳ್ಳಬಾರದು? ಹಿಂದುಸ್ಥಾನದಲ್ಲಿ ಒಕ್ಕಟ್ಟು ಇರುತ್ತದೆಂದು ಸರಕಾರಕ್ಕೆ ಕಂಡು ಬಂದರೆ ಅದು ಯಾವ [illegible] ಮಾತಾಡದೆ, ತಾನಾಗಿ ಕರೆದು ಸ್ವರಾಜ್ಯ ಕೊಡುವದು.

ಸ್ವರಾಜ್ಯಕ್ಕಾಗಿ ವಿಲಾಯತಿಗೆ ದೇಶಬಂಧು ದಾಸರ ಪ್ರಯಾಣ.

—•—

ದೇಶಬಂಧು ದಾಸರೂ ಅವರ ಚಿರಂಜೀವಿಯೂ ವಿಲಾಯತಿಗೆ ಹೋಗುವದಕ್ಕಾಗಿ ಸರಕಾರದಿಂದ ಪಾಸಪೋರ್ಟು ಬೇಡಿದ್ದಾರೆಂಬ ಸಂಗತಿಯಲ್ಲಿ ರಾಜಕಾರಣವಿರಬೇಕೆಂದು ಸಹಜವಾದ ಊಹೆಯಾಯಿತು. ಈ ಸಂಗತಿಯು ಪಾರ್ಲಮೆಂಟ ಸಭೆಯಲ್ಲಿಯೇ ಸ್ಫೋಟವಾಯಿತು. ಸ್ಟೇಟ ಸೆಕ್ರೆಟರಿಯವರಾದ ಲಾರ್ಡ ಆಲಿವ್ಹರ ಮತ್ತು ಇಂಡಿಯಾ ಕಚೇರಿಯವರು ಸ್ವರಾಜ್ಯ ಸಂಬಂಧವಾಗಿ ಮಹಾತ್ಮರ ತರುವಾಯದಲ್ಲಿ ಅಧಿಕಾರವಾಣಿಯಿಂದ ಮಾತಾಡತಕ್ಕವರು ದೇಶಬಂಧು ದಾಸರೇ ಆಗಿದ್ದು, ಇವರಿಗೆ ಇಲ್ಲಿಗೆ ಬರುವಂತೆ ಇವರು ತಿಳಿಸಿದ್ದಾರೆಂದು ಪಾರ್ಲಮೆಂಟ ಸಭೆಯಲ್ಲಿ ಭಾಷಣಗಳಾಗಿರುತ್ತವೆ. ಕಲಕತ್ತೆಯಲ್ಲಿ ಬರುವ ತಿಂಗಳ ೧೦ನೇ ತಾರೀಖಿನ ದಿವಸ ಸ್ವರಾಜ್ಯ ಪಕ್ಷೀಯರ ಸಭೆ ಇದ್ದು, ಈ ಸಭೆಯ ಕೆಲಸ ತೀರಿಸಿಕೊಂಡು, ದೇಶಬಂಧು ದಾಸರು ವಿಲಾಯತಿಗೆ ಹೋಗಬಹುದಾಗಿರುತ್ತದೆ. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ನಿರಾಶೆಗೊಂಡು ಹಿಂದಿರುಗುವಾಗ ದೇಶಬಂಧುವಿನ ಪ್ರಯಾಣವು ನಿರಾಶೆಯಲ್ಲಿ ಆಶೆಯನ್ನು ಹುಟ್ಟಿಸಲು ಕಾರಣವಾಗಿರುತ್ತದೆ.

ಧಾರವಾಡ ಜಿಲ್ಹಾ ಕಾಂಗ್ರೆಸ ಕಮೀಟಿಯಿಂದ ನೋಟೀಸು

—o—

ಅಹಮ್ಮದಾಬಾದ ಅಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಪಾಸಾದ ನೂಲಿನ ಮತ್ತು ಬಹಿಷ್ಕಾರ ಸಂಬಂಧದ ಠರಾವುಗಳನ್ನು ಬೆಳಗಾವಿಯಲ್ಲಿ ಕೂಡಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸ್ವೀಕರಿಸಿ ಅದರಂತೆ ಪ್ರಾಂತದೊಳಗಿನ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳಗಳು ವರ್ತಿಸಬೇಕೆಂತಲೂ ಮತ್ತು ತಂತಮ್ಮ ಜಿಲ್ಹಾ ತಾಲೂಕ ಕಾಂಗ್ರೆಸ ಕಮೀಟಿಗಳು ೪ ಆಣೆ ಕೊಟ್ಟು ಕಾಂಗ್ರೆಸ ಸಭಾಸದರಾದ ಮತದಾರರ ಸಭೆ ಕರೆದು ಈ ಠರಾವುಗಳ ಬಗ್ಗೆ ಅವರ ಮತವನ್ನು ತಿಳಿದುಕೊಂಡು ತಾ. ೧೯೨೪ನೇ ಇಸ್ವಿ ವಳಗಾಗಿ ಪ್ರಾಂತಿಕ ಕಮಿಟಿಗೆ ರಿಪೋರ್ಟ ಮಾಡಬೇಕೆಂದೂ ಠರಾಯಿಸಿರುತ್ತಾರೆ. ಕಾರಣ ನೀವು ನಿಮ್ಮ ತಾಲೂಕ ಕಾಂಗ್ರೆಸ ಕಮೀಟಿಯ ಮತದಾರರ ಸಾಧಾರಣ ಸಭೆ ಕರೆದು ಮೊದಲು ಈ ಠರಾವುಗಳನುಸರಿಸಿ ನಡೆಯದಂಥವರಿಗೆ ಕಾರ್ಯಕಾರೀ ಮಂಡಲದ ಮೇಲಿಂದ ರಾಜೀನಾಮೆಯನ್ನು ಕೊಡ ಹೇಳಿ, ಅವರ ಸ್ಥಳದಲ್ಲಿ ಠರಾವುಗಳನ್ನು ಅಮಲಿನಲ್ಲಿ ತರುವಂಥವರನ್ನೇ ನೇಮಿಸಬೇಕು. ಮತ್ತು ಜಿಲ್ಹಾ ಕಮಿಟಿಯ ಕಾರ್ಯಕಾರೀ ಮಂಡಲದ ಮೇಲೆ ಈ ಠರಾವುಗಳಿಗನುಸರಿಸಿ ನಡೆಯದಂಥವರಿಗೂ ರಾಜೀನಾಮೆ ಕೊಡಹೇಳಿ ಅವರ ಸ್ಥಳದ ಠರಾವುಗಳನ್ನು ಅಮಲಿನಲ್ಲಿ ತರುವಂಥವರ ಹೆಸರುಗಳನ್ನೇ ಈ ಕಮೀಟಿಗೆ ಕಳಿಸಬೇಕು. ಮತ್ತು ಇದೇ ಸಾಲಿನ ಅಗಸ್ಟ ತಿಂಗಳ ೧೦ನೇ ತಾರೀಖ ರವಿವಾರ ಮಧ್ಯಾಹ್ನ ೩ ಘಂಟೆಗೆ ಧಾರವಾಡ ಕಾಂಗ್ರೆಸ ಕಚೇರಿಯಲ್ಲಿ ಜಿಲ್ಹಾ ಕಾಂಗ್ರೆಸ ಕಮಿಟಿಯ ವೈಶೇಷಿಕ ಸಾಧಾರಣ ಸಭೆ ಹೊಸ ಕಾರ್ಯಕಾರೀ ಮಂಡಲವನ್ನು ಮಾಡುವದಕ್ಕೂ ಮತ್ತು ಈ ಸಂಬಂಧ ತಾಲೂಕುಗಳಿಂದ ಬಂದ ರಿಪೋರ್ಟುಗಳನ್ನು ಏಕೀಕರಿಸಿ ಈ ಠರಾವುಗಳ ಬಗ್ಗೆ ನಮ್ಮ ಜಿಲ್ಹೆಯ ಮತದಾರರ ಮತವೇನಿರುವದೆಂಬದನ್ನು ನಿರ್ಣಯಿಸುವದರ ಸಲುವಾಗಿಯೂ ಕೂಡುವದು. ಆ ಸಭೆಗೆ ನಿಮ್ಮ ತಾಲೂಕಿನಿಂದ ೧೦ ಜನ ಪ್ರತಿನಿಧಿಗಳನ್ನು ಕಳಿಸಿ ಕೊಡಬೇಕು. ಕಾರ್ಯವು ಮಹತ್ವದ್ದಾದ್ದರಿಂದ ಎಲ್ಲರೂ ಜಾಗರೂಕರಾಗಿ ಶೀಘ್ರವಾಗಿ ಈ ಕಾರ್ಯವನ್ನು ಮಾಡಿ ರಿಪೋರ್ಟ ಕಳಿಸಬೇಕು. ಇದಲ್ಲದೆ ಅಧ್ಯಕ್ಷರ ಪರವಾನಗಿಯಿಂದ ಮತ್ತೇನಾದರೂ ವಿಷಯಗಳಿದ್ದಲ್ಲಿ ಅವುಗಳ ಚರ್ಚೆಯೂ ಮಾಡಲ್ಪಡುವದು.

ಕೋರಮ್ ಆಗದಿದ್ದಲ್ಲಿ ಸಭೆಯ ಕೆಲಸವು ಅರ್ಧತಾಸಿನ ವರೆಗೆ ತಹಕೂಬಾಗಿ ಮುಂದೆ ರೀತಿ ಪ್ರಕಾರ ಸಭೆಯ ಕಾರ್ಯವು ನಡೆಯುವದು.

ಸಭಾಸದರು ತಪ್ಪದೇ ಬರಬೇಕು

ಜಿ. ಕಾ. ಕ. ಧಾ. } ಗೋವಿಂದಾಚಾರ್ಯ ಗುತ್ತಲ
ತಾ ೨೩-೭-೨೪ } ಕಾರ್ಯದರ್ಶಿ

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯಲ್ಲಿ ಕೆಲಸ ಮಾಡುವಂಥ ಕೂಲಿಕಾರರ ಒಂದು ದೊಡ್ಡ ಸಭೆಯು ಪೆರಂಬೂರಿನಲ್ಲಿ ಕೂಡಿತ್ತು. ಸಭೆಗೆ ೫೦೦೦ ಜನರು ಸೇರಿದ್ದರು. ಕಂಪನಿಯವರು ಕೂಲಿಯನ್ನು ಹೆಚ್ಚಿಸಬೇಕು ಮತ್ತು ಊಟದ ಸ್ಥಿತಿಯು ಸುಧಾರಿಸುವಂತೆ ಏರ್ಪಾಡು ಮಾಡಬೇಕೆಂದು ಠರಾವುಗಳು ಪಾಸಾದವು.

ಮಹಾತ್ಮರು ಹಿಂದುಸ್ಥಾನದಲ್ಲಿ ಸಂಚಾರಕ್ಕೆ ಹೊರಡುವಾಗ ಅಹಮದಾಬಾದಿನ ಕೂಲಿಕಾರರು ಅವರಿಗೆ ಒಂದು ಥೈಲಿಯನ್ನು ಕಾಣಿಕೆಯಾಗಿ ಕೊಡುವರು. ಮಹಾತ್ಮರು ಈ ಹಣವನ್ನು ಶಾಲೆ[illegible]ಟ್ಟುವದಕ್ಕಾಗಿ ಉಪಯೋಗಿಸುವರು.

ಮೈಸೂರು ಪ್ರಾಂತ ದಕ್ಷಿಣ ಕನ್ನಡ ಉತ್ತರ ಕರ್ನಾಟಕದ ಧಾರವಾಡ ಭಾಗ
ಮೊದಲಾಗಿ ಇಡೀ ಕರ್ನಾಟಕದಲ್ಲಿ
ಶ್ರೀ ದತ್ತಾತ್ರೆಯ ಕರ್ನಾಟಕ ನಾಟಕ ಮಂಡಳಿಯವರು ಪ್ರಯೋಗ ಮಾಡಿ
ಅತ್ಯಂತ ಲೋಕಪ್ರಿಯವಾಗಿರುವ
ಮ. ರಾ. ಸದಾಶಿವರಾವ ಗರೂಡ
ಇವರಿಂದ ರಚಿತವಾದ

ಸಂಗೀತ ನಾಟಕಗಳು

ಪಾದುಕಾ ಪಟ್ಟಾಭಿಷೇಕ	೧—೦—೦
ವಿಷಮವಿವಾಹ ಅಥವಾ ಪಶ್ಚಾತ್ತಾಪ	೧—೦—೦
ವಾಕ್ಯಬಂಧ ವಿಮೋಚನ ಅಥವಾ ಕಂಸವಧ	೧—೦—೦
ಕಬೀರದಾಸ	೧—೦—೦

ಈಗ ಮುದ್ರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿವೆ. ನಾಟಕದೊಳಗಿನ ಚಿತ್ತಾಕರ್ಷಕ ಮತ್ತು ಮನೋವೇಧಕ ಭಾಗಗಳು ನಟರ ಅಭಿನಯಪೂರ್ಣ ಚಿತ್ರಗಳಿಂದ ಕೂಡಿದೆ. ಕೆಲವು ಪ್ರತಿಗಳನ್ನು ಮುದ್ರಿಸಿರುವದರಿಂದ ಬೇಗ ತರಿಸಿ ಓದಿ ಆನಂದ ಪಡೆಯಿರಿ. ತಡವಾದರೆ ನಿರಾಶರಾಗುವ ಹೊತ್ತು ಬಂದೀತು,

ದೊರೆಯುವ ವಿಳಾಸ:— ಶ್ರೀ. ದತ್ತಾತ್ರೆಯ ಕರ್ನಾಟಕ ನಾಟಕ ಮಂಡಳಿ.
ಹುಬ್ಬಳ್ಳಿ

ಸುಪ್ರಸಿದ್ಧ **ಶಾಂತವೀರ** ಸುವಾಸಿಕ

ಹುರುಕಿನ ಔಷಧ	ಚೀಟು ೧೦೦ಕ್ಕೆ	೪-೮-೦			
ದಂತಮಂಜನ	೧೦೦	೪-೮-೦	೯ ಖಜ್ಜಿಯ ಮಲಮು ಡಬ್ಬಿ	೧ಕ್ಕೆ	೦-೪-೦
ಗೋಮಸಂಹಾರಿ	,,	೪-೮-೦	೧೦ ಗಜಕರ್ಣ ಮಲಮು ,,	,,	೦-೪-೦
೩ ಕೇನೂ ಶೀರ ನಾಶಕ ,,	,,	೧-೧೨-೦	೧೧ ಇಸಬಿನ ಮಲಮು ,,	,,	೦-೪-೦
೪ ಕಣ್ಣು ಬೇನೆಯ ಔಷಧ ,,	,,	೧-೦-೦	೧೨ ವ್ರಣಾಂತಕ ಮಲಮು ,,	,,	೦-೦-೦
೫ ಕ್ರಿಮಿನಾಶಕ(ಜಂತಿನಪುಡಿ	,,	೪-೦-೦	೧೩ ಮಳೆಕೆಮೂಲವ್ಯಾಧಿಗೆ ಮಲಮು ,,		೧-೦-೦
೬ ಜ್ವರಹರ ಚೂರ್ಣ ,,	,,	೧-೦-೦	೧೪ ರಕ್ತ ಇಲ್ವಾಧಿನಾಶಕ ಚೂರ್ಣ ,,		೧-೦-೦
೭ ಪಿತ್ತಶಾಂತಿಯಾಗುವದಕ್ಕೆ	,,	೪-೦-೦	೧೫ ಬಲಶಾಂತಿ ಗುಳಿಗೆಗಳು ,,	,,	೬-೦-೦
೮ ನೀಲೀಕಪ್ಪು ಮಶಿಪುಡಿ ,,		೧-೦-೦			
ಗರ್ಭಪ್ರತಿಬಂಧಕ ಗುಳಿಗೆ	,,	-೦-೦	ಪಶುಸಂಜೀವಿನಿ (ದನದ ಔಷಧ) ,,		೧-೦-೦

ಸೂಚನೆ:—ಪ್ರತಿನಿತ್ಯ ಸಾವಿರಾರು ಚೀಟುಗಳು ಖರ್ಚಾಗುವವು ಎಲ್ಲ ಪ್ರಸಿದ್ಧ ವ್ಯಾಪಾರಸ್ಥರಲ್ಲಿ ಮಾರಲಿಕ್ಕೆ ಸಿಗುವವು ರೋಕ ತೆಗೆದುಕೊಂಡರೆ ಭರಪೂರ ಕಮಿಶನ್ ೧ ರೂಪಾಯಿಗಿಂತ ಕಡಿಮೆ ಔಷಧ ನಮ್ಮಲ್ಲಿ ವ್ಹಿ.ಪಿ.ಯಿಂದ ಕಳುಹಿಸಲಿಕ್ಕಾಗುವದಿಲ್ಲ. ಔಷಧವನ್ನು ಬೇಡುವವರು ಒಂದು ನಾಲ್ಕನೇ ಅಂಶ ರಕಮು ಮುಂಗಡ ಕಳುಹಿಸಬೇಕು. ಟಪಾಲ ಖರ್ಚು ಬೇರೆ.

ಡಾಕ್ಟರ— ಎಸ್. ಆರ್. ಕಿತ್ತೂರ. (V D

ಶಾಂತಿನಿಲಯ
ಶಾಂತವೀರ ಧಾರವಾಡ

ಪಶುಸಂಜೀವಿನಿ "ಕಾರ್ಖಾನೆ
ಮಂಗಳವಾರ ಪೇಟ ಧಾರವಾಡ

ನಿಮ್ಮ ಗಂಟನ್ನು ಎರಡಷ್ಟೆಯುವರ ಕೈಯಲ್ಲಿ ಕೊಟ್ಟು ಕೋರ್ಟಿನ ಎಡತಾಕುವದು
ಸಾಕಾಗುವದಲ್ಲವೇ? ಹಾಗಾದರೇ—

ದಿ ಹುಬ್ಬಳ್ಳಿ ಇಲೆಕ್ಟ್ರಿಸಿಟಿ ಕಂಪನಿ ಲಿಮಿಟೆಡ್

ಇದರ ಫಾಯದೇಶೀರ ಶೇರುಗಳನ್ನು ಕೊಂಡು
ಕಂಪನಿಯ ಮಾಲಕರಾಗಿ ನಿರಂತರ ಲಾಭವನ್ನು ಯಾಕೆ ಹೊಂದಬಾರದು ??
ಸಧ್ಯಕ್ಕೆ ೫೦ ರೂ. ಗೊಂದರ ೬೦೦೦ ಶೇರುಗಳು ಮಾತ್ರ ಮಾರಲಿಕ್ಕೆ ತೆಗೆಯಲ್ಪಟ್ಟಿವೆ.
ಕಂಪನಿಯ ಸವಿಸ್ತಾರ ಮಾಹಿತಿಯನ್ನು ಕೊಡುವ ಪ್ರೊಸ್ಪೆಕ್ಟಸ್ಸನ್ನು ಇಂದೇ ತರಿಸಿಕೊಳ್ಳಿರಿ !!
ತಡಮಾಡಿದರೆ ನಿರಾಸೆಯಾಗದೇ ಇರದು !!!

ಮ್ಯಾನೇಜಿಂಗ ಏಜಂಟರು—
ಅಮಟೆ ಮತ್ತು ಕಂಪನಿ
ಹುಬ್ಬಳ್ಳಿ

ಶಿಕ್ಷಕನ ಸಹಾಯವಿಲ್ಲದೆ ಹಾರ್ಮೋನಿಯಮು



ವಾದ್ಯವನ್ನು ಬಾರಿಸಲಿಕ್ಕೆ ಕಲಿಯಬೇಕಾದರೆ— ಪ್ರೊಫೆಸರ ಭಾಪುರಾವ ಹಾರ್ಮೋನಿಯಮು ಮಾಸ್ತರ ಇವರು ಹಾರ್ಮೋನಿಯಮು ಶಿಕ್ಷಕವನ್ನು ಕನ್ನಡದಲ್ಲಿ ಮುದ್ರಿಸಿರುತ್ತಾರೆ. ಇದರಲ್ಲಿ ಗೋಪಾಲ ಬಾನ್ಸ, ಜಾನಕಿ ಬಾಯಿ ಬಾಲಗಂಧರ್ವ, ಮಾಸ್ತರ ಕೃಷ್ಣ ಮೊದಲಾದ ಪ್ರಸಿದ್ಧ ಗಾಯಕರ ಪದಗಳ ಸ್ವರಗಳ ನೊಟೇಶನ ಮತ್ತು ರಾಗಗಳ ವರ್ಣನೆಯುಳ್ಳ ಸ್ವರಗಳನ್ನು ಕೊಟ್ಟಿರುತ್ತದೆ. ಬೆಲೆ ಒಂದು ರೂಪಾಯಿ. ಪರಸ್ಥಳದವರಿಗೆ ವ್ಹಿ. ಪಿ. ಖರ್ಚು ಬೇರೆ. ಪುಸ್ತಕ ದೊರೆಯುವ

ವಿಳಾಸ:— ಪ್ರೊ. ಪ್ರೊ. ದೇಸಾಯಿ ಬಿಸಲಳ್ಳಿ.
ಮಾಳಮಡ್ಡಿ ಧಾರವಾಡ

ಪೂರಾ ೧೬ ಆಣೆ ಗುಣ ಯಾವಾಗ ಬರುತ್ತದೆ?

ಡಾಕ್ಟರರ ಪ್ರಿಸ್ಕ್ರಿಪ್ಶನದಂತೆ ತದಾಪಿ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿಕೊಟ್ಟಾಗ ಮಾತ್ರ! ಡಾಕ್ಟರರೂ ಜನರೂ ಈ ಕೆಲಸದಲ್ಲಿ ಪ್ರಸಿದ್ಧ ಕನಕಾದಿತ್ಯ ಮೆಡಿಕಲ ಸ್ಟೋರ್ಸವನ್ನು ಬಹಳವಾಗಿ ಹೊಗಳುವ ಕಾರಣದ ಮುಖ್ಯ ಇಂಗಿತವಾದರೂ ಇದೇ ಇರುತ್ತದೆ.

ಮೊಮೆಂಟ ಕ್ಯೂರ ಅಂದರೆ– ಒಂದೇ ಕ್ಷಣದಲ್ಲಿ ಗುಣ.

ತಲೆ ಶೂಲಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಬೆಲೆ ಎರಡೇ ಆಣೆ

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟಸ
ಸ್ಟೇಶನರೋಡ, ಹುಬ್ಬಳ್ಳಿ.

ಛೆ! ಹೀಗೆ ತಡಮಾಡಿದರೆ ಸಿಗಲಾರವು !!

ಒಂದೇ ತಿಂಗಳಲ್ಲಿ
ದಿ ಹುಬ್ಬಳ್ಳಿ ಇಲೆಕ್ಟ್ರಿಸಿಟಿ ಕಂಪನಿಯ.
ಒಂದು ಲಕ್ಷಕ್ಕಿಂತ ಹೆಚ್ಚು ಬೆಲೆಯ ಶೇರುಗಳು.
ಆಗಲೇ ಮಾರಿ ಹೋದವು !!

ಸಧ್ಯಕ್ಕೆ ೫೦ರೂ ಗೊಂದರ ೬೦೦೦ ಶೇರುಗಳನ್ನು ಮಾತ್ರ ಮಾರಲಿಕ್ಕೆ ತೆಗೆದಿವೆ.
ತ್ವರೆ ಮಾಡಿರಿ. ಬೇಗ ಸವಿಸ್ತಾರ ಮಾಹಿತಿಯನ್ನು ಕೊಡುವ ಪ್ರಾಸ್ಪೆಕ್ಟಸ್ಸನ್ನು
ಇಂದೇ ತರಿಸಿರಿ. ಈ ಹೊತ್ತೇ ಪತ್ರ ಬರೆಯಿರಿ. ಇಂದೇ ಅರ್ಜಿ ಕಳಿಸಿರಿ,

ಮ್ಯಾನೇಜಿಂಗ ಏಜಂಟರು
ಅಮಟೆ ಮತ್ತು ಕಂಪನಿ
ಹುಬ್ಬಳ್ಳಿ

THE DHARWAR BANK LIMITED DHARWAR

—o—

The Bank will accept fixed deposits for 3 4 6 months For rates of interest apply to the manager.

A K Katti.
Managing Director

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

—o—

೧೯೧೩ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ

—o—

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ ಚಾಲೂ ಖಾತೆ, ಠೇವು, ಸೆವ್ಹಿಂಗ್ಸ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦, ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K. B Ankalagi
ಮ್ಯಾನೆಜಿಂಗ ಡಾಯರೆಕ್ಟರ

ವಾಗ್ಭೂಷಣ

—o—

ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಟವಾಗುತ್ತಿದ್ದ "ವಾಗ್ಭೂಷಣ" ಮಾಸ ಪತ್ರಿಕೆಯು ಅನೇಕ ಅಡಚಣೆಗಳ ಮೂಲಕ ನಿಂತು ಹೋಗಿರುವದನ್ನು ಪುನಃ ಪ್ರಕಟಿಸುವ ವ್ಯವಸ್ಥೆಯಾಗಿರುವದು ಬರುವ ಅಗಸ್ಟ ೧ನೇ ತಾರೀಖಿಗೆ ಸರಿಯಾಗಿ ಪ್ರಥಮ ಸಂಚಿಕೆಯು ಪ್ರಕಟವಾಗುವದು. ಹಿಂದಿನ ವರ್ಗಣಿದಾರರು ಹಂಗಾಮದಾರರು ಕೂಡಲೆ ಬಂದು ತಮ್ಮ ಹೆಸರು ರಜಿಸ್ಟರ ಮಾಡಿಸಿಕೊಳ್ಳಬೇಕು.

ತಾ- ೧೧-೭-೩೪

ಕೆ. ಬಿ. ಅಂಕಲಗಿ
ವ್ಯವಸ್ಥಾಪಕ ವಾಗ್ಭೂಷಣ
ಧಾರವಾಡ.

MUTAGI BROS CO
GAS MERCHANTS
BUDHRKATTI,

—o—

ನಮ್ಮಲ್ಲಿ ಗ್ಯಾಸಲಾಯಿಟುಗಳು ಭಾಡೆಯಿಂದ ಸಿಗುತ್ತವೆ. ಮತ್ತು ಗ್ಯಾಸುಗಳು ಅದರ ಸಾಮಾನುಗಳೂ ಮಾರಾಟಕ್ಕೂ ಇರುತ್ತವೆ.

ನಮ್ಮ ಪತ್ತೆ
ಮುತ್ತಿಗಿ ಬ್ರದರ್ಸ ಮತ್ತು ಕಂಪನಿ
ಗ್ಯಾಸ ಮರ್ಚಂಟ್ಸ ಬುದರಕಟ್ಟಿ
ಪೋ. ಬೈಲಹೊಂಗಲ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತುಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿಯಾಗುವದು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ ವಿಜಯ ಧಾರವಾಡ

ವಿಜಯದ ವರ್ಗಣೀ ದರ
ನಿಶ್ಚಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೪—೮—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೪—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ನಾಟಕ! ನಾಟಕ!

ಶ್ರೀ. ಗದಗ ದತ್ತಾತ್ರೆಯ ನಾಟಕ ಮಂಡಳಿ,

—o—

ಹುಬ್ಬಳ್ಳಿಯಲ್ಲಿ ಗಣೇಶಪೇಟೆಯ ಥಿಯೇಟರದಲ್ಲಿ
ಬುಧವಾರ ತಾ ೨೫-೭-೩೪
ಕವಿಸಾರ್ವಭೌಮ
ಶನಿವಾರ ೪ ಅಗಸ್ಟ ೧೯೩೪ ನೇ ರಾತ್ರಿ
ಮಹಾತ್ಮಾ ಕಬೀರದಾಸ
ಸೋಮವಾರ ತಾ|| ೬-೮-೧೯೩೪
ಶ್ರೀ. ಶರಣ ಬಸವ.

ಸದಾಶಿವರಾವ ಗರೂಡ.
ಮಾಲಕ. ಶ್ರೀ ಗ.ದ ನಾ ಕ

ನೋಟೀಸು

ಪಾರ್ವತಿ ಕೋಂ ಬಸವಣ್ಣೆಪ್ಪಾ ಗೌಡ್ರ ನವರ ಸಾ|| ಕುಂದಗೋಳ ಇವರಿಗೆ

ಈ ನೋಟೀಸಿನ ದ್ವಾರ ತಿಳಿಸುವದೇನೆಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಈಗ ಆರು ತಿಂಗಳ ಲಾಗಾಯತು ಕೆಟ್ಟ ಜನರ ಸೋಬತಿಯಲ್ಲಿ ಇದ್ದು ಕೆಟ್ಟ ನಡತೆಯವಳು ಆಗಿರುತ್ತೀ. ಕಾರಣ ಇದೇ ನೋಟೀಸಿನ ಅಂತಾ ತಿಳಿಸುವೇನು ಇವತ್ತಿನಿಂದ ನಿನ್ನದು ನನ್ನದು ಏನು ಮೇಲೆ ಯಾವತರದ ಹಕ್ಕು ಇರುವದಿಲ್ಲ. ತಿಳಿಯಲಿನಮು. ಕುಂದಗೋಳ ತಾ. ೧೨ ಜುಲೈ ೧೯೩೪ ಇಸ್ವಿ

ಶಿವಪ್ಪಾ ಬಿನ್ನ ಗವಡಪ್ಪಾ ಗವಡಪ್ಪನವರ

ನಾಗಪೂರದಲ್ಲಿ ಲೋಕಮಾನ್ಯರ ಪುಣ್ಯತಿಥ್ಯುತ್ಸವವು ಬಹು ಸಡಗರದಿಂದ ನೆರವೇರಿತು ಮ್ಯುನಿಸಿಪಾಲಿಟಿಯು ಶಾಲೆಗಳಿಗೆ ರಜೆ ಕೊಟ್ಟಿದ್ದರು.

ಸೈಕಮದ ಸತ್ಯಾಗ್ರಹಕ್ಕೆ ಸಹಾಯವೆಂದು ವಿಜಾಪುರ ಮ್ಯುನಿಸಿಪಾಲಿಟಿಯವರು ನೂರು ರೂಪಾಯಿ ಮಂಜೂರ ಮಾಡಿದ್ದಾರೆ.

ಕಾಶಿಯ ಪೋಸ್ಟ ಮಾಸ್ತರರಾದ ಮಿ. ಬ್ರಿಮ್‌ಫೀಲ್ಡ ಸಾಹೇಬರು ೧೬೦೦೦ ರೂಪಾಯಿಗಳನ್ನು ಲಗಾಯಿಸಿ ಹಾರಿದ್ದಕ್ಕಾಗಿ ಸಸ್ಪೆಂಡ ಮಾಡಲ್ಪಟ್ಟಿದ್ದಾರೆ.

ಸರ ಫಾಜಲಭಾಯಿಯವರ ಔದಾರ್ಯ.

—೦—

ಶಿಕ್ಷಣಕ್ಕಾಗಿ ಹತ್ತು ಲಕ್ಷದ ಸಹಾಯ.

—೦—

ಸರ ಫಾಜಲಭಾಯಿ ಕರೀಮಭಾಯಿಯವರು ಸರ ಕರೀಮಭಾಯಿ ಇಬ್ರಾಹೀಮ ಮತ್ತು ಸರ ಕರೀಮಭಾಯಿಯವರ [illegible] ಹೆಸರಿನಿಂದ ವಿಲಾಯತಿಯಲ್ಲಿ ಶಾಸ್ತ್ರೀಯ ಮತ್ತು ಔದ್ಯೋಗಿಕ ಶಿಕ್ಷಣವನ್ನು ಪಡೆಯಲಿಕ್ಕೆ ಹೋಗುವಂಥ ಮುಸಲ್ಮಾನ ವಿದ್ಯಾರ್ಥಿಗಳ ಶಿಷ್ಯವೃತ್ತಿಗಾಗಿ ಮುಂಬಯಿ ಯುನಿವ್ಹರ್ಸಿಟಿಯ ವಶಕ್ಕೆ ವರ್ಷಕ್ಕೆ ಸಾವಿರಕ್ಕೆ ೩॥ ರೂಪಾಯಿ ಬಡ್ಡಿ ಬರುವಂಥ ಹತ್ತು ಲಕ್ಷದ ನೋಟುಗಳನ್ನು ಕೊಟ್ಟಿರುತ್ತಾರೆ. ವಿದ್ಯಾರ್ಥಿಗಳು ಸ್ಕಾಲರಶಿಪ್ಪನ್ನು ಸಾಲವೆಂದು ತಕ್ಕೊಂಡು ತಾವು ಗಳಿಸಲಿಕ್ಕೆ ಹತ್ತಿದ ನಂತರ ಸುಲಭ ಕಂತಿನಿಂದ ಇದನ್ನು ತಿರುಗಿ ಯುನಿವ್ಹರ್ಸಿಟಿಗೆ ಕೊಡತಕ್ಕದ್ದು.

ಆಫ್ರಿಕಾದೊಳಿರುವ ಹಿಂದೀಜನರು ಉಂಡು ಕೇಳಿದರು

—೦—

ನಾಮದಾರ ಶ್ರೀನಿವಾಸ ಶಾಸ್ತ್ರಿ ಅವರು ಯೂನಿಯನ್ನಿನವರ ಸನ್ಮಾನಕ್ಕಾಗಿ ಲಂಡನದ ಕೊಲೋನಿಯಲ ಖಾತೆಯ ಪ್ರಮುಖ ಗೃಹಸ್ಥರು ಭೋಜನ ಸಮಾರಂಭವನ್ನು ಮಾಡಿದರು. ಆಗ ಮಿ ಅಮ್ಮೆರಿ ಅಧ್ಯಕ್ಷರಾಗಿದ್ದರು. ಹಿಂದೂ ಜನರು ತಮ್ಮ ರಾಜ್ಯ ಕಾರಭಾರದ ಘಟನೆಯನ್ನು ತಾವೇ ಮಾಡಿಕೊಳ್ಳಬೇಕೆಂದು ಭೋಜನೋತ್ತರದಲ್ಲಿ ಭಾಷಣ [illegible] ಇಂಪೀರಿಯಲ ಕಾನ್ಫರೆನ್ಸಿನಲ್ಲಿ ಬರೆದು ಅದನ್ನು ಪಾರ್ಲಮೆಂಟ ಸಭೆಯ ಮುಂದಿರಿಸುವಂತೆ ಆಮ್ಮನವರು ತಮಗೆ ಆತಿಥ್ಯ ಸತ್ಕಾರ ಮಾಡಿದವರಿಗೆ ಆಹ್ವಾನ ಕೊಟ್ಟರು. ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಕೆನಿಯಾ, ವಸಾಹತುಗಳಲ್ಲಿಯ ಹಿಂದೀಜನರ ಕಷ್ಟ ಗೋಳುಗಳನ್ನು ಹೇಳಿ, ಹಗ್ಗ ಹರಿಯುವ ಮೊದಲು ಸ್ವರಾಜ್ಯ ಕೊಡಬೇಕೆಂದು ಸ್ಪಷ್ಟವಾಗಿ ನುಡಿದರು.

ಮ್ಯುನಿಸಿಪಾಲಿಟಿಯ ಮೆಂಬರರಾಗುವವರು ಮಾಡಿದ ಪ್ರತಿಜ್ಞೆ

—೦—

ಮದ್ರಾಸದ ಮ್ಯುನಿಸಿಪಾಲಿಟಿಯಲ್ಲಿ [illegible] ಸ್ವರಾಜ್ಯ ಪಕ್ಷದ ವತಿಯಿಂದ ಉಮೇದವಾರರಾಗಿದ್ದವರು ಕೆಳಗೆ ಹೇಳಿದಂತೆ ಆಣೆ ಮಾಡಿದ್ದಾರೆ —

೧ ನಾನು ಖಾದಿಯನ್ನು ಹಾಕಿಕೊಂಡೇ ಕಚೇರಿ ಕೆಲಸಗಳಿಗೆ ಹೋಗುವೆನು

೨ ಸರಕಾರೀ ಅಧಿಕಾರಿಗಳ ಸನ್ಮಾನಕ್ಕಾಗಿ ಮಾಡಿದ ಸಮಾರಂಭಗಳಿಗೆ ಹೋಗಲಿಕ್ಕಿಲ್ಲ.

೩ ಗವರ್ನರ, ಲೆಫ್ಟನೆಂಟ ಗವರ್ನರ, ಮಂತ್ರಿ ಮೊದಲಾದವರಿಗೆ ಮಾನಪತ್ರ ಕೊಡುವ ಠರಾವಿಗೆ ಒಪ್ಪಿಗೆ ಕೊಡಲಿಕ್ಕಿಲ್ಲ.

೪ ಕಾಂಗ್ರೆಸದ ವಿಧಾಯಕ ಕಾರ್ಯಕ್ರಮವನ್ನು ಶಕ್ಯವಾದಷ್ಟು ಮ್ಯುನಿಸಿಪಾಲಿಟಿಯಲ್ಲಿ ನಡೆಸುವೆನು

ಪ್ರಯಾಗದಲ್ಲಿ ಮೌಲಾನಾ ಮಹಮ್ಮದಲ್ಲಿಯವರ ಭಾಷಣ

—೦—

ಅಲ್ಲಾಹಾಬಾದಿನಲ್ಲಿ ಕೂಡಿದ ಒಂದು ಸಾರ್ವಜನಿಕ ಸಭೆಯಲ್ಲಿ ಮೌಲಾನಾ ಮಹಮ್ಮದಲ್ಲಿಯವರು ಕೆಳಗೆ ಕಾಣಿಸಿದಂತೆ ಭಾಷಣ ಮಾಡಿದ್ದಾರೆ—

' ವರ್ತಮಾನ ಪರಿಸ್ಥಿತಿಯು ದಾಸ್ಯ ಸಂಘದಲ್ಲಿ ಬಿದ್ದಂತಿದೆ. ಆದ್ದರಿಂದ ಸ್ವಾತಂತ್ರ್ಯ ಸಂಪಾದನೆಗಾಗಿ ನೀವೇನು ಮಾಡುವಿರೆಂದು ನಾನು ನಿಮಗೆ ಪ್ರಶ್ನೆ ಮಾಡುತ್ತೇನೆ. ನೀವು ಮೊದಲಕ್ಕೆ ಕರ್ತವ್ಯದಲ್ಲಿ ಎಲ್ಲಕ್ಕೂ ಮೊದಲಿನದು ಹಿಂದೂ ಮುಸಲಮಾನ ಐಕ್ಯವಾಗಿರುವದು. ರಾಟಿಯಿಂದ ಸ್ವರಾಜ್ಯ ದೊರೆಯಲಾರದೆಂದು ಹೇಳುವವರು ಹುಚ್ಚುತನದಲ್ಲಿ ಪ್ರಲಾಪ ಮಾಡುವಂಥವರಾಗಿದ್ದಾರೆ. ಇಂಗ್ರೇಜಿ ಶಾಲೆಗಳಿಗೆ ಬಹಿಷ್ಕಾರ ಹಾಕಿರೆಂದು ನಾನು ಹೇಳುತ್ತೇನೆ. ಕೌನ್ಸಿಲ ಬಹಿಷ್ಕಾರದ ವಿಷಯ ನಾನೇನನ್ನೂ ಹೇಳಬಯಸುವದಿಲ್ಲ. ಏಕೆಂದರೆ ಇದರಿಂದ ನನ್ನ ಸ್ವರಾಜ್ಯ ಬಂಧುಗಳ ಮನಸ್ಸನ್ನು ಸುಮ್ಮನೆ ನೋಯಿಸಿದಂತಾಗುತ್ತದೆ '

ಅಂಧ ಊರೊಳಗೆ ಒಕ್ಕಣ್ಣನೇ ಗೌಡನು.

—೦—

ಪಂಜಾಬ ಸರಕಾರದ ಈಗಿನ ಒಬ್ಬ ಮಂತ್ರಿಯಾದ ಮಿ. ಮಿಯಾನ ಫಜಲಿ ಹುಸೇನ ಸಾಹೇಬರು ಹಿಂದೂ ಮುಸಲಮಾನ ಕಲಹ [illegible]ರಾಗಿದ್ದಾರೆ. ಇವರ ಪರ ಧರ್ಮೀಯ [illegible] ಹಿಂದೂ [illegible] ಮ್ಯುನಿಸಿಪಾಲಿಟಿಗಳಿಗೆ ಒಬ್ಬ್ಯಾರ ಹಾಕಿದಾರೆ. ರಾಷ್ಟ್ರೀಯ ಪಕ್ಷದ ಹಿಂದೂ ಜನಾಂಗದ ಪ್ರಮುಖರ ಸ್ವರಾಜ್ಯ [illegible] ಪ್ರವೇಶ ಮಾಡದವರೆಂದು ಇವರು ಒಂದು [illegible] ಮೂರು ತಿಂಗಳ ಕೆಳಗೆ [illegible] ಆರೋಪ ಹೊರಿಸಲ್ಪಟ್ಟ ಬಾಬೂನು [illegible] ಮ್ಯುನಿಸಿಪಾಲಿಟಿ ಅಥವಾ ಲೋಕಲಬೋರ್ಡುಗಳಲ್ಲಿ ಮೆಂಬರರಾಗಬಾರದೆಂದು ಕಾಯದೆ ಮಾಡಿರುವೆಂತ ಇದ್ದಾರೆ. ಅಸಹಕಾರದ ಕಾಲದಲ್ಲಿ ಮತ್ತು ಶಿಖ ಸತ್ಯಾಗ್ರಹದಲ್ಲಿ ಬಹುತೇಕ ಪ್ರಮುಖರು ಸೆರೆಮನೆ ಕಂಡು ಬಂದಿದ್ದಾರೆ. ಇವರೆಲ್ಲರೂ ಬಹಿಷ್ಕೃತರಾಗಿ ಹೊರ ನಿಂತರೆ ಇವರನ್ನು ಸಹಜವಾಗಿ ಆರಿಸಲಾಗುತ್ತದೆ. ಮತ್ತು ಈ ಮೂಲಕ ತಾವು ವರಿಸಿದ್ದೇ ಮಟ್ಟ ಕಟ್ಟಿದ್ದೇ ಪಟ್ಟವಾಗುತ್ತದೆಂದು ಸಾಹೇಬರು ತಿಳಿದಿದ್ದಾರೆ

ಜಪಾನದಲ್ಲಿ ಅಮೇರಿಕೆಯ ಪಾದ್ರಿಗಳಿಗೆ ಎಚ್ಚರಿಕೆ

—೦—

ಜಪಾನ ಪ್ರಜೆಗಳ ವಿರುದ್ಧ ಅಮೇರಿಕಾ ಸರಕಾರದವರು ಪಾಸ ಮಾಡಿದ ಕಾಯದೆಯಿಂದ ಜಪಾನರು ಅಮೇರಿಕೆಯವರ ಮೇಲೆ ಹೇಗೆ ಕಡುಕೋಪಗೊಂಡಿದ್ದಾರೆಂಬುದನ್ನು ಈ ಮೊದಲೇ ಬರೆದಿದ್ದೇವೆ. ಈಗ ಆ ದೇಶದಲ್ಲಿ ವಿಶೇಷವಾಗಿ ಸಮಾಕ್ಷೋಭವನ್ನ ಸಾರ್ವದಿಕ್ಕಾಗಿ ಹೋಗುವರು ಉದ್ವಿಗ್ನವಾಗಿರುತ್ತಾರೆ.

ಮಂತ್ರಿಗಳೇ! ನೀವು ಈ ದೇಶಕ್ಕೆ ಬಂದ ಸಮಾಚಾರವೇನು? ನೀವು ಹೇಳುವ ಕ್ರೈಸ್ತನ ನುಡಿಯಂತೆ ನಡೆಯುವದಿಲ್ಲವೇ? ಕಾರಣ ಮೊದಲು ನಿಮ್ಮ ದೇಶಕ್ಕೆ ಹೋಗಿರಿ, ಅಲ್ಲಿ ಜನರ ಕೂಡ ಸಮಬಂಧುತ್ವದಿಂದ ನಡೆಯಲಿಕ್ಕೆ ಬುದ್ಧಿ ಕಲಿಸಿರಿ. ಆ ಮೇಲೆ ಬಂದರೆ ನಮ್ಮ ದೇಶದಲ್ಲಿ ನಿಮ್ಮ ಆಗತ್ಯ ವೇಕದ ಇರುವದಿಲ್ಲ. ಮೊದಲೇ ನಮ್ಮ ದೇಶದಲ್ಲಿ [illegible] ಹೀಗೆ ನಿಮ್ಮಲ್ಲಿದ್ದಷ್ಟು [illegible] ಜನರು [illegible] ಆದ್ದರಿಂದ ನೀವು ಅದಷ್ಟು ಬೇಗನೆ ಗಂಟುಮೂಟೆ ಕಟ್ಟಿ ಸ್ವದೇಶದ ದಾರಿ ಹಿಡಿಯಿರೆಂದು ಆಶಿಸುತ್ತೇವೆ

ಇರಾಣದಲ್ಲಿ ಅಮೇರಿಕೆಯ ವಕೀಲನ ಕೊಲೆ ರಾಜಧಾನಿಯಲ್ಲಿ ಲಷ್ಕರೀ ರಾಜ್ಯವು.

—೦—

ಇರಾಣದ ರಾಜಧಾನಿಯಾದ ತೆಹರಾನದಲ್ಲಿ ಒಬ್ಬ ಧರ್ಮಗುರುವಿಗೆ ಆವೇಶ ಬಂದು, ಪವಿತ್ರ ಮಾಡಿದಂಥ ಒಂದು ಕಾರಂಜಿಯ ಫೋಟೋಗ್ರಾಫವನ್ನು ಅಮೇರಿಕೆಯ ವಕೀಲರು ತಮ್ಮ ಸಂಗಡಿಗರ ಕೂಡ ತಕ್ಕೊಳ್ಳುತ್ತಿದ್ದಾಗ ನೋಡಿದ ಜನರು [illegible] ಕಡುಕೋಪದಿಂದ ವಕೀಲರನ್ನು ಅಲ್ಲಿಂದಲ್ಲೇ ಕೊಂದರು. ಮತ್ತು ಇವರ ಸಂಗಡಿಗನನ್ನು ಹೊಡೆದು ಹಣ್ಣು ಮಾಡಿದರು. ಇವನನ್ನು ಬಿಡಿಸಿಕೊಳ್ಳಲಿಕ್ಕೆ ಹೋದ ಪೋಲೀಸ ಅಮಲದಾರನಿಗೂ ಗಾಯ ಮಾಡಿದ್ದಾರೆ. ಈ ಗಲಭೆಯ ನಿಮಿತ್ತವಾಗಿ ಆ ದೇಶದಲ್ಲಿ ಬೆಳೆದಿರುವ ಪರದೇಶದ ಅತಿದ್ವೇಷವಾಗಿರುತ್ತದೆ. ಇರಾಣ ಸರಕಾರದವರು [illegible] ವಿಶೇಷ, ಎಲ್ಲ ಹುಚ್ಚರು [illegible] ಯಾತ್ರೆಗೆ ಹೋಗಿ, ಪೋಲೀಸ ಸರಕಾರಕ್ಕೆ ಏನೂ ಸಂಬಂಧವಿಲ್ಲೆಂದು ಕೃತಿಯಿಂದ ತೋರಿಸಿದರು.

ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ [illegible] ಸ್ವಾರ್ಥತ್ಯಾಗ.

—೦—

ಗುಜರಾಥ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿದ್ದ ಶಿಕ್ಷಕರು ತಿಂಗಳಿಗೆ ಅವಶ್ಯವಾಗಿ ಎಂಟು ಸಾವಿರ ರೂಪಾಯಿ ಸಾಲಬೇಕೆಂಬ ಸಚ್ಚಿಯ ನಿಯಮ ಮಾಡಿದ್ದಾರೆ. ಬಾಬಾಜೋಡಿ ತಾಲೂಕಿನ ಶಿಕ್ಷಕರು ತಿಂಗಳಿಗೆ ಮೂರು ಸಾವಿರ ರೂಪಾಯಿ ನೀಡಲು ಕೊಡಬೇಕೆಂದು ನಿಶ್ಚಯಿಸಿದ್ದಾರೆ

ಮಲಿಯಾಳದಲ್ಲಿ ಭೂಕಂಪ!

ಒಂದು ರೇಲ್ವೆ ಸ್ಟೇಶನು ಮಣ್ಣಿನಿಂದ ಮುಚ್ಚಿತು

ಕಣ್ಣಾನೂರ ಬಳಿಯ ಹತ್ತರ ವರ್ಕಲದ ಬಳಿಯಲ್ಲಿ ಕಳೆದ ರವಿವಾರದ ದಿವಸ ಭೂಕಂಪವಾಗಿ ಭೂಮಿಯು ಒಂದು ತಾಸಿನ ತನಕ ನಡುಗಿತು. ಭಾಗವತಿಪುರ ಮತ್ತು [illegible] ಸ್ಟೇಶನಗಳ ನಡುವಿನ [illegible] ಭಯಂಕರವಾಗಿ [illegible] ಸುಮಾರು [illegible] ತನಕ ರೇಲ್ವೆ ದಾರಿಯು [illegible] ಅದರ ಮೇಲೆ ಅತ್ಯಂತ ಮಣ್ಣು ಬಿದ್ದಿದೆ. ಅಲ್ಲಿಯ ಕಾಲುವೆ ಕಂಬಗಳು ನದಿಯಲ್ಲಿ [illegible] ಹೋಗಿವೆ. [illegible] ಕೆಲಸಗಾರರ [illegible] ಒಂದು [illegible] ಮಣ್ಣು [illegible] ನರಿಯುವಂತಾಗಿದೆ. [illegible] ಮಣ್ಣು ಬಿದ್ದಿರುತ್ತದೆ. [illegible] ರೇಲ್ವೆಯ ದಾರಿಯನ್ನು ದುರುಸ್ತ ಮಾಡಲಿಕ್ಕೆ ಕನಿಷ್ಠ ಎರಡು ತಿಂಗಳಾದರೂ ಬೇಕು

ಅಧಿಕಾರ ಮಾನಹಾನಿಯ ಕೇಸು.

ಪೊಲೀಸ ಗೋಕರ್ಣ ಮತ್ತು ಸಾವಾಡಿಯ ವರ ವಿರುದ್ಧ ತೀರ್ಪು

[illegible] ಶ್ರೀ. [illegible] ಇವರು [illegible] ಗೋಕರ್ಣ [illegible] ಸಿ. [illegible] ಮೇಲೆ ಮಾನಹಾನಿಯ ದಾವೆಯನ್ನು ಮಾಡಿದ್ದರು. ಮಿ. ಗೋಕರ್ಣ ಇವರು ತಮಗೆ ಕೀಳನುಡಿಯಿಂದ ಬೈದರು, ಹೊಡೆದರು, ಜುಟ್ಟನ್ನು ಹಿಡಿದು ಎಳೆದರು, ಮತ್ತು ಅನ್ಯಾಯವಾಗಿ ಪ್ರತಿಬಂಧದಲ್ಲಿಟ್ಟರು, ಮತ್ತು ಸಾವಾಡಿಯವರು ಮಿ. ಗೋಕರ್ಣರ ಹೇಳಿಕೆಯಂತೆ ತಮ್ಮನ್ನು ಹೊಡೆದರು, ಇದರಿಂದ ತಮ್ಮ ಮಾನಹಾನಿಯಾಯಿತೆಂದು ದಾವೆಯ ಕಾರಣಗಳಿದ್ದವು. ವಿಚಾರಣೆಯು ಜರಗಿ ವಿಚಾರಕರು [illegible] ಒಬ್ಬ ಕೋರ್ಟಿನವರಿಗಾಗಿ, ಇಬ್ಬರು [illegible] ಮಿ. ಗೋಕರ್ಣ ಇವರು [illegible] ಮಿ. ಸಾವಾಡಿಯವರು [illegible] ಮಾನಹಾನಿಯನ್ನು ತುಂಬಿ ಕೊಡಬೇಕೆಂದು ಹುಕುಮು ಮಾಡಿದ್ದಾರೆ

ರಾಷ್ಟ್ರೀಯ ಶಾಲೋಪಯೋಗಿ ಪುಸ್ತಕಗಳಿಗೆ ಸರಕಾರದ ಬಹಿಷ್ಕಾರ

—೦—

ಕಾಶೀ ಮ್ಯುನಿಸಿಪಾಲಿಟಿಯ ಸ್ಕೂಲು ಬೋರ್ಡಿನ ಮೆಂಬರ ಮತ್ತು ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮೆಂಬರರಾದ ಪಂಡಿತ ರಾಮದಾಸ ಗೌಡರು ರಾಷ್ಟ್ರೀಯ ಶಾಲೆಗಳ ದೆಸೆಯಿಂದ ಹಿಂದೀ ಭಾಷೆಯಲ್ಲಿ ಬರೆದ ೩, ೬, ೧೧ ಮತ್ತು ೭ ನೆ ಕ್ರಮಿಕ ಪುಸ್ತಕಗಳು ಸರಕಾರ [illegible] ಆಗಬೇಕೆಂದು ಸರಕಾರದವರು ಠರಾವು ಮಾಡಿದ್ದಾರೆ. ಈ ಪುಸ್ತಕಗಳನ್ನು ಮ್ಯುನಿಸಿಪಾಲಿಟಿಯ ಶಾಲೆಗಳಲ್ಲಿ ಮತ್ತು ಅನೇಕ ರಾಷ್ಟ್ರೀಯ ಶಾಲೆಗಳಲ್ಲಿಯೂ ಹಚ್ಚಿದ್ದಾರೆ. ಈ ವಿಷಯದಲ್ಲಿ ಲಖನೌದಲ್ಲಿ ಕೂಡಿದ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸರಕಾರದ ಕೃತಿಯನ್ನು ನಿಷೇಧಿಸಿ, ರಾಷ್ಟ್ರೀಯ ಶಾಲೆಗಳಲ್ಲಿ ಇವೇ ಪುಸ್ತಕಗಳನ್ನು ಕಲಿಸಬೇಕೆಂಬ ಠರಾವು ಪಾಸು ಮಾಡಿ ಇದಕ್ಕಾಗಿ ಎಲ್ಲರೂ ಕಾಯಾವಾಚಾಮನಸಾ ಸಹಕಾರ್ಯ ಮಾಡಬೇಕೆಂದು ಸೂಚಿಸಿದ್ದಾರೆ.

ನಿಕಲದ ಎಂಟಾಣೆಗೆ ಅಳಿಗಾಲ

—೦—

ನಿಕಲದ ಎಂಟಾಣೆಯ ನಾಣ್ಯವು ಕೃತ್ರಿಮವಿದ್ದುದರಿಂದ ಪೇಟೆಯಲ್ಲಿ ಅದನ್ನು ಯಾರೂ ಹಿಡಿಯುವದಿಲ್ಲ. ಜನರ ದೂರುಗಳನ್ನನುಸರಿಸಿ, ಇದನ್ನು ಗೌರ್ನಮೆಂಟಿನವರು ರದ್ದು ಮಾಡಿದಂತೆಯೂ ಮುಂದೆ ಒಂದು ವರ್ಷದ ತನಕ ಇದನ್ನು ಸರಕಾರದ ಟ್ರೆಝರಿಗಳಲ್ಲಿ ಒಯ್ಯಬೇಕೆಂತಲೂ, ಅವರಿಗೆ [illegible] ಕೊಟ್ಟು, ಬೇರೆ ನಾಣ್ಯ ಪಡೆಯಬೇಕೆಂತಲೂ ಸರಕಾರದವರು ಜಾಹೀರ ಮಾಡಿದ್ದಾರೆ

ತಾರಿನ ಸುದ್ದಿಗಳು-

—೦—

ಅತಿವೃಷ್ಟಿಯ ಭಯಂಕರ ಸುದ್ದಿಗಳು.

—೦—

ಕನ್ನಂಬಾಡಿಯಲ್ಲಿ ಅಂದರೆ ಕೃಷ್ಣರಾಜ ಸಾಗರದಲ್ಲಿ ಒಂದಿಯ ಮೇಲೆ ೩೦ ಫೂಟು ಎತ್ತರ ನೀರು ದಬಧಬೆಯಂತೆ ಬೀಳುತ್ತಿರುವದು.

ಈ ರೋಗದಲ್ಲಿ ಕಾವೇರಿಯ ಸೇತುವೆಯು ಕೊಚ್ಚಿಹೋಗುವ ಭೀತಿಯಿರುವದರಿಂದ, ಅದರ ಮೇಲೆ ಪ್ರವಾಸಿಕರ ಬರುವದನ್ನು ನಿಲ್ಲಿಸಿದ್ದಾರೆ

ತ್ರಿ[illegible]ನಾವಳ್ಳಿಯ ಹತ್ತರ ಕಾಲುವೆಯ ನದಿಯ ಪೂಲು ಕತ್ತರಿಸಿ, ಎಷ್ಟು ಬಂದಿದೆ. ಆ ಕಾಲದ ಕೆಲ್ಲ ಬಡವರಿಗಾಗಿ ಭಯಂಕರವಾದ ಹಾಹಾಕಾರ ಎದ್ದಿರುವದು

ಮೈಸೂರ ಜಿಲ್ಲೆಯಲ್ಲಿ ಎಷ್ಟೋ ಕೆರೆ ಪಟ್ಟಣ ಒಡೆದು ಹೋಗಿವೆ. ಇಲ್ಲಿಯ ಸೇತುವೆಯ ಮೇಲೆ ನೀರು ಹರಿಯುತ್ತಿರುವದು

ನೀಲಗಿರಿಯಲ್ಲಿ ಅತಿವೃಷ್ಟಿಯಿಂದ ಬೆಳೆಗಳು ಮಣ್ಣುಗೂಡಿರುವವು. ಅನೇಕ ಮನೆಗಳು ಬಿದ್ದವು

ಶ್ರೀರಂಗದ ಹತ್ತರ ಕೆಲಕೂಡು ಮತ್ತು ಉತ್ತಮ ಪಾರಿಪಲ್ಲಿ ನೀರು ನುಗ್ಗಿ ಹೃದಯದ್ರಾವಕವಾಗಿ ಪ್ರಾಣಹಾನಿಯಾಗುತ್ತದೆ.

ಮೈಸೂರು ಮತ್ತು ನಂಜನಗೂಡದ ನಡುವಿನ ರೆಲ್ವೆಯ ದಾರಿಯು ಹರಿದು ಹೋಗಿ, ತಾರಿನ ಕಂಬಗಳು ಕಿತ್ತಿ ಬಿದ್ದಿವೆ. ನಂಜನಗೂಡಿನ ಸುದ್ದಿ ದೊರೆಯದಾಗಿದೆ

ತುಂಗಭದ್ರಾನದಿಗೆ ಹಿಂದೆ ಬರದಷ್ಟು ಮಹಾಪೂರ ಬಂದು, [illegible] ಪೂಲ ಬೆಂಗಳೂರ ದಾರಿಯ ಸೇತುವೆಯು ಕಚ್ಚಿಕೊಂಡು ಹೋಗಿ, ಈಗ ಹೊಸದನ್ನು ನೋಡುವದಕ್ಕಾಗಿ ಸಾವಿರಾರು ಜನರು ಪೂಲದ ಮೇಲೆ ಇದ್ದರು. ಪರಮೇಶ್ವರನ ಕೃಪೆಯಿಂದ ಎಲ್ಲರೂ ಉಳಿದು ಬದುಕಿದರು !!!

ಕೊಚಿನದ ಅತಿ ವೃಷ್ಟಿಯಾಗಿ, ರೇಲ್ವೆಯ ದಾರಿಯು ಹರಿದು ಹೋಗಿದೆ.

ದಾರವಾಡ

ಈ ವಾರದಲ್ಲಿ ಒಂದು ದಿವಸ ಮಳೆಯಾಗಿ ಆ ನಂತರ ಹೊಳವಾಗಿರುತ್ತದೆ

ದಾವಣಗೆರೆ [illegible] ಗೋವಿಂದರಾವಳಗಿರಿಯವರು ಈ ಊರಲ್ಲಿ ವಿದ್ಯುಚ್ಛಕ್ತಿಯ [illegible] ದ ಕಾರಖಾನೆ ಹಾಕತಕ್ಕವರಿದ್ದು ಆ ಪ್ರಕಾರ ಸರಕಾರದಿಂದ ಮಂಜೂರಿ ಪಡಕೊಳ್ಳುವ ಪೂರ್ವ ಸಿದ್ಧತೆ ನಡಿಸಿದ್ದಾರೆ

ಬೆಳಗಾವಿಯ ಸುದ್ದಿಯು.

—೦—

ಬೆಳಗಾವಿಯ ಕಲೆಕ್ಟರ ಸಾಹೇಬರು ಶಿದ್ದಿಕ [illegible] ರಿಗೆ ಕೊಟ್ಟ ಭಾಷಣ [illegible] ಹುಕುಮಿನ ಮುದ್ದತು ಅಧಿಕಾರಕ್ಕೆ ತೀರಿತು. ಅವರು ಸೋಮವಾರದ ದಿವಸ ಸಾರ್ವಜನಿಕ ಭಾಷಣ ಮಾಡಿದರೆಂದು ಮತ್ತೆ ಮಹಮ್ಮದ ಹುಸೇನ ಸಾಹೇಬ ಮುಲ್ಲಾ ಎಂಬವರು ತಿಳಿಸುತ್ತಾರೆ

ಬೆಳಗಾವಿಯ ಕಾಂಗ್ರೆಸ ಸಭೆಯ ಅಧ್ಯಕ್ಷರಾಗುವದಕ್ಕೆ ಮಹಾತ್ಮಾ ಗಾಂಧಿಯವರೇ ಸರ್ವ ರೀತಿಯಿಂದಲೂ ಯೋಗ್ಯರಾಗಿರುತ್ತಾರೆಂದು ದೇಶಭಕ್ತ ಗಂಗಾಧರರಾಯರು ಕಲಕತ್ತೆಯ ಸರ್ವೆಂಟ ಪತ್ರಕ್ಕೆ ತಿಳಿಸಿದ್ದಾರೆ.

ದಾವಣಗೆರಿಯಲ್ಲಿ ಎರಡು ತಲೆಯ ಮಗುವಿನ ಜನನ.

—೦—

ದಾವಣಗೆರಿಯಲ್ಲಿ ಎರಡು ತಲೆ, ನಾಲ್ಕು ಕೈಗಳು, ನಾಲ್ಕು ಕಿವಿ, ಎರಡು ಮೂಗು ಇರುವಂಥ ಒಂದು ಮಗುವನ್ನು ಒಬ್ಬಳ ಹೆಂಗಸು [illegible] ಪ್ರಸವದ ಕಾಲದಲ್ಲಿ ಅವಳಿಗೆ ಬಹಳ ವೇದನೆಯಾಯಿತು. ಕೂಸು ಹುಟ್ಟಿದ ಕೂಡಲೆ ಸತ್ತಿತ್ತು. ಇದನ್ನು ಪ್ರದರ್ಶನಾಲಯದಲ್ಲಿಡುವದಕ್ಕಾಗಿ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಿದ್ದಾರೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

[illegible] 1443

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೆರಿ

ವರ್ಷ ೫) ಧಾರವಾಡ ಮಂಗಳವಾರ ತಾರೀಖು ೫ ನೇ ಆಗಸ್ಟ ೧೯೨೪ (ಸಂಖ್ಯೆ ೨೯

ವಿಜಯ.

ಧಾರವಾಡ ತಾ| ೫ ೮ ೧೯೨೪ನೇ ಇಸ್ವಿ

ತುರಂಗಗಳಲ್ಲಿ ಪಟಕೀ ಶಿಕ್ಷೆಯ ಅಮಾನುಷ ಪ್ರಕಾರಗಳು

—•—

ಗ ಅಸ್ತ್ರ ಎಷ್ಟು ಸತ್ಯಾಗ್ರಹ ಮಾಡಿದ ಕಾರಾ[illegible] ಎಲ್ಲಾ ಕೋ ಅಪರಾಧವೆಂದು ಕೂಗಿದ ಅಪರಾಧದ ದೆಸೆಯಿಂದ

ಮೇಲಿನ ಎರಡು ಕಲಮುಗಳಲ್ಲಿ ಜೇಲಿನ ಕಾಯಿದೆಯ ಪ್ರಕಾರ ಪಟಕಿಗೆ ಕಾರಣವಾಗುವ ಅಥವಾ ದಂಗೆಗೆ ಪ್ರವೃತ್ತವಾಗುವ ಯಾವ ಅಪರಾಧವೂ ತೋರುವದಿಲ್ಲ. ಕೈದಿಯು ಹೇಳಿದಷ್ಟು ಕೆಲಸ ಮಾಡದಿದ್ದರೆ ಅಥವಾ ಇನ್ನಾವದಾದರು ತಪ್ಪು ಮಾಡಿದರೆ ಆತನನ್ನು ಮತ್ತು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ ಶಿಕ್ಷೆ ಮಾಡಿಸಲಿಕ್ಕೆ ಬರುತ್ತದೆ. ಅಧಿಕಾರಿಗಳು ಈ ಪ್ರಕಾರದ ಸರಳ ಮಾರ್ಗವನ್ನು ಬಿಟ್ಟು [illegible] ತಿಪ್ಪು ತರಲಿಕ್ಕೆ ಏಕೆಂದು ಸಾಮ್ರಾಜ್ಯಶಾಸನ ಮಾಡಿ ದುರ್ದೈವ ಭಾ ಹಿಂದ ಯುರೋಪಿಯನರ ಬೆನ್ನು ಬಾಗುವಷ್ಟು ಸಂಬಳ ಕೊಟ್ಟು ಮಾಡಿದ್ದಾರೆ.

ನಮ್ಮಲ್ಲ ಸರಕಾರದ ಮಟ್ಟಿಗೆ ಮೇಲಿನ ಹಕ್ಕು ಭೇದವಿರದೆ ಸಾಮಾನ್ಯ ವರ್ಗದ ಸಾಹೇಬರ ದೆಸೆಯಿಂದಲೂ ಆಗುತ್ತದೆ. ಮುಂಬಯಿಯ ಪೋಲೀಸ ಖಾತೆಯಲ್ಲಿ ಯುರೋಪಿಯನ ಪೋಲೀಸ ಸಬ್ ಇನ್ಸ್‌ಪೆಕ್ಟರಿರುವರು. ಇವರಿಗೆ ಸಾರ್ಜಂಟರನ್ನುತ್ತಾರೆ. ಸಾರ್ಜಂಟರು ಯುರೋಪಿಯನರಾದ್ದರಿಂದ ಅವರ ಸಂಬಳವು ಇನಸ್ಪೆಕ್ಟರಿಂದ ಪ್ರಾರಂಭವಾಗುತ್ತದೆ. ಆದರೆ [illegible] ಮಾಡಿದ್ದಲ್ಲದೆ ಅದರಲ್ಲಿ ಹುದ್ದೆಗಳನ್ನು [illegible] ಯಾವಾಗಲು ಕನ್ನಡಿಗರಿಗೆ ಎಷ್ಟು [illegible] ಕೊಡುತ್ತಿರುವದು. ಆದರೆ ಅಮೇರಿಕೆಯಂತೆ [illegible] ನ ಪ್ರತಿಬಂಧದ ಕಾಯಿದೆ ಮಾಡಲಿಕ್ಕೆ ಮಾತ್ರ [illegible]

ಅಸಹಕಾರ ಚಳವಳಿಯಿಂದ ಆ [illegible] ಆಯಿದ ಪಯೋಂತರ ವೆಳೆಯಿಂಗದ [illegible] ತು ಸರಕಾರದವರು ಇದಕ್ಕೆ ಉತ್ತೇಜನ ಕೊಡುವದಕ್ಕೆ ಬದಲಾಗಿ ಸರೆಯು ವ್ಯಾಪಾರಸ್ಥರಿಗೆ ಉತ್ತೇಜನ [illegible] ದಂತೆ ಅವನ್ನು ಮುರಿದು ಜನರು [illegible] ದಾನ ಮಾಡುವಂತೆ ದರದಿಗಳ [illegible]

[illegible] ಉಪವಂತ [illegible] ಲಿಗೆ ಬಂತು. ಜೇಲಿನ ಅಧಿಕಾರಿಗಳು ಕಾಯಿದೆಯನ್ನು ಮುಟ್ಟಿದ ಮೇಲೆ ಬಂದಂತೆ ಪಟಕಿಯನ್ನು [illegible] ಸುತ್ತಿರುವುದು ಕೌನ್ಸಿಲಿನಲ್ಲಿ ಹೊರಬಿದ್ದ ಪ್ರಶ್ನೆಗಳ ಮೇಲಿಂದು ಉಪಕಾರವೇ ಎನಿ ಅಹವ [illegible] ಮ್ಹಾಡಿಸ ಶ್ರೀ ಗೋವರ್ಧನದಾಸ ಪಟೆ ಅವರು ಇದೇ ೧ ಸದವಾಗಿ ಕೇಳಿದ ಪ್ರಶ್ನೆಕ್ಕೆ ಸರ [illegible] ಬರು ಕೆಳಗೆ ಕೊಟ್ಟಂತೆ ಶಿಕ್ಷೆಗಳು ಸ್ವರೂಪ [illegible] ದ್ದಾರೆ.

೧ ಕೇಲಿನಲ್ಲಿ ಸರಾಯಿಕು ಮಾಡಲಿಕ್ಕೆ ಒಪ್ಪದ್ದಕ್ಕೆ

೨ ಕೋಳದ ಕೆಲಸ ವ ಹಿಡಿದುದು

[illegible] ಕೆಲಸ ಮಾಡಿದ್ದಕ್ಕೆ

೪ ಅಧಿಕಾರಿಗಳ ಮೇಲಿಂದ [illegible] ಕೊಟ್ಟದ್ದಕ್ಕಾಗಿ

—o—

ಸುಕ್ಕುರ್ ಜೇಲು ಕಿರಿಯ ಜೇಲು ಬಹುಲಿನಲ್ಲಿ [illegible] ದ ಕಾಯಿದೆಗೆ ವಿರೋಧ ನೆಲದಿಗೆ ಹಾರದ ಒಬ್ಬ ಸ್ವರ್ಗಸ್ಥ ಹಾರಿಕನ್ನು ವರ್ತಿ ಆಸೋದಿವಾಡ [illegible] ಹಿಂದೀ ಮತ್ತು ದ ರೋಜುಗ ನರೆಯುಗಿನ ಭೇದವ [illegible] ಯುಕ್ತಿಯಿಂದ ಸತ ಸವ್ರ ಸಾಹೇಬರು [illegible] ಅಧಿಕ್ಕಾರವಾಗಿ [illegible] ಸೇವುಗರೊಂದ [illegible] ಪ್ರಕಾರ ಕಲಮುಗಳನ್ನು ಒರೆದ [illegible] ವಾ ಮಾಡಿಕೊಂಡರು. ೧ [illegible] ರಣಾಯಿಯಿಂದ ಹಿಂದೀ ವ [illegible] ಯುರೋಪಿ [illegible] ಬೇರೆಬೇರೆ ನಾರು [illegible] ವ ಕ್ಕ ದ [illegible] ಪ್ರಾಂ ಗಳಲ್ಲ [illegible] ವ್ಯಕ್ತಿಗಳ [illegible] ಹಾಗ [illegible] ಬರುತ್ತದೆ [illegible]

[illegible] ದ ಹನಿ ಎಂದಿದ್ದರೆ ಅದನ್ನ ಆ ಕ್ಷಣವೇ [illegible] ವೀಕೆಂಬ ಕರ್ಪೂರವಾದ ತಿಸ್ಸಿ [illegible] ಹಿಂದೂ ಧರ್ಮಶಾಸ್ತ್ರವು ಕರೆ [illegible] ಹೇಳುತ್ತದೆ. ಹಿಂದುಸ್ತಾನದಲ್ಲಿ ಮೂರು ಮನೆಯು [illegible] ಪ್ರವೇಶ ಮಾಡಲಿಕ್ಕೆ ಪಾತ್ರಿ ಮಾತ್ಸರ ಪ್ರತಾಪದ ವಂದೇ ಸರಿ. ಹಿಂದೂ ಮುಸಲ್ಮಾನರು [illegible] ಜನರಿಗೆ ಕರೆಯು [illegible] ಗೆಂದ ಹಲವು ಪ್ರಕಾರದ ಪ್ರಯತ್ನ [illegible] ಮಾಡಿದ ಲೋಕಮತವನ್ನು ಒಲಿಸಿಕೊಳ್ಳುವ [illegible] ಸಂಸಾರದವರು ಇವರಿಗೆ [illegible] ತಿಳಿಸುತ್ತಾ ಎಂದರು [illegible] ಮತಪರ [illegible] ಹಿಂದ [illegible] ಗಂಡನಿಗೆ [illegible] ಯಲ್ಲಿ ಕೊಡಲಿಂ [illegible] ಎಷ್ಟು [illegible]

——

ಕರೆ ತಿಂದಿಗೆ ಕ್ಷಮೆಬೋಗ!!

—•—

ಇಪ್ಪತ್ತು ವರುಷಗಳಲ್ಲಿ ಅವತಾರ ಸಮಾಪ್ತಿ!!

—o—

ಪ್ರತಿ [illegible] ತರೆ ತಿಂದಿಯ ಅಂಗಡಿಗಳನ್ನ [illegible] ದಿನೆ ಮಾಡುತ್ತಾ ಇಪ್ಪತ್ತು ವರ್ಷಗಳಲ್ಲಿ ಈ ವ್ಯಾಪಾರವನ್ನ ಪೂರಾ ಬಂದು ಮಾಡಬೇಕೆಂದು [illegible] ಮುಂಬಯಿಯ [illegible] ಅವಲ್ಲಿ ಸ ನಾಯಿ ಕು

ವಾಚಕರಿಗೆ ಸೂಚನೆಯು

ಆಗಸ್ಟ ತಿಂಗಳಲ್ಲಿ ಹೊಸದಾಗಿ ಪ್ರಾರಂಭವಾಗುವಂಥ ಎಂದಾರಾಗಾರ ಹೆಸರಿನಿಂದ [illegible] ಕಳಿಸುವೆವು. [illegible] ಕಾರವಾಡಿ [illegible] ಸ್ವೀಕರಿಸಬೇಕೆಂದು [illegible]

ಮ್ಯಾನೇಜರ ವಿಜಯ ಧಾರವಾಡ

D2

B R. 8 1443

ಸಾಪ್ತಾಹಿಕ ಬೆಲೆ ೧ ಆಣೆ

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೫) ಧಾರವಾಡ ಮಂಗಳವಾರ ತಾರೀಖು ೫ ನೇ ಆಗಸ್ಟ ೧೯೨೪ (ಸಂಚಿಕೆ ೨೯

ವಿ ಜ ಯ.

ಧಾರವಾಡ ತಾ| ೫ ೮ ೧೯೨೪ನೇ ಇ|

ತುರುಂಗಗಳಲ್ಲಿ ಪಟಕೀ ಶಿಕ್ಷೆಯ ಅಮಾನುಷ ಪ್ರಕಾರಗಳು

ನ್ಯಾಯಕೋರ್ಟಗಳಲ್ಲಿ ಶಿಕ್ಷೆಯನ್ನು ಹೊಂದಿದ ಮನುಷ್ಯನು ತುರುಂಗದಲ್ಲಿಯೂ ತುರುಂಗದ ಶಿಕ್ಷೆಗೊಳಗಾಗದೆ ಪಾರಾಗಿ ಹೊರಗೆ ಬರುವದು ಅಪರೂಪ. ತುರುಂಗದಲ್ಲಿ ಹೇಳಿದಷ್ಟು ಕೆಲಸ ಮಾಡಿಕೊಟ್ಟು ಕೊಟ್ಟ ಅರಿವೆ ಧರಿಸಿ ಹಾಕಿದಷ್ಟು ಉಂಡು ಕೂಡುವಷ್ಟು ವಿವೇಕಿಯು ಹೊರಡ ಬೇಕೂ ಅಪರೂಪ ಅವನು ವಿವೇಕಿಯೇ ಆದ ಪಕ್ಷದಲ್ಲಿ ಸೆರೆಮನೆಯು ಅಳೀಕೆ ಆಗುವನು! ತುರುಂಗದ ಕಾಯದೆಯ ಪ್ರಕಾರ ಕಠಿಣ ತಪ್ಪು ಹಿಂಕಲಿ ತಪ್ಪು ಆಗುತ್ತವೆ ತಪ್ಪಿನ ಸ್ಥಿತಿಯ ಪ್ರಕಾರ ಶಿಕ್ಷೆಗಳಿರುತ್ತವೆ ಕೈ ಬೇಡಿ ಕಾಲಬೇಡಿ ಹಗಲೆಲ್ಲ ಎದ್ದು ನಿಲ್ಲುವದು ಉಪ್ಪಿಲ್ಲದ ಬಕ್ಕರಿ ಒರೇ ಗಂಜಿ ತಟ್ಟಿನ ಅಂಗಿ ಕತ್ತಲೆಕೋಣೆ ಕಡೆಗೆ ಪಟಕೀ ಶಿಕ್ಷೆ ಇವೇ ಮುಂತಾದವುಗಳು ಶಿಕ್ಷೆಯ ಪ್ರಕಾರಗಳಿರುತ್ತವೆ ಪಟಕೀ ಶಿಕ್ಷೆಯು ಭಯಂಕರವೂ ಕ್ರೂರವೂ ಆಗಿರುವದರಿಂದ ಅನಿವಾರ್ಯವಾದ ಪ್ರಸಂಗ ಬಂದ ಹೊರ್ತು ಪಟಕೀ ಹೊಡೆಯುವದಿಲ್ಲ ಬಹುಶಃ ಮೇಲೆ ಹೇಳಿದ ಎಲ್ಲ ಶಿಕ್ಷೆಗಳ ವಿಧಿಯಾದನಂತರ ಪಟಕೀ ಹೊಡೆಯುವರೆಂದು ಹೇಳುತ್ತಾರೆ ಯಾವನೊಬ್ಬ ಕೈದಿಯು ತುರುಂಗದ ಶಿಪಾಯಿ ದನು ಅಥವಾ ಹೀಗೆ ಮಾಡಲಿಕ್ಕೆ ಪ್ರವೃತ್ತನಾಗಿ ಜೇಲರನ ಮೇಲೆ ಆ ಪ್ರಕಾರ ಆ ಕ್ರಮ ಕೊಟ್ಟನೆಂದು ಆರೋಪ ಹೊರಿಸಿದರೆ ಪಟಕಿಯ ಶಿಕ್ಷೆ ಕೊಡಬೇಕೆಂಬ ಕಾಯದೆ ಇರುತ್ತದೆ ಆದರೆ ಜೇಲ ಅಧಿಕಾರಿಗಳು ಜನಾವನೊಬ್ಬ ವಿಶೇಷವಾಗಿ ದುಷ್ಟ ಗ್ರಹದವರಾಗಿಯೂ ಆತನ ಹೆಣಮಡಲಂಕೆಂತಲೇ ತಿಳಿದ ಬೇಕು ತುರುಂಗದ ಸತ್ಯಾಗ್ರಹಿಗಳು ಈ ತರದ ದುರಭಿಪ್ರಾಯದ ಮೂಲಕ ಪಟಕೀ ಶಿಕ್ಷೆ ಹೊಂದಿದ್ದು ಆ ಬಗ್ಗೆ ವರ್ತಮಾನಪತ್ರಗಳಲ್ಲಿ ಉಗ್ರವಾದ ಟೀಕೆಯಾದದ್ದು ವಾಚಕರ ಸ್ಮರಣದಲ್ಲಿರಬಹುದು

ನಾನು ಕೋ ಆಪರೇಟರು ಸೆರೆಪಡೆಗಳನ್ನು ಹೊಂದಿದ್ದರಿಂದ ಜೇಲಿನಲ್ಲಿ ಎಂಥೆಂಥ ಶಿಕ್ಷೆಗಳಾಗುತ್ತವೆ ಮತ್ತು ಕೈದಿಗಳನ್ನು ಪ್ರಾಣಿಗಳಿಗಿಂತ ಹೆಚ್ಚು ನಿರ್ದಯದಿಂದ ಹೇಗೆ ನಡಿಸಿಕೊಳ್ಳುತ್ತಾರೆಂಬದು ಬೈಲಿಗೆ ಬರಲು ಕಾರಣವಾಯಿತು ವಿಶಾಪುರದಲ್ಲಾಗುತ್ತಿದ್ದಂಥ ಹಿಂಸೆಯು ಮಹಾತ್ಮಾಜಿಯವರಂಥವರಿಗೆ ದುಃಖವಾಗುವಂತೆ ಬೈಲಿಗೆ ಬಂತು ಜೇಲ ಅಧಿಕಾರಿಗಳು ಕಾಯದೆಯನ್ನು ಸುತ್ತಿಟ್ಟು ಮನಸಿಗೆ ಬಂದಂತೆ ಪಟಕಿಯನ್ನು ಹೊಡಿಸುತ್ತಿರುವರೆಂಬದು ಕೌನ್ಸಿಲದಲ್ಲಿ ಹೊರಬಿದ್ದ ಪ್ರಶ್ನೆಗಳಿಂದ ಒಳ್ಳೆ ಉಪಕಾರವೇ ಸರಿ ಆಷಾಢ ಸಾಬಾರ್ ಶ್ರೀ ಗೋವರ್ಧನದಾಸ ಪಟೇಲರು ಇದೇ ವಿಷಯವಾಗಿ ಕೇಳಿದ ಪ್ರಶ್ನಕ್ಕೆ ಸರ ಹೇವಾರ್ಡ ಸಾಹೇಬರು ಕೆಳಗೆ ಕೊಟ್ಟಂತೆ ಶಿಕ್ಷೆಯ ಸ್ವರೂಪ ಹೇಳಿದ್ದಾರೆ

೧ ಜೇಲಿನಲ್ಲಿ ಕವಾಯತು ಮಾಡಲಿಕ್ಕೆ ಒಪ್ಪದ್ದಕ್ಕೆ

೨ ಕೊಟ್ಟ ಕೆಲಸ ಮಾಡದಿರುವದು

೩ ಕೊಡದೆ ಕೆಲಸ ಮಾಡಿದ್ದಕ್ಕೆ

೪ ಅಧಿಕಾರಿಗಳ ಮೇಲಿದ ... ಭಾಸ ಕೊಟ್ಟದ್ದಕ್ಕಾಗಿ

ಈ ಅನ್ನ ಬಿಟ್ಟು ಸತ್ಯಾಗ್ರಹ ಮಾಡಿದ ಕಾರಣ

೬ ಅಲ್ಲಾ ಹೋ ಅಕಬರವೆಂದು ಕೂಗಿದ ಅಪರಾಧದ ಬಗೆಯಿಂದ

ಮೇಲಿನ ಆರು ಕಲಮುಗಳಲ್ಲಿ ಜೇಲಿನ ಕಾಯದೆಯ ಪ್ರಕಾರ ದಂಗೆ ಎಬ್ಬಿಸುವ ಅಥವಾ ದಂಗೆಗೆ ಪ್ರವೃತ್ತನಾಗುವ ಯಾವ ಅಪರಾಧವೂ ತೋರುವದಿಲ್ಲ ಕೈದಿಯು ಹೇಳಿದಷ್ಟು ಕೆಲಸ ಮಾಡದಿದ್ದರೆ ಅಥವಾ ಇನ್ನಾವದಾದರು ತಪ್ಪು ಮಾಡಿದರೆ ಆತನನ್ನು ಪುನಃ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ ಶಿಕ್ಷೆ ಮಾಡಿಸಲಿಕ್ಕೆ ಬರುತ್ತದೆ ಅಧಿಕಾರಿಗಳು ಈ ಪ್ರಕಾರದ ಸರಳ ಮಾರ್ಗವನ್ನು ಬಿಟ್ಟು ಅವರನ್ನು ಬೆತ್ತಗಳಿಂದ ರಕ್ತ ಸೋರುವಂತೆ ಹೊಡಿಸುವದು ಮನುಷ್ಯತ್ವಕ್ಕೆ ಶೋಭಿಸಲಾರದು ಇದು ಹೇಯವಾದ ಶಿಕ್ಷೆಯಾಗುತ್ತದೆಂತಲೇ ವಿಲಾಯತಿಯಲ್ಲಿ ಈ ಶಿಕ್ಷೆಯನ್ನು ತೆಗೆದು ಹಾಕಿದ್ದಾರೆ ಮೇಲಿನ ಅಪರಾಧಗಳನ್ನು ವಿಲಾಯತಿಯ ಜನರ ಮುಂದಿಟ್ಟದ್ದರೆ ಹಿಂದುಸ್ಥಾನದಲ್ಲಿ ತನ ನಾಗರಿಕತೆಯು ಇಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿ ಬಿಡುವರು ಮುಸಲಮಾನರು ನಿಮಾಜ ಮಾಡುವರು ನಿಮಾಜಕ್ಕೆ ಜೇಲಿನಲ್ಲಿ ಅಪ್ಪಣೆ ಇರುವದು ಅವರು ನಿಮಾಜದ ಪೂರ್ವದಲ್ಲಿ ಅಜಾನ ಕೊಡುವಾಗ ಅಥವಾ ಬಹಳ ದುಃಖ ತಾಪವಾದಾಗ ಗಟ್ಟಿ ಧ್ವನಿಯಿಂದ ಅಲ್ಲಾ ಹೋ ಅಕಬರೆಂದು ಕೂಗಿದರೆ- ಪಟಕೀ ಶಿಕ್ಷೆ ಕೊಡುವದು ನ್ಯಾಯವೇ? ಹೋದ ವರ್ಷ ಆರು ಕೈದಿಗಳಿಗೆ ಪಟಕೀ ಹೊಡೆದರು ಇವರಲ್ಲಿ ಯರವಡೆ ತುರುಂಗದಲ್ಲಿಯೇ ಆರು ಜನರು ಪಟಕಿ ಪ್ರಸಾದ ಪಡೆದರು ಇವರಲ್ಲಿ ಪುನಃ ಮುಳಶೀ ಸತ್ಯಾಗ್ರಹಿಗಳ ಸಂಖ್ಯೆಯೂ ದೊಡ್ಡದಾಗಿರುತ್ತದೆ ಯಾರಾರಿಗೆ ಈ ಶಿಕ್ಷೆ ಮಾಡಿದಿರಿ ಅವರ ಹೆಸರು ಹೇಳಿರೆಂದು ಶ್ರೀ ಪಟೇಲರ ಎರಡನೇ ಪ್ರಶ್ನವಿತ್ತು ಸರ ಹೇವಾರ್ಡ ಸಾಹೇಬರು ಇದ್ದಲಿ ತೋಚದಂತೆ ತಪ್ಪೇ ಹೋದುದೆಂಬ ಎಯೆಂಭಾವನೆಯಿಂದ ಅವರ ಹೆಸರು ಹೇಳಲಿಕ್ಕೆ ಒಪ್ಪಲಿಲ್ಲ ಹೆಸರು ಬೈಲಿಗೆ ಬಂದಿದ್ದರೆ ಇಂಗ್ಲಿಷ ಕಲಿತ ಪರದೇಶರಿಂಗಿಳಿಕೊಡು ಅಹಿಂಸೆಯ ಅಸಹಕಾರದ ದೀಕ್ಷೆ ತಕ್ಕೊಂಡವರು ಸಹ ಜೇನಿನ ತೊಗಲು ಕಿತ್ತುಹೋಯಿತೆಂದು ಕಂಡು ಬರುತ್ತಿತ್ತು ಜೇಲಿನ ಅಧಿಕಾರಿಗಳ ನ್ಯಾಯದಂಥ ಕಲಂಕವನ್ನು ಸಾರ್ವಜನಿಕವಾಗಿ ಈ ರೀತಿಯಾಗಿ ಕೌನ್ಸಿಲದಲ್ಲಿ ಮುಚ್ಚಿಕೊಂಡರು ಆದರೆ ಇದರ ಅನಿಷ್ಟ ಪರಿಣಾಮ ವೇನೂ ತಪ್ಪಲಾರದು ವಿಲಾಯತಿಯಂತೆ ಹಿಂದುಸ್ಥಾನದಲ್ಲಿಯೂ ಪಟಕೀ ಶಿಕ್ಷೆಯನ್ನು ತೆಗೆದು ಹಾಕುವಂಥ ಕೌನ್ಸಿಲಗಳೂ ಅಸೆಂಬ್ಲಿಯೂ ಪ್ರಯತ್ನ ಮಾಡತಕ್ಕದ್ದು ಅವಶ್ಯವಾದ ಕರ್ತವ್ಯವು

ಕಾಸ್ತ್ರದಂತೆ ರಾಡಿಯಿಲ್ಲ !!

—o—

ಸ್ವದೇಶೀ ವಿದೇಶಿಯರಲ್ಲಿ ಭೇದ !!

—o—

ಸುಧಾರಣೆಯ ಕಾಯದೆಯು ಅಮಲಿನಲ್ಲಿ ಬಂದ ಕೂಡಲೆ ಎ ದರ್ಜೆಯ ... ಹಾರದ ಜೆಸ್ಟಿಸ್ ಗಳಿಕ್ಕೆ ಹಾಕಿಕೆನ್ನು ಪತ್ತು ಅಂದವರಾದ ತ ಹಿಂದೀ ಮತ್ತು ಯರೋಪಿಯನರೊಳಗಿನ ಭೇದವನ್ನು ಳಿಯುತ್ತೇವೆಂದು ಸರ ನವ್ರ ಸಾಹೇಬರು ತಾವೇ ಅಧ್ಯಕ್ಷರಾಗಿ ಒಂದು ಕಮಿಟಿ ನೇಮಿಸಿಕೊಂಡ ಆ ಪ್ರಕಾರದ ಕಲಮುಗಳನ್ನು ಬರೆದು ಅಸೆಂಬ್ಲಿಯಲ್ಲಿ ವಾಸಪಡಿಸಿಕೊಂಡರು ಗಂಟಾರ್ಸನ್ ಇಸವಿಯ ಸಾಹೇಬರಾಯ ಮೆಯಿಂದ ಹಿಂದಿ ಮತ್ತು ಯುರೋಪಿಯನರೆಂಬ ಭೇದವಿಲ್ಲೆಂದು ಸಾರುತ್ತಾ ಬಂದರೂ ಒಂದು ತರ ಪತ್ರ ದರ್ಜೆಯ ಪ್ರಸಂಗಗಳಲ್ಲ ಈ ಭೇದವು ಭಯಪ್ಪ ಕಾರಣಗಳ ನ ಬಿವಿದ ನಷ್ಟ ಅಂತರವು ಹಾಗೆ ಎದ್ದು ಕಾಣುತ್ತವೆ ಕಂಡು ಬರುತ್ತವೆ ಲೀ ಕಮಿಷನದಿಂದಂತೂ ಯುರೋಪಿಯನರ ಸಂಖ್ಯೆಯು ತಿಳಿಸುತ್ತು ಇರಲಿಕ್ಕೇ ಬೇಕೆಂದು ಠಾಸ್ತ್ರಸಂಪನ್ನ ಮಾಡಿ ದುರ್ದೈವ ಭಾರತದಿಂದ ಯುರೋಪಿಯನರ ಬೆನ್ನು ಬಾಗುವಷ್ಟು ಸಂಬಳ ಕೊಟ್ಟು ಮಾಡಿದ್ದಾರೆ

ಎಲ್ಲ ಸವ ಆಟರ ಮಟ್ಟಿಗೆ ಮೇಲಿನ ಪಕ್ಷಭೇದವಿರದೆ ಸಾವರ್ನರ ಎರ್ಗೆದ ಸಾಹೇಬರ ಪೆನೆಯಿಂದಲೂ ಇರುತ್ತದೆ ಮುಂಬಯಿಯ ಪೋಲೀಸ ಖಾತೆಯಲ್ಲಿ ಯುರೋಪಿಯನ ಪೋಲೀಸ ಸಬ್ಬಇನ್ಸಪೆಕ್ಟರರಿರುವರು ಇವರಿಗೆ ಸಾರ್ಜಂಟರೆನ್ನುತ್ತಾರೆ ಸಾರ್ಜಂಟರು ಯುರೋಪಿಯನರಾದ್ದರಿಂದ ಅವರ ಸಂಬಳವು ಇನಸ್ಪೆಕ್ಟರರಿಂದ ಪ್ರಾರಂಭವಾಗುತ್ತದೆ ಆದರೆ ಇವರ ದರ್ಜೆಯ ಹಿಂದೀ ಸಬ್ಬ ಇನ್ಸಪೆಕ್ಟರರು ಮುಪ್ಪಾಗಿ ಪೆನಸನ ಪಡೆಯುವಾಗ ಸಾಜ ಆಟರ ಪ್ರಾರಂಭದ ಸಂಬಳ ಪಡೆದರೆ ಪೂರ್ವಜನ್ಮದ ಪುಣ್ಯವೇ ಸರಿ ಸಂಬಳದಲ್ಲಿ ಭೇದವಿರುವಂತೆ ಸಂಖ್ಯೆಯು ಪ್ರಮಾಣದಲ್ಲಿಯೂ ಭೇದವಿರುತ್ತದೆ ಅಲ್ಲಿ ಹಿಂದೂ ಜನರ ಸಂಖ್ಯೆಯು ದೊಡ್ಡದಿರುತ್ತದಷ್ಟೇ? ಪ್ರಮಾಣದ ಹಿಂದೂ ಅಮಲದಾರರ ಸಂಖ್ಯೆಯು ದೊಡ್ಡದಾಗಿ ಯುರೋಪಿಯನ ಸಾರ್ಜಂಟರ ಸಂಖ್ಯೆಯು ಕಡಿಮೆ ಇರತಕ್ಕದ್ದು ಆದರೆ ಇದು ವ್ಯಸ್ತ ಪ್ರಮಾಣದಲ್ಲಿರುತ್ತದೆ ಈ ಪ್ರಮಾಣವು ಯಾವ ನೀತಿ ಮತ್ತು ತರ್ಕಶಾಸ್ತ್ರಕ್ಕೆ ಹತ್ತುವದೆಂಬದನ್ನು ಯಾರು ಹೇಳುವರು?

ಎಲ್ಲ ಸರ್ವಂಟರಂಥ ಹುದ್ದೆಯ ಕೆಲಸಗಳಲ್ಲಿ ಹಿಂದೀ ಮತ್ತು ಯುರೋಪಿಯನರೆಂಬ ಭೇದ ಮಾಡುವದೊಂದೆಡೆಯಲ್ಲಿರಲಿ ಸಾಧಾರಣ ಪ್ರತಿಯ ಕೆಲಸಗಳಲ್ಲಿ ಗಹ ಯುರೋಪಿಯನರ ಸಂಖ್ಯೆಯನ್ನು ಅಕಸ್ಮಾತ್ ಬೆಳಿಸಿ ಹಿಂದೀಜನರ ಸಂಖ್ಯೆ ಸಂಬಳ ಬಡತಿ ಮುಂತಾದವುಗಳನ್ನು ಕಡಿಮೆಪ್ರತಿಯದಾಗಿ ಮಾಡುವದು ಹಿಂದೂ ಮತ್ತು ಯುರೋಪಿಯನರಲ್ಲಿ ಭೇದ ಎದ್ದಿಯನ್ನು ತೋರಿಸುವದಿಲ್ಲೇನು ಮಾತಿಗೆ ಆದರಾಳ ಬಡಿದಂತಾಗುತ್ತದೆ ಬ್ರಾಹ್ಮಣೇತರರು ಜನಸಂಖ್ಯೆಯ ಪ್ರಮಾಣದಿಂದ ತಮಗೆ ಕೆಲಸ ದೊರೆಯಬೇಕೆಂದು ಬ್ರಾಹ್ಮಣರ ಮಟ್ಟಿಗೆ ಆಕ್ರೋಶ ಮಾಡುತ್ತಾರಲ್ಲದೆ ಯುರೋಪಿಯನರಿಗೂ ಆ ಪ್ರಮಾಣದಿಂದ ಕೆಲಸ ಕೊಡಬೇಕೆಂದು ಮನಸು ಕನಸಿನಲ್ಲಿ ಸಹ ತರುವದಿಲ್ಲ ಇದಕ್ಕೆ ಮೊಕ್ಕಗೆ ಕಂತಲ್ಲಿ ಮೋಳ ಕೈಯಿಂದ ಆಗಿಯುವದೆನ್ನುತ್ತಾರೆ

ಪಿಕೆಟಿಂಗಕ್ಕೆ ಕಾಯದೆ ಒಡ್ಡ ಬಂತು !!

—o—

ಮದ್ಯಪಾನವು ಪಸಪ್ಯ ಪದಾರ್ಥವನ್ನು ಸರ್ಪರೀತಿಯಿಂದಲೂ ಅಧಃಪಾತ ತೂಡತ್ತದೆಂದು ಮದ್ಯಪಾನ ಮಾಡಿ ಕಾಲಿವೆಗಳಲ್ಲಿ ಉರುಳಾಡುವಂಥ ದೇಶದವರೇ ತಿಳಿದು ಅದರ ಒಂದು ಹನಿಯು ಯಾವ ನೊಬ್ಬನ ಬಾಯಿಯಲ್ಲಿ ಬೀಳಬಾರದೆಂದು ಕಾಯದೆ ಮಾಡಿದ್ದಾರೆ ಮಹಂಮದೀಯರಾಗಿದ ಮುಸಲಮಾನರಲಿ ಸ್ವೈರೀಲೆ ಪಲ್ಲಾದರೊಂದು ಭಾಗದಲ್ಲಿ ಒಂದು ಹನಿ ಸರೆ ಬಿದ್ದರೆ ಅದನ್ನು ಆ ಕ್ಷಣವೇ ಸಹ ಪೆ ಕೆಂಬ ಕ್ರೂರವಾದ ಶಿಕ್ಷೆ ಹೇಳಿದ್ದರೆ ಹಿಂದೂ ಧರ್ಮಶಾಸ್ತ್ರವು ಸರೆ ಸೆ ವಿಸಟಾರವಂದೇ ಹೇಳುತ್ತದೆ ಹಿಂದುಸ್ಥಾನದಲ್ಲಿ ಮೂರು ಮನೆಯು ಹಳ್ಳಿಯಲ್ಲಿ ಎಪ ಸರೆಯು ಪ್ರವೇಶ ಮಾಡಲಿಕ್ಕೆ ಪಾಶ್ಚಿಮಾತ್ಯರ ಪ್ರತಾಪದ ಫಲವೇ ಸರಿ ಹಿಂದೂ ಮುಸಲ್ಮಾನರು ಸ್ವಜನರಿಗೆ ಸರೆಯ ಸಂಪರ್ಕವಾಗಬಾರದೆಂದ ಹಲವು ಪ್ರಕಾರದ ಪ್ರಯತ್ನಗಳನ್ನು ಮಾಡಿದರು ಲೋಕಮತವನ್ನು ಒಲಿಸಿಕೊಳ್ಳಿರಿ ಒಳಗಿಂದ ಪಿಕೆಟಿಂಗ ನಡೆಸಿದರು ಇದರಿಂದ ಸರೆಯ ಮಾರಾಟ ಕಡಿಮೆಯಾದಿಯನ್ನು ತಿಳಿದಿದ್ದಂದರು ರಾಜದ್ರೋಹ ಎನ್ನುವವರ ದೇಶದಿಂದ ಕಾಯದೆ ಈ ಕಾಯಿದೆಯಿ ಎಲ್ಲ ಗಂಡಸಿಗೆ ದಂಡೆಯಲ್ಲಿ ಆದಲೆಂ ಬಗಿ ಸಿ ವಸ್ತು ಉತ್ಪಾದಿಸು ಸರಕಾರವು ಸ್ವಹಿತ ... ರೀತಿ ವಾಗಿ ... ಪವಾಡಿದ್ದಲ್ಲದೆ ಅದರಲ್ಲಿ ಹುಡುಗರಿಗೇನು ಪಡಲು ಯಾವಾಗಲು ಕಣ್ಣೊಳಗೆ ಎಣ್ಣೆ ಹಾಕಿಕೊಂಡು ಕೂಡ್ರುವದು ಆದರೆ ಅಮೇರಿಕೆಯಂತೆ ಮದ್ಯಪಾನ ಪ್ರತಿಬಂಧದ ಕಾಯದೆ ಮಾಡಲಿಕ್ಕೆ ಮಾತ್ರ ಬೇಡ

ಅಸಹಕಾರ ಚಳವಳಿಯಿಂದ ಆ ಕೆಲಸ ಹಿಂಸಾ ಬಯದ ಪರ್ಯಂತರ ಪಿಕೆಟಿಂಗದ ಕೋಲಾಹಲ ನಡೆಯಿತು ಸರಕಾರದವರು ಇದಕ್ಕೆ ಉತ್ತೇಜನ ಕೊಡುವದರ ಬದಲಾಗಿ ಸರೆಯ ವ್ಯಾಪಾರಸ್ಥರಿಗೆ ಉತ್ತೇಜನ ಬರುವಂತೆ ಅದನ್ನು ಮುರಿದು ಬಗಲು ಪುನಃ ಉತ್ತೇಜನದ ಪಾನ ಮಾಡುವಂತೆ ದಶದಿಕ್ಕುಗಳನ್ನು ನಿರಾತಂಕ ಮಾಡಿಕೊಟ್ಟರು ಆದರೂ ರಾಷ್ಟ್ರೀಯರು ಸರಕಾರದ ಬೆನ್ನು ಬಿಟ್ಟಿಲ್ಲ ಈ ಬಗ್ಗೆ ಕಾಯದೆಗಳನ್ನು ಮಾಡಬೇಕೆಂದು ಅಸೆಂಬ್ಲಿ ಮತ್ತು ಕೌನ್ಸಿಲಗಳಲ್ಲಿ ಠರಾವು ತರುತ್ತಿದ್ದಾರೆ ಅನೇಕ ಮ್ಯುನಿಸಿಪಾಲಿಟಿಗಳು ಹದ್ದಿನೊಳಗಿರುವಲ್ಲಿ ಸಾರಾಯಿಯ ಮಾರಾಟವಾಗಬಾರದೆಂದು ಠರಾವು ಪಾಸು ಮಾಡಿ ಸರಕಾರಕ್ಕೆ ತಿಳಿಸುತ್ತಿರುವವು ಕೆಲವು ಲೋಕಲ್‌ಬೋರ್ಡ ತಮ್ಮ ಪರದ ಕೆಂದಿಯ ಗಿಡಗಳನ್ನು ಲಿಲಾವು ಮಾಡಬಾರದೆಂದು ಠರಾವು ಮಾಡಿರುವವು

ಮುಂಬಯಿಯ ಮ್ಯುನಿಸಿಪಾಲಿಟಿಯ ರಾಷ್ಟ್ರೀಯ ಪಕ್ಷದ ಒಬ್ಬ ಮೆಂಬರರಾದ ಶ್ರೀ ಜಮನಾದಾಸ ಮೇಥಾ ಇವರು ಬಲ್ಲಜನರು ಸಾರಾಯಿ ಅಂಗಡಿಯದಂತೆ ಅವರಲ್ಲಿ ತಿಳುವಳಿಕೆ ಹುಟ್ಟಿಸುವದಕ್ಕಾಗಿ ಪಿಕೆಟಿಂಗ ಮಾಡಬೇಕೆಂದೂ ಇದಕ್ಕಾಗಿ ಹತ್ತು ಸಾವಿರ ರೂಪಾಯಿ ಮಂಜೂರ ಮಾಡಬೇಕೆಂದೂ ಮ್ಯುನಿಸಿಪಾಲಿಟಿಯಲ್ಲಿ ಒಂದು ಠರಾವು ತರುವ ಸೂಚನೆ ಕೊಟ್ಟರು ಇದು ಸ್ಥಾನಿಕ ಸ್ವರಾಜ್ಯದ ಅಧಿಕಾರದ ಹೊರಗಿನ ಪ್ರಶ್ನವು ಕಾಯದೆ ಪಂಡಿತರ ಆಲೋಚನೆ ಕೇಳಬೇಕೆಂದು ಕಮಿಶನರ ಸಾಹೇಬರು ಅಡ್ಡ ಪ್ರಶ್ನೆ ಹಾಕಿದರು ಆ ಪ್ರಕಾರ ಇದು ಬ್ಯಾರಿಸ್ಟರರ ಕಡೆಗೆ ಹೋಗಲು ಅವರು ಇದು ಮ್ಯುನಿಸಿಪಾಲಿಟಿಯ ಕಾಯದೆ ಕ್ಷೇತ್ರದ ಹೊರಗಿನ ಕೆಲಸವೆಂದು ಉತ್ತರ ಕೊಟ್ಟರು ಹೆಬ್ಬಾವಿನಂತೆ ಅಡ್ಡ ಬಂದ ಕಾಯದೆಯಿಂದ ಶ್ರೀ ಜಮುನಾದಾಸರು ಧೈರ್ಯಗುಂದಿಲ್ಲ ನೈತಿಕ ಮತ್ತು ಕಾಯದೆಯ ದೃಷ್ಟಿಯಿಂದ ಹೈಕೋರ್ಟಿನಲ್ಲಿ ಇದರ ನಿಕ್ಕಾಲವಾಗಬೇಕೆಂದು ಇವರು ಈ ತಿಂಗಳಲ್ಲಿ ಠರಾವು ತರತಕ್ಕವರಿದ್ದಾರೆ

ಓಣಿಯ ಕಸಗುಡಿಸುವದು ಕಾಮಿ ಬಳೆಯುವದು ಮಿಣಿಮಿಣಿಯಾದ ಕಂದೀಲಗಳನ್ನು ಹಚ್ಚುವದೇ ಮ್ಯುನಿಸಿಪಾಲಿಟಿಯ ಕರ್ತವ್ಯ ಕರ್ಮವೆಂದು ಒಂದು ಕಾಲದಲ್ಲಿ ತಿಳಿದಿದ್ದರೂ ಪ್ರಸ್ತುತದಲ್ಲಿ ಇವು ಸ್ಥಾನಿಕ ಸ್ವರಾಜ್ಯ ಸಾಧನೆಯ ನಡೆದಿರುತ್ತದೆ ಇಂಥ ಕಾಲದಲ್ಲಿ ಜನರ ನೈತಿಕ ಉನ್ನತಿಯ ಉಪಾಯ ಮಾಡದಿದ್ದರೆ ಮೆಂಬರರು ನಗರಪಿತರೆಂಬ ಬಹುಮಾನದ ಬದಲಾಗಿ ನಗರ ಪ್ರೇತವೆಂಬ ಸಂಜ್ಞೆಗೆ ಗುರಿಯಾಗುವರು

ಶರೆ ಶಿಂದಿಗೆ ಕ್ಷಯರೋಗ

—•—

ಇಪ್ಪತ್ತು ವರ್ಷಗಳಲ್ಲಿ ಅವತಾರ ಸಮಾಪ್ತ!!

—o—

ಪ್ರತಿ ವರ್ಷ ಸರೆ ಶಿಂದಿಯ ಅಂಗಡಿಗಳನ್ನು ಕಡಿಮೆ ಮಾಡುತ್ತಾ ಇಪ್ಪತ್ತು ವರ್ಷಗಳಲ್ಲಿ ಈ ವ್ಯಾಪಾರವನ್ನು ಪೂರಾ ಬಂದು ಮಾಡಬೇಕೆಂಬ ಠರಾವು ಮುಂಬಯಿಯ ಕೌನ್ಸಿಲದಲ್ಲಿ ಪಾಸಾಯಿತು.

ವಾಚಕರಿಗೆ ವಿನಂತಿಯು

ಆಗಷ್ಟ ತಿಂಗಳಲ್ಲಿ ಹೊಸದಾಗಿ ಪ್ರಾರಂಭವಾಗುವಂಥ ಚಂದಾದಾರರ ಹೆಸರಿನಿಂದ ಹಣವನ್ನು ಕಳಿಸುವೆವು ಕೃಪೆಯಿಟ್ಟು ಸ್ವೀಕಾರವ ಮಾಡಿ ಪತ್ರವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ದಿ ಪೂನಾ ಬ್ಯಾಂಕ ಲಿಮಿಟೆಡ್ ಆ್ಯಂಡ ರಿಡ್ಯೂಸಡ್.

ಹುಬ್ಬಳ್ಳಿ ಶಾಖೆ.

ಸೇವ್ಹಿಂಗ್ಸ ಬ್ಯಾಂಕ — ೧೧,೦೦೦ ರೂಪಾಯಿಗಳ ವರೆಗೆ ಒಬ್ಬ ಅಥವಾ ಹೆಚ್ಚು ಜನರ ಹೆಸರಿನಿಂದ ರಕಮು ಇಡಲಿಕ್ಕೆ ಬರುತ್ತದೆ [illegible] ವರ್ಷಕ್ಕೆ ೪॥ ಟಕ್ಕೆ ಪ್ರಕಾರ [illegible] [illegible]

ಚಾಲೂ ಖಾತೆ — [illegible] ವರೆಗೆ [illegible] ರೂಪಾಯಿ [illegible] ಬಡ್ಡಿ [illegible] [illegible]

[illegible] — [illegible] ಬರುತ್ತದೆ

[illegible] — ಬಂಗಾರ ಬೆಳ್ಳಿ ಸರಕಾರಿ ಪ್ರಾಮಿಸರಿ ನೋಟ, ಬಾಂಡು, ಅಥವಾ [illegible] [illegible] ಮಾಡಿದಂಥ [illegible] ಸೇರಿಯ ದರ [illegible] [illegible] ಕೊಡಲ್ಪಡುತ್ತದೆ

ಪ್ರತಿಯೊಂದು ಪ್ರಕಾರದ ಬ್ಯಾಂಕಿನ ಕೆಲಸವು [illegible] ಕೆಲಸವು ಸ್ವಲ್ಪ [illegible] ಹಚ್ಚುವವರು ವಿಶೇಷ ಸಂಗತಿಗಳನ್ನು ಸಮಕ್ಷಮ ಅಥವಾ ಪತ್ರದ್ವಾರೆ ತಿಳಕೊಳ್ಳಬೇಕು

ಮ್ಯಾನೇಜರ ಹುಬ್ಬಳ್ಳಿ

ದಿ ವತನದಾರ ಬ್ಯಾಂಕ ಮತ್ತು ಕಮರ್ಶಿಯಲ ಏಜನ್ಸಿ ಲಿಮಿಟೆಡ್ ಧಾರವಾಡ.

೧೯೧೩ನೇ ಇಸ್ವಿಯ ಇಂಡಿಯನ ಕಂಪನಿ ಆ್ಯಕ್ಟ ಪ್ರಕಾರ ಈ ಕಂಪನಿಯು ರಜಿಸ್ಟರ ಮಾಡಲ್ಪಟ್ಟಿರುತ್ತದೆ.

ಅಧಿಕೃತ ಭಾಂಡವಲ (Authorised Capital) ೩,೮೧,೦೦೦

ಒಂದು ಶೇರಿಗೆ [illegible] ರೂಪಾಯಿ [illegible] ಭಾಂಡವಲದಲ್ಲಿ ೨೦೦೦೦ [illegible] [illegible] ರೂಪಾಯಿ [illegible] ರಿಸಂತೆ ೬೦ ೦೦೦ ರೂಪಾಯಿ [illegible] ೨೦೦ ಶೇರ [illegible] ಮಾರಲಿಕ್ಕೆ [illegible]
[illegible] ಪ್ರಕಾರ—

ಆರ್ಜಿಯ ಸಂಗಡ [illegible]

[illegible]

[illegible] ಕಂಪನಿ [illegible]

ಡಾಯರೆಕ್ಟರರು

(೧) [illegible] ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲರು ಧಾರವಾಡ
(೨) [illegible] ಬಿ ಎ ಎಲ್ ಎಲ್ ಬಿ ಹಾಯಕೋರ್ಟ ವಕೀಲ, ಧಾರವಾಡ
(೩) [illegible] ಕುಲಕರ್ಣಿ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ
(೪) [illegible] ಜಹಗೀರದಾರ [illegible] ಧಾರವಾಡ
(೫) [illegible] ಧಾರವಾಡ
(೬) [illegible] ವತನದಾರ ವ ಮರ್ಚಂಟ, ಧಾರವಾಡ
(೭) [illegible] ಹುಬ್ಬಳ್ಳಿ
(೮) [illegible] ವತನದಾರ ವ ಪಾಟೀಲ, ಗದಗ
(೯) [illegible] ಮ್ಯಾಜಿಸ್ಟ್ರೇಟ ಗದಗ
(೧೦) [illegible] ಗದಗ
(೧೧) [illegible] ದೇಶಪಾಂಡೆ ([illegible])

ಬ್ಯಾಂಕರ್ಸ—

(೧) ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ ವ ಹುಬ್ಬಳ್ಳಿ
(೨) ದಿ ಕರ್ನಾಟಕ ಸೆಂಟ್ರಲ್ ಬ್ಯಾಂಕ ಲಿಮಿಟೆಡ್ ಧಾರವಾಡ

ಮ್ಯಾನೇಜಿಂಗ ಏಜಂಟ್ಸ

ಮೆಸರ್ಸ ದೇಶಪಾಂಡೆ ಬ್ರದರ್ಸ ಧಾರವಾಡ

[illegible] ರಜಿಸ್ಟರ್ಡ ಆಫೀಸ— ಧಾರವಾಡ ಮುನಸಿಪಲ [illegible]

ಈ ಕಂಪನಿಯು [illegible] ಮತ್ತು ಕಂಪನಿಯ ಶರ್ತಿನಿಂದ [illegible] [illegible] ಕಾರ್ಯ [illegible] [illegible] ಶೇರುಗಳನ್ನು [illegible] [illegible] ಮ್ಯಾನೇಜಿಂಗ ಏಜಂಟರಕೂಡ ಪತ್ರವ್ಯವಹಾರ ಮಾಡತಕ್ಕದ್ದು

ಮೆಸರ್ಸ ದೇಶಪಾಂಡೆ ಬ್ರದರ್ಸ, ಧಾರವಾಡ
ಮ್ಯಾನೇಜಿಂಗ ಏಜಂಟ್ಸ

ಬೆಳ್ಳಿಯನ್ನು ಕೊಟ್ಟು ಬಂಗಾರವನ್ನು ಪಡೆಯಬೇಕು.

[illegible] ಎಂಬುದ [illegible] ದಿನದ [illegible] ಬೆಳ್ಳಿ ನಾಣ್ಯವನ್ನು ಕೊಟ್ಟು [೩೨]

ಆತಂಕ ನಿಗ್ರಹ ವಟಿಕೆಗಳು [illegible] ಒಂದು ದೊರಕುವದು

[illegible] ಬಂಗಾರಕ್ಕೆ ಸಮನಾದ [illegible] ಗುಣವನ್ನು [illegible] ಇದು [illegible] ಇದರ ವಿವರವನ್ನು ತಿಳಿಸುವ [illegible] ಒಂದು ಕಾರ್ಡ [illegible]

ವೈದ್ಯಶಾಸ್ತ್ರೀ— ಮಣಿಶಂಕರ ಗೋವಿಂದಜಿ
ಆತಂಕ ನಿಗ್ರಹ ಔಷಧಾಲಯ
[illegible] ಬ್ರಾಡವೇ, ಮದ್ರಾಸ

ಆಯುರ್ವೇದೌಷಧಿಕಾರಖಾನಾ ಚಿತ್ರದುರ್ಗ

[illegible] — ಈ ಗುಳಿಗೆಯು [illegible] ವೀರ್ಯವರ್ಧಕ [illegible] ೧ ರೂ [illegible]
[illegible] ಔಷಧ [illegible] ರೂ [illegible]
[illegible] ಔಷಧ— [illegible] ೧ರೂ
[illegible] ಔಷಧ— [illegible]
[illegible] ಗುಳಿಗೆಗಳು [illegible] ಮತ್ತು [illegible] ಉಪಯುಕ್ತವಾದಂಥವು [illegible] ರೂ
ಸೂಚನೆ— ಒಂದು ಆಣೆ ಟಿಕೇಟು ಕಳಿಸಿದಲ್ಲಿ ನಮ್ಮ ಸುಖಸಂಜೀವನಿಯೆಂಬ ಪುಸ್ತಕವನ್ನು ಫುಕಟಿಯಾಗಿ ಕಳಿಸುವೆವು

[illegible] ಚಿಕ್ಕೋಡಿ ಜಿಲ್ಲಾ ಬೆಳಗಾವಿ

ಶ್ರೀ ಭೂತನಾಥೇಶ್ವರ ಆಯುರ್ವೇದೌಷಧಾಲಯ ಸನಪೇಲ

ಈ [illegible] ಎಲ್ಲ ಬಗೆಯ ಔಷಧಗಳು [illegible] ಔಷಧ [illegible] ಮತ್ತು [illegible] ಗುಣ [illegible] ಎಲ್ಲ [illegible] ಲೇಹ್ಯಗಳು, ಆಸವಾರಿಷ್ಟಗಳು, [illegible] ಎಣ್ಣೆ [illegible] ಈ ಔಷಧಗಳ [illegible] ಈ ಔಷಧಗಳನ್ನು [illegible]

ಏಜಂಟ [illegible] ರಾಮಚಂದ್ರ [illegible] ಧಾರವಾಡ

[illegible] ಶ್ರೀ [illegible] ಪ್ರಯಾಸದಿಂದ [illegible] ಕೆಳಗಿನ ವಿಳಾಸಕ್ಕೆ [illegible]

[illegible] ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಶಾಖಾ— ಹುಬ್ಬಳ್ಳಿ

ವ್ಯವಹಾರದ ವೇಳೆ ಮುಂಜಾನೆ ೧೧ ರಿಂದ ಸಾಯಂಕಾಲ ೩-೩೦ ರವರೆಗೆ ಶನಿವಾರ ೧೦ ರಿಂದ ಮಧ್ಯಾಹ್ನದ ೧ ರವರೆಗೆ

[illegible] ವ್ಯವಹಾರಗಳು

ಚಾಲೂ ಖಾತೆಗಳು [illegible]
ಮುದ್ದತ ಠೇವುಗಳು [illegible]
ಸೇವ್ಹಿಂಗ್ಸ ಬ್ಯಾಂಕ [illegible]

ಸರಕಾರೀ ಹಾಗೂ [illegible] ಕಾಗದಗಳು

ಸುರಕ್ಷಿತ [illegible] ಬರುವ [illegible] ಕೊಡಲ್ಪಡುವ [illegible] ಬರುವ [illegible] ದರ [illegible] ದೊರೆಯುವವು.

[illegible]
ತಾ [illegible] ಏಜಂಟ

ಕುಲಕರ್ಣಿ ಸನ್ಸ ಕಂಪನಿ, ಧಾರವಾಡ ಇವರ ನೂತನದಾರ ರೆಂಟೆಗಳು



ಈ ರೆಂಟೆಯ ವಿಶೇಷ ಗುಣಗಳೆಂದರೆ—

[illegible] ಎತ್ತಿಗೆ ಅತಿ ಹಗುರವಾದದ್ದು
೨ [illegible] ಇರುವದರಿಂದ ಎತ್ತಿನ [illegible] ಆಗುವದಿಲ್ಲ
೩ ರೆಂಟೆಯು [illegible] ಏನೂ [illegible] ವಾಗುವದಿಲ್ಲ
[illegible] ಮತ್ತು [illegible] ಅಂತರವಿರುವದರಿಂದ [illegible]

ಇವರ [illegible] ಪ್ರಕಾರದ [illegible] ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ [illegible] ಬೇಕು ೧-೧-೩೩ ಕುಲಕರ್ಣಿ ಸನ್ಸ ಕಂಪನಿ ಕಿಲ್ಲೆ ಧಾರವಾಡ

ಇಂಗ್ಲಿಷ ಡಾಕ್ಟರರಿಂದ [illegible]

ಸುಖಾನಂದ [ಎಂಬ [illegible]]



ಈ ಪ್ರಪಂಚದಲ್ಲಿ [illegible] ಅಸಾಧ್ಯ [illegible] ರೋಗಗಳನ್ನು [illegible] ವ್ಯಾಧಿಯನ್ನು [illegible] ಇಂಗ್ಲಿಷ ಡಾಕ್ಟರರು [illegible] ವ್ಯಾಧಿಗಳನ್ನು [illegible] ಇದರ ಬೆಲೆ [illegible] ರೂ ೧-೪-೦

ವಿಳಾಸ — ಮಹಾರಾಷ್ಟ್ರ ಟ್ರೇಡಿಂಗ್ ಕಂಪನಿ
[illegible]

START

START

MICROFILMED BY

KARNATAKA STATE

ARCHIVES

1984-85

MICROFILMED BY
KARNATAKA STATE
ARCHIVES
1984-85

CONTINUATION OF

PROCEEDINGS OF

MYSORE PROVINCE

NOVEMBER 1876

From page No 2 OF PART - I

DEPT OF REVENUE, Agriculture &

COMMERCE

ಬ್ರಾಹ್ಮಣ ಲಿಂಗಾಯತ ಪ್ರಚಂಡ ಐಕ್ಯ

ಅಥಣಿಯಲ್ಲಿ ವ್ಯಾಸನತೋಳಿನ ವ್ಯಾಜ್ಯ ತೀರಿತು

ಪಂಚರ ತೀರ್ಪು

(ವಿಜಯದ ದೆಸೆಯಿಂದ ಬಂದ ಸ್ಪೇಶಲ ಲೇಖ)

ಅಥಣಿಯಲ್ಲಿ ಲಿಂಗಾಯತ ಮತ್ತು ಬ್ರಾಹ್ಮಣರ ನಡುವೆ ವ್ಯಾಸನ ತೋಳಿನ ಮೆರವಣಿಗೆಯ ಸಂಬಂಧವಾಗಿ ಅನೇಕ ವರ್ಷಗಳಿಂದ ವಾದ ನಡೆದದೆ. ಈ ವಾದದ ಖಟ್ಲೆಯು ಬೆಳಗಾವಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿಯೂ ನಡೆದಿದೆ. ಈ ನ್ಯಾಯದ ದೆಸೆಯಿಂದ ಎರಡೂ ಸಮಾಜಗಳ ನಡುವೆ ವಿತುಷ್ಟ ಬೆಳೆದು, ಎರಡೂ ಸಮಾಜಗಳ ಹಾನಿಯಾಗುತ್ತಿರುವದು. ಇದರ ಪರಿಣಾಮವು ಎರಡೂ ಪಕ್ಷಗಳ ಮುಂದಾಳುಗಳ ಮೇಲಾಗಿ, ಇವರು ಈ ವಾದವನ್ನು ನಮ್ಮ ನಮ್ಮೊಳಗೆ ರಾಜಿಯಿಂದ ತೀರಿಸಬೇಕೆಂದು ನಮ್ಮ ಕಡೆಗಿಂದರೆ ಕೆಳಗೆ ಸಹೀ ಮಾಡುವ ಪಂಚರ ಕಡೆಗೆ ಬಾಯಿ ಮಾತಿನಿಂದ ಇವತ್ತ ತಾರೀಖು ೧೯-೯-೨೨ನೇ ದಿವಸ ಒಪ್ಪಿಸಿದರು. ನಾವು ಎರಡೂ ಬಣಗಳ ಮುಂದಾಳುಗಳನ್ನು ಕರಿಸಿಕೊಂಡು, ಸಂಗತಿ ಕೇಳಿಕೊಂಡೆವು. ನಾವು ಈ ವ್ಯಾಜ್ಯದ ನಿರ್ಣಯವನ್ನು ಕೆಳಗೆ ಬರೆದಂತೆ ಹೇಳುವಾಗ ಎರಡೂ ಸಮಾಜಗಳಲ್ಲಿರುವ ವೈಮನಸ್ಸು ದೂರಾಗಿ, ಪರಸ್ಪರ ಪ್ರೇಮವೃದ್ಧಿಯಾಗಬೇಕೆಂಬ ಉದ್ದೇಶವನ್ನು ಮುಂದಿಟ್ಟುಕೊಂಡಿರುತ್ತೇವೆ.

೧ ವ್ಯಾಸನತೋಳಿನ ಮೆರವಣಿಗೆಯನ್ನು ತೆಗೆಯುವಾಗ ಶ್ರೀ ವ್ಯಾಸರ ಅವಮಾನ ಮಾಡುವ ಬುದ್ಧಿ ಅಥವಾ ಉದ್ದೇಶವು ತುಸುವಾದರೂ ಇರದೆ, ಶ್ರೀ ವ್ಯಾಸರು ಯಾವ ಕಯ್ಯಿಂದ ಶೈವ ಪುರಾಣವನ್ನು ಬರೆದರೋ? ಆ ಕಯ್ಯಿಯ ಗೌರವ ಮಾಡುವದಕ್ಕಾಗಿಯೇ ವ್ಯಾಸನ ತೋಳಿನ ಮೆರವಣಿಗೆಯನ್ನು ತೆಗೆಯುತ್ತೇವೆ. ಎಂಬ ಪ್ರಕಾರದ ಜಾಹೀರನಾಮೆಯನ್ನು ಅಥಣಿಯ ಲಿಂಗಾಯತ ಪ್ರಮುಖರು ಆಶ್ವಿಜ ಶುದ್ಧ ಪೌರ್ಣಿಮೆಯೊಳಗಾಗಿ ತಮ್ಮ ಸಹಿಯಿಂದ ಪ್ರಸಿದ್ಧ ಮಾಡಬೇಕು.

೨ ಲಿಂಗಾಯತರು ತೆಗೆಯುವ ಈ ಮೆರವಣಿಗೆಯಲ್ಲಿ— ಮೆರವಣಿಗೆಯ ಉದ್ದೇಶವನ್ನು ಧ್ಯಾನಕ್ಕೆ ತಂದು. ಈ ವರೆಗಾದ ತಪ್ಪು ತಿಳುವಳಿಕೆಯನ್ನು ಬ್ರಾಹ್ಮಣರು ಬಿಟ್ಟುಕೊಟ್ಟು, ಮೆರವಣಿಗೆಗೆ ವಿರೋಧ ಮಾಡಬಾರದು.

೩ ಈ ಮೆರವಣಿಗೆಯು ಶಕ್ಯವಾದಷ್ಟು ನಿರಾತಂಕವಾಗಿ ನಡೆಯತಕ್ಕದ್ದು. ಯಾರಿಗೂ ತಕರಾರ ಮಾಡಲಿಕ್ಕೂ, ಮಾಡುವವಕ್ಕೂ ನೆವನ ಸಿಗಬಾರದೆಂಬ ಉದ್ದೇಶದಿಂದ, ಇದನ್ನು ವರ್ಷದೊಳಗೆ ಎರಡು ಸಾರೆ ಅಂದರೆ— ಮಾಘಮಾಸದಲ್ಲಿ ಮಾಘ ಶಿವರಾತ್ರಿಯ ದಿವಸ ಹೊರಡುವ ಮೆರವಣಿಗೆಯಲ್ಲಿ ನಂದೀ ಎತ್ತಿಗೆ ಒಮ್ಮೆ ಮತ್ತು ಚೈತ್ರವದ್ಯ ಪ್ರತಿಪದೆಯ ದಿವಸ ಹೊರಡುವ ಶ್ರೀ ಶಿವಯೋಗಿ ಮುರಗೇಂದ್ರ ಸ್ವಾಮಿಯವರ ಮೆರವಣಿಗೆಯಲ್ಲಿರುವ ನಂದೀ ವಾಹನಕ್ಕೂ ವ್ಯಾಸನತೋಳನ್ನು ಕಟ್ಟಿ ಮೆರಿಸತಕ್ಕದ್ದು. ಮತ್ತು ಚಿತ್ರಕಲದುರ್ಗದ ಜಗದ್ಗುರು ಶ್ರೀಮುರಘಾ ರಾಜೇಂದ್ರ ಸ್ವಾಮಿಗಳು ಬಂದಾಗ ಅವರ ಮೆರವಣಿಗೆಯ ಪ್ರಸಂಗದಲ್ಲೊಮ್ಮೆ ವ್ಯಾಸನ ತೋಳನ್ನು ಮೆರಿಸತಕ್ಕದ್ದು. ಇದರ ವ್ಯತಿರಿಕ್ತ ಇನ್ನಾವಾಗಲೂ ಮೆರಿಸತಕ್ಕದ್ದಲ್ಲ. ಎರಡೂ ಸಮಾಜಗಳ ವಿತುಷ್ಟವು ಹೋಗಬೇಕೆಂದು ಈ ಸಾರೆ ಮಾತ್ರ ಆಶ್ವಿಜ ಶುದ್ಧ ಪೌರ್ಣಿಮೆಯ ದಿವಸ ಮೆರವಣಿಗೆ ತೆಗೆಯಬೇಕು.

೪ ಮೂರನೇ ಕಲಮಿನಲ್ಲಿ ಹೇಳಿದಂತೆ ತೆಗೆಯುವ ಮೆರವಣಿಗೆಯನ್ನು ಬೆಳಗಾವಿಯ ಕಲೆಕ್ಟರರಾದ ಮಿ. ಮ್ಯಾಗ್ರೆಗಾರ ಸಾಹೇಬರು ಗೊತ್ತು ಪಡಿಸಿದಂಥ ಕ್ರಮದಂತೆಯೇ ತೆಗೆಯತಕ್ಕದ್ದು. ಎರಡನೇ ಮಾರ್ಗವನ್ನು ಅಂಗೀಕರಿಸತಕ್ಕದ್ದಲ್ಲ.

೫ ಲಿಂಗಾಯತ ಜನರು ಸಹಜವಾಗಿ ಕಣ್ಣಿಗೆ ಕಾಣಿಸುವ ಹಾಗೆ ಮನೆ, ಅಂಗಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಸನತೋಳನ್ನು ತೆಗೆಯಬಾರದು.

ಈ ಪ್ರಕಾರ ಎರಡೂ ಸಮಾಜದವರು ನಡೆಯಬೇಕೆಂದು ನಾವು ತೀರ್ಮಾನಿಸುತ್ತೇವೆ. ತಾ. ೧೯-೯ ೧೯೨೨ನೇ ಇಸವಿ.

ಸಹಿ ಶ್ರೀನಿವಾಸರಾವ ಕೌಜಲಗಿ
,, ಗಂಗಾಧರ ಬಾಳಕೃಷ್ಣ ದೇಶಪಾಂಡೆ
,, ನೀಲಕಂಠಪ್ಪಾ ರಂಗಪ್ಪಾ ಸುಗಂಧಿ
,, ಚನ್ನಬಸಪ್ಪಾ ಶಿವಪ್ರಭುಪ್ಪಾ ಕುರಣೆ

ವ್ಯಾಸನ ತೋಳಿನ
ಪಂಚ ಕಮೀಟಿಯ ಸಾದ್ಯಂತ ಸಂಗತಿಯು.

ತಾರೀಖು ೧೯-೯-೨೨ ನೇ ದಿವಸ ಅಥಣಿಯಲ್ಲಿ ವ್ಯಾಸನತೋಳಿನ ಜಗಳವನ್ನು ತೀರಿಸಬೇಕೆಂದು ಗೊತ್ತಾದ ಮೇರೆಗೆ ವಿಜಾಪೂರದಿಂದ ಶ್ರೀ ಶ್ರೀನಿವಾಸರಾವ ಕೌಜಲಗಿ, ಲಿಂಗಾಯತ ಸಮಾಜದ ಸದ್ಗೃಹಸ್ಥರಾದ ಶ್ರೀಯುತ ಚನ್ನಮಲ್ಲಪ್ಪಾ ಕುರ್ಣಿ ಮತ್ತು ನೀಲಕಂಠಪ್ಪಾ ಸುಗಂಧಿ ಮತ್ತು ಅಕಸ್ಮಾತ್ತಾಗಿ ಧಾರವಾಡದಿಂದ ಬಂದಿದ್ದ ಶ್ರೀ ಗೋಪಾಳರಾವ ದೇಶಪಾಂಡೆ ಈ ನಾಲ್ವರು ಮೋಟಾರದಿಂದ ಬಂದರು. ಬೆಳಗಾವಿಯಿಂದ ಶ್ರೀ. ಗಂಗಾಧರರಾವ ದೇಶಪಾಂಡೆ ಮತ್ತು ಶ್ರೀ. ಯಾಳಗಿಯವರು ಬಂದರು. ಬ್ರಾಹ್ಮಣರು ಶ್ರೀ. ನಾರಾಯಣರಾವ ಬಾತಾರ ಇವರ ಮನೆಯಲ್ಲಿಳಿದುಕೊಂಡರು. ಲಿಂಗಾಯತ ಗೃಹಸ್ಥರು ಪ್ರಮುಖ ಲಿಂಗಾಯತರನ್ನು ಕಾಣಲಿಕ್ಕೆ ಹೋದರು. ಬ್ರಾಹ್ಮಣ ಜನರ ಅಭಿಪ್ರಾಯ ತಿಳಕೊಳ್ಳುವದಕ್ಕಾಗಿ ಮುಖ್ಯ ಮುಖ್ಯ ಜನರನ್ನು ಕರಿಸಿತು. ತುಸು ಹೊತ್ತಿನಲ್ಲಿ ಹಿರಿಯರೂ, ಪ್ರಮುಖರೂ, ತರುಣಜನರೂ ಇವರಿಂದ ಮನೆಯು ತುಂಬಿತು. ಉಭಯ ಪಕ್ಷಗಳ ಭಾಷಣದಿಂದ ಕೆಲಸ್ವಾರ್ಥಪರಾಯಣ ಜನರು ತಮ್ಮ ಸ್ವಂತ ಹಿತ ಸಾಧಿಸುವದಕ್ಕಾಗಿ ಎರಡೂ ಸಮಾಜಗಳಲ್ಲಿ ಜಗಳ ಹಚ್ಚಿದ್ದರಿಂದ, ವ್ಯಕ್ತಿವಿಷಯಕ ತಂಟೆಗಳು ಸಾಮಾಜಿಕ ಸ್ವರೂಪಕ್ಕೆ ಬಂದಿವೆ ೧೦-೧೨ ಖಟ್ಲೆಗಳಾಗಿದ್ದು, ಪ್ರಮುಖ ಬ್ರಾಹ್ಮಣರೂ, ಲಿಂಗಾಯತರೂ ಒಬ್ಬರನ್ನೊಬ್ಬರು ಆರೋಪಿತರಾಗಿ ಮಾಡಿದ್ದಾರೆ. ಎಷ್ಟೋ ಜನ ವೃದ್ಧರ ಮೇಲೆ ವೃಥಾ ಆರೋಪ ಬಂದು, ಖಟ್ಲೆಯಾದಂತೆ ಕಂಡು ಬಂತು.

ಬ್ರಾಹ್ಮಣ ಸಮಾಜದ ಮುಖ್ಯರೂ, ವೃದ್ಧಗೃಹಸ್ಥರೂ ಆದಂಥ ಶ್ರೀ. ಅಣ್ಣಾರಾವ ಕೊಕಟನೂರ ಇವರು ತಮ್ಮ ತಕರಾರುಗಳನ್ನು ಮತ್ತು ತಮಗೆ ಆದಂಥ ಅಡಚಣೆಗಳನ್ನು ಹೇಳಿ, ಯಾವ, ಯಾವ ಕಾರಣಗಳಿಂದ ಇವತ್ತಿನ ಸ್ಥಿತಿಯು ಪ್ರಾಪ್ತವಾಯಿತೆಂಬದನ್ನು ವಿಸ್ತರಿಸಿ ಹೇಳಿ, ಪಂಚರ ಮುಖಾಂತರವಾಗಿ ನ್ಯಾಯ ತೀರಿಸಕೊಳ್ಳಲಿಕ್ಕೆ ಒಪ್ಪಿದರು. ಆ ಮೇಲೆ ಲಿಂಗಾಯತ ಬಂಧುಗಳೂ ಇದೇ ಪ್ರಕಾರ ತಮ್ಮ ಸಂಗತಿಗಳನ್ನು ಹೇಳಿದರು. ತರುವಾಯ ಅಂದು ಸಾಯಂಕಾಲದಲ್ಲಿ ಶ್ರೀ. ಅಣ್ಣಾರಾವ ಕೊಕಟನೂರ ಇವರ ಮನೆಯಲ್ಲಿ ಉಭಯ ಕುಲಗಳ ಸಭೆಯು ಕೂಡಿತು. ಪಂಚಾಯತಿಯಲ್ಲಿ ಧಾರವಾಡದಿಂದ ಬಂದ ಶ್ರೀ. ಗೋಪಾಳರಾವ ದೇಶಪಾಂಡೆಯವರೂ ಇರಬೇಕೆಂದು ಸೂಚಿಸಲ್ಪಟ್ಟಿತು. ಆದರೆ ಅವರು ಇಂಥ ಮಾನವು ತಮಗೆ ಬೇಡೆಂದು ಹೇಳಿದರು. ಎರಡೂ ಸಮಾಜದವರು ಒಬ್ಬರ ವಿರುದ್ಧ ಒಬ್ಬರು